
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಮಾಜಿ ರಾಷ್ಟ್ರಪತಿ

ಪ್ರಣವ್ ಮುಖರ್ಜಿ ಇನ್ನಿಲ್ಲ



ಸಂಪುಟ 14 | ಸಂಚಿಕೆ 37 | ಸೆಪ್ಟೆಂಬರ್ 7–13, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com



ಜಿ.ಎಸ್.ಟಿ ಪರಿಹಾರ: ರಾಜ್ಯಗಳ ಹಕ್ಕುಗಳ ಭಂಡ ಉಲ್ಲಂಘನೆ



ಈಗೇಕೆ ಶೇರು ವಿಕ್ರಯ?



ಕ್ಯೂಬಾ ವೈದ್ಯರಿಗೆ ನೊಬೆಲ್ ಸಿಗಲಿ

ಒಳ ಮೀಸಲಾತಿ ಜಾರಿಯಾಗಲಿ ಸಮತ್ವಕ್ಕಾಗಿ – ಮತ ಬೇಟೆಗಲ್ಲ



ಜಿಡಿಪಿಯಲ್ಲಿ 24ಶೇ. ಅಭೂತಪೂರ್ವ ಕುಸಿತ –ಭಾರತೀಯ ಅರ್ಥವ್ಯವಸ್ಥೆ ತೀವ್ರ ಹಿಂಜರಿತದಲ್ಲಿ

"ಸಾರ್ವಜನಿಕ ಖರ್ಚುಗಳನ್ನು ಏರಿಸಿ, ಆಂತರಿಕ ಬೇಡಿಕೆಯನ್ನು ಪುನಶ್ಚೇತನಗೊಳಿಸಿ"

ಸರಕಾರ ಆಗಸ್ಟ್ 31ರಂದು ಪ್ರಕಟಿಸಿರುವ ದತ್ತಾಂಶಗಳು ಭಾರತದ ಅರ್ಥವ್ಯವಸ್ಥೆ ಸಂಪೂರ್ಣವಾಗಿ ತತ್ತರಗೊಂಡಿರುವುದನ್ನು ತೋರಿಸುತ್ತವೆ. ಇದು ಕೊವಿಡ್–19 ಮಹಾಸೋಂಕಿನ ಮೊದಲೇ ಮೂಡಿ ಬಂದಿತ್ತು, ಜಿಡಿಪಿ ಬೆಳವಣಿಗೆ ದರದಲ್ಲಿ 24ಶೇ. ಅವನತಿ ಒಂದು ವಿದ್ಯಮಾನವೇ ಸರಿ, ಇದು ಅಭೂತಪೂರ್ವ ಸಂಗತಿ. ನೋಟುರದ್ದತಿ, ಜಿಎಸ್‍ಟಿ ಜಾರಿ ಮತ್ತು ಇದ್ದಕ್ಕಿದ್ದಂತೆ, ಯೋಜನೆಯೇನೂ ಇಲ್ಲದೆ, ಸಿದ್ಧತೆಯೇನೂ ಇಲ್ಲದೆ ಹೇರಿದ ಲಾಕ್‍ಡೌನ್ ಎಲ್ಲವೂ ಭಾರತೀಯ ಅರ್ಥವ್ಯವಸ್ಥೆ ಧ್ವಂಸಗೊಳ್ಳುವಂತೆ ಮಾಡಿವೆ ಎಂದು ಸಿಪಿಐ(ಎಂ) ಪೊಲಿಟ್‍ಬ್ಯುರೊ ಹೇಳಿದೆ.

ಇವೆಲ್ಲಕ್ಕೂ ಮೂಲಕಾರಣ ಆಂತರಿಕ ಬೇಡಿಕೆಯಲ್ಲಿ ಬೃಹತ್ ಪ್ರಮಾಣದ ಇಳಿಕೆ, ಅಂದರೆ ನಮ್ಮ ಜನಗಳ ಕೈಗಳಲ್ಲಿನ ಖರೀದಿ ಸಾಮರ್ಥ್ಯ ತೀಕ್ಷ್ಣವಾಗಿ ಕುಗ್ಗಿರುವುದು. ಈ ಪ್ರಶ್ನೆಯನ್ನು ಎದುರಿಸಲು, ನಮ್ಮ ಬಹು ಅಗತ್ಯವಾದ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಿ ಮತ್ತು ಸಾರ್ವತ್ರಿಕವಾಗಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸಿ, ಆ ಮೂಲಕ ನಮ್ಮ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಬಲಪಡಿಸಬಹುದಿತ್ತು. ಆದರೆ ಅದರ ಬದಲು, ಮೋದಿ ಸರಕಾರ, ಖಾಸಗಿ ಕಾರ್ಪೊರೇಟ್‍ಗಳಿಗೆ ಹೂಡಿಕೆಗಳಿಗೆ ಹೆಚ್ಚು ನಿಧಿಗಳನ್ನು ಲಭ್ಯಗೊಳಿಸುವ, ಅವರಿಗೆ ಹೆಚ್ಚಿನ ತೆರಿಗೆ ರಿಯಾಯ್ತಿಗಳನ್ನು ನೀಡುವ, ಮತ್ತು ರಾಷ್ಟ್ರೀಯ ಆಸ್ತಿಗಳನ್ನು ಲೂಟಿ ಹೊಡೆಯಲು ಅವಕಾಶ ಒದಗಿಸುವ ನವ–ಉದಾರವಾದಿ ದಿಕ್ಪಥದ ಮೇಲೆಯೇ ಗಮನ ಕೇಂದ್ರೀಕರಿಸಿದೆ.

ಖಾಸಗಿ ಹೂಡಿಕೆಗಳಿಗೆ ಎಷ್ಟೇ ಉತ್ತೇಜನೆಗಳನ್ನು ಕೊಟ್ಟರೂ ಅದು ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲಾರದು. ಏಕೆಂದರೆ ಇಂತಹ ಹೂಡಿಕೆಗಳಿಂದ ಉತ್ಪಾದಿಸಿದ್ದು ಮಾರುಕಟ್ಟೆಯಲ್ಲಿ ಮಾರಾಟ ಹೊಂದಬೇಕಾಗುತ್ತದೆ. ಅದನ್ನು, ಜಾಗತಿಕವಾಗಿಯೂ, ದೇಶದ ಒಳಗೂ ಖರೀದಿಸುವವರಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ , ಈ ಕಾರಣದಿಂದಲೇ ಸಿಪಿಐ(ಎಂ) ಸರಕಾರದ ಖರ್ಚುಗಳನ್ನು ಹೆಚ್ಚಿಸಬೇಕು ಎಂದು ಈ ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕುತ್ತ ಬರುತ್ತಿದೆ ಎಂದು ನೆನಪಿಸಿದೆ. ಆದರೆ, ಸರಕಾರ ಇಂತಹ ಖರ್ಚುಗಳಿಗೆ ಮಿತಿ ಹಾಕುವ ಧೋರಣೆಗಳನ್ನೇ ಅನುಸರಿಸುತ್ತ ಬರುತ್ತಿದೆ. ಇದು ಆರ್ಥಿಕ ಹಿಂಜರಿತದಿಂದಾಗಿ ಸರಕಾರೀ ರೆವಿನ್ಯೂಗಳನ್ನು ತೀವ್ರವಾಗಿ ಕಡಿತಗೊಳಿಸಿದೆ.

ಇಂತಹ ಸನ್ನಿವೇಶದಲ್ಲಿ ಏನಾದರೂ ಅರ್ಥಪೂರ್ಣವಾದ ಆರ್ಥಿಕ ಪುನಶ್ಚೇತನ ಕಾಣಬೇಕಾದರೆ, ಸಾರ್ವಜನಿಕ ಹೂಡಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸಬೇಕಾಗಿದೆ, ಅದರ ಜೊತೆಗೆ ನಗದು ವರ್ಗಾವಣೆ ಮತ್ತು ಉಚಿತ ಆಹಾರ ಪೂರೈಕೆ ಮಾಡಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಪುನರುಚ್ಚರಿಸಿದೆ, ಈ ಮೂಲಕ ಮಾತ್ರವೇ ಜನಗಳಿಗೆ ತುಸು ಪರಿಹಾರ ಮತ್ತು ಜೀವನೋಪಾಯಗಳು ಸಿಗಲು ಸಾಧ್ಯ ಎಂದು ಅದು ಹೇಳಿದೆ.



ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ನಿಧನ

ಸಿಪಿಐ(ಎಂ) ಪೊಲಿಟ್ ಬ್ಯುರೋ ಸಂತಾಪ

ಭಾರತದ ಮಾಜಿ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ನಿಧನಕ್ಕೆ ಸಿಪಿಐ(ಎಂ) ಪೊಲಿಟ್‍ಬ್ಯುರೋ ತನ್ನ ಆಳವಾದ ಸಂತಾಪವನ್ನು ವ್ಯಕ್ತಪಡಿಸಿದೆ.

ಪ್ರಣಬ್ ಮುಖರ್ಜಿ ಭಾರತದ ಒಬ್ಬ ಪ್ರಮುಖ ರಾಜಕೀಯ ವ್ಯಕ್ತಿಯಾಗಿದ್ದರು. ಅವರು ರಾಷ್ಟ್ರಪತಿಗಳಾಗಿ ಚುನಾಯಿತರಾಗುವ ಮೊದಲು ದಶಕಗಳ ಕಾಲ ವಿವಿಧ ಹುದ್ದೆಗಳಲ್ಲಿ ಕೊಡುಗೆಗಳನ್ನು ನೀಡಿದರು, ಒಬ್ಬ ಚುನಾಯಿತ ಸಂಸದ್ ಸದಸ್ಯನಾಗಿ, ಕೇಂದ್ರದಲ್ಲಿನ ಹಲವು ಸರಕಾರಗಳಲ್ಲಿ ಹಿರಿಯ ಮಂತ್ರಿಯಾಗಿ ಸೇವೆ ಸಲ್ಲಿಸಿದರು.

ಅವರು ಎಲ್ಲ ರಾಜಕೀಯ ಪಕ್ಷಗಳೊಡನೆ ಉತ್ತಮ ಬಾಂಧವ್ಯ ಹೊಂದಿದ್ದರು, ಹಲವು ಬಾರಿ ತಾವು ಪ್ರತಿನಿಧಿಸುವ ಸರ್ಕಾರಗಳ ಪರವಾಗಿ ಪ್ರಮುಖ ಮಧ್ಯಸ್ಥಿಕೆದಾರನ ಪಾತ್ರವನ್ನು ವಹಿಸಿದರು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೋ ಅವರ ಪುತ್ರ ಅಭಿಜಿತ್, ಪುತ್ರಿ ಶರ್ಮಿಷ್ಠಾ ಮತ್ತು ಕುಟುಂಬದ ಇತರ ಸದಸ್ಯರಿಗೆ ಪಕ್ಷದ ಆಳವಾದ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಆರೋಗ್ಯ ದತ್ತಾಂಶಗಳ ನಿರ್ವಹಣೆ ಕುರಿತ ನೀತಿಯನ್ನು ಅಂತಿಮಗೊಳಿಸುವ ತರಾತುರಿಯಲ್ಲಿ ಸರಕಾರ:

ಸಂಸತ್ತಿನಲ್ಲಿ ಚರ್ಚೆಯಿಲ್ಲದೆ ಅಂತಿಮಗೊಳಿಸಬಾರದು: ಪ್ರಧಾನ ಮಂತ್ರಿಗಳಿಗೆ ಯೆಚುರಿ ಪತ್ರ

ಈ ಸ್ವಾತಂತ್ರ್ಯ ದಿನದಂದು ಪ್ರಧಾನ ಮಂತ್ರಿಗಳು ದೇಶದಲ್ಲಿ ಕೊವಿ??? ಅನುಭವಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಉತ್ತಮ ಪಡಿಸುವ ಬಗ್ಗೆ ಹೇಳುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅವರು ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್'(ಎನ್.ಡಿ.ಹೆಚ್.ಎಂ.) ಎಂಬುದನ್ನು ಪ್ರಕಟಿಸಿದರಷ್ಟೇ. ಕೇಂದ್ರ ಸರಕಾರ ಈಗಾಗಲೇ ರೂಪಿಸಿಕೊಂಡಿರುವ 'ಆರೋಗ್ಯ ದತ್ತಾಂಶ ನಿರ್ವಹಣಾ ನೀತಿ'(ಹೆಚ್.ಡಿ.ಎಂ.ಪಿ) ಈ ಮಿಷನ್‍ನ ಒಂದು ಭಾಗವೆನ್ನಲಾಗಿದೆ. ಅದನ್ನು ಕುರಿತಂತೆ ಸಪ್ಟಂಬರ್ 3ರ ಒಳಗೆ ಟಿಪ್ಪಣಿಗಳನ್ನು ಎಂದೂ ಸರಕಾರದ ಪ್ರಕಟಣೆ ಹೇಳುತ್ತದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಒದಗಿಸುವ ಬಗ್ಗೆ ಏನೂ ಹೇಳದೆ ಕೇವಲ ಆ ಕುರಿತ ದತ್ತಾಂಶಗಳ ಈ ಬಗ್ಗೆ ಇಷ್ಟೊಂದು ಧಾವಂತವನ್ನು ಏಕೆ ತೋರಿಸುತ್ತಿದೆ ಎಂಬ ಪ್ರಶ್ನೆ ಹಲವರಲ್ಲಿ ಸಹಜವಾಗಿ ಎದ್ದಿದೆ. ಅದರಲ್ಲೂ ವ್ಯೆಯಕ್ತಿಕ ದತ್ತಾಂಶಗಳ ರಕ್ಷಣೆ ಕುರಿತು ಒಂದು ಮಸೂದೆ, 'ವ್ಯೆಯಕ್ತಿಕ ದತ್ತಾಂಶ ರಕ್ಷಣಾ' (ಪಿಡಿಪಿ) ಮಸೂದೆ 2019 ಇನ್ನೂ ಸಂಸತ್ತಿನ ಮುಂದೆ ಅಂಗೀಕಾರಕ್ಕೆ ಕಾದಿರುವಾಗ, ಮತ್ತು ಸಪ್ಟಂಬರ್ 14ರಿಂದ ಸಂಸತ್ತಿನ ಅಧಿವೇಶನವನ್ನು ಕರೆದಿರುವಾಗ, ಹೆಚ್.ಡಿ.ಎಂ.ಪಿ. ಮತ್ತು ಎನ್.ಡಿ.ಹೆಚ್.ಎಂ.ನ್ನು ಅಂತಿಮಗೊಳಿಸುವ ತರಾತುರಿ ಏಕೆ ಎಂಬ ಪ್ರಶ್ನೆಯೂ ಎದ್ದಿದೆ.

ಆದ್ದರಿಂದ ಇಲ್ಲಿ ವ್ಯೆಯಕ್ತಿಕ ದತ್ತಾಂಶಗಳ ರಕ್ಷಣೆಯ ಪ್ರಶ್ನೆ ಅಡಗಿರುವಾಗ, ಮತ್ತು ಈ ಪ್ರಶ್ನೆ ಇನ್ನೂ ಸಂಸತ್ತಿನ ಮುಂದೆ ಚರ್ಚೆಯಲ್ಲಿರುವಾಗ ಇದನ್ನು ಇತ್ಯರ್ಥಗೊಳಿಸದೆ ಇವೆರಡನ್ನು ಅಂತಿಮಗೊಳಿಸಬಾರದು ಎಂದು ಆಗ್ರಹಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಆಗಸ್ಟ್ 31ರಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಹೆಚ್.ಡಿ.ಎಂ.ಪಿ, ಸ್ವಾತಂತ್ರ್ಯ ದಿನ 2020ರಂದು ಪ್ರಕಟಿಸಿರುವ 'ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್'(ಎನ್.ಡಿ.ಎಚ್.ಎಂ.)ನ ಭಾಗವಾಗಿದೆಯಾದ್ದರಿಂದ ಇಂತಹ ಒಂದು ಚರ್ಚೆ ಅನಿವಾರ್ಯವಾಗಿದೆ. ವಿಚಿತ್ರವೆಂದರೆ, ಸರಕಾರ ಪ್ರತ್ಯೇಕವಾಗಿ ಹೆಚ್.ಡಿ.ಎಂ.ಪಿ ಬಗ್ಗೆ ಮಾತ್ರ ಟಿಪ್ಪಣಿಗಳನ್ನು ಕೇಳಿದೆ, ಇಡಿಯಾಗಿ ಎನ್.ಡಿ.ಎಚ್.ಎಂ.. ಬಗ್ಗೆ ಕೇಳಿಲ್ಲ ಎಂಬ ಸಂಗತಿಯತ್ತ ಅವರು ಈ ಪತ್ರದಲ್ಲಿ ಪ್ರಧಾನಿಗಳ ಗಮನ ಸೆಳೆದಿದ್ದಾರೆ.

ದೇಶದಲ್ಲಿ ಮತ್ತು ಸಂಸತ್ತಿನಲ್ಲಿ ಸಾಕಷ್ಟು ಚರ್ಚೆಗಳ ನಂತರ, 'ವ್ಯೆಯಕ್ತಿಕ ದತ್ತಾಂಶ ರಕ್ಷಣಾ' (ಪಿಡಿಪಿ) ಮಸೂದೆ 2019 ನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಅದಿನ್ನೂ ಇತ್ಯರ್ಥಗೊಂಡಿಲ್ಲ. ಎನ್.ಡಿ.ಹೆಚ್.ಎಂ. ಎಲ್ಲ ನಾಗರಿಕರ ಸೂಕ್ಷ್ಮ ವ್ಯೆಯಕ್ತಿಕ ದತ್ತಾಂಶಗಳನ್ನು ಸಂಗ್ರಹಿಸುವ ಪ್ರಸ್ತಾವವನ್ನು ಇಟ್ಟಿದೆ. ನಂತರ ಇದನ್ನು ಖಾಸಗಿ ವಿಮಾ ಕಾರ್ಪೊರೇಟ್‍ಗಳಿಗೆ ಮತ್ತು ಔಷಧಿ ಕಂಪನಿಗಳಿಗೆ ಲಭ್ಯಗೊಳಿಸಲಾಗುತ್ತದೆ. ಇದು ವ್ಯೆಯಕ್ತಿಕ ದತ್ತಾಂಶದ ರಕ್ಷಣೆಯ ಒಂದು ಗಂಭೀರ ಉಲ್ಲಂಘನೆಯಾಗುತ್ತದೆ ಎಂದು ಯೆಚುರಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಅಲ್ಲದೆ ಈ ಪ್ರಸ್ತಾವಿತ ಹೆಚ್.ಡಿ.ಎಂ.ಪಿ. ಸಂಸತ್ತಿನ ಪರಿಶೀಲನೆಯಲ್ಲಿರುವ ಈ ಮಸೂದೆಯ ಬಗ್ಗೆ ಏನೂ ಹೇಳುವುದಿಲ್ಲ. ಎಂಬುದೂ ಗಮನಾರ್ಹ. ನಿಜಸಂಗತಿಯೆಂದರೆ, ಪ್ರಸ್ತಾವಿತ ಹೆಚ್.ಡಿ.ಎಂ.ಪಿ., ಸಂಸತ್ತಿನ ಮುಂದಿರುವ ಮಸೂದೆಯ ಸಾರವನ್ನು, ಅಂದರೆ ದತ್ತಾಂಶ ರಕ್ಷಣೆಯ ನಿರ್ವಹಣೆಯ ಕುರಿತಾದ ಪ್ರಶ್ನೆಯನ್ನು ಗಂಭೀರವಾಗಿ ದುರ್ಬಲಗೊಳಿಸುವ ಹಲವಾರು ಅಂಶಗಳನ್ನು ಹೊಂದಿದೆ. ಇಂತಹ ಸನ್ನಿವೇಶಗಳಲ್ಲಿ, ಸಂಸತ್ತು ಪಿ.ಡಿ.ಪಿ. ಮಸೂದೆ ಪರಿಶೀಲನೆಯನ್ನು ಮುಕ್ತಾಯಗೊಳಿಸುವ ವರೆಗೆ, ಹೆಚ್.ಡಿ.ಎಂ.ಪಿ. ಮತ್ತು ಎನ್.ಡಿ.ಹೆಚ್.ಎಂ. ಇವೆರಡನ್ನೂ ಅಂತಿಮಗೊಳಿಸುವುದನ್ನು ಕೇಂದ್ರ ಸರಕಾರ ಮುಂದೂಡಬೇಕು ಎಂದು ಯೆಚುರಿ ಪ್ರಧಾನ ಮಂತ್ರಿಗಳನ್ನು ಈ ಪತ್ರದ ಮೂಲಕ ಆಗ್ರಹಿಸಿದ್ದಾರೆ.

ಸಂಸತ್ತಿನ ಎರಡೂ ಸದನಗಳ ಸಭೆಗಳನ್ನು ಸಪ್ಟಂಬ??? 14 ರಿಂದ ಕರೆಯಲಾಗಿದೆ. ಸಂಸತ್ತು ಪಿ.ಡಿ.ಪಿ. ಮಸೂದೆ 2019ನ್ನು ಪರಿಶೀಲಿಸುವಾಗ ಹೆಚ್.ಡಿ.ಎಂ.ಪಿ. ಮತ್ತು ಎನ್.ಡಿ.ಹೆಚ್.ಎಂ. ಚರ್ಚಿಸಬೇಕು. ಸಂಸತ್ತು ಮತ್ತು ಸ್ಥಾಯೀಸಮಿತಿ ಮುಂತಾದ ಅದರ ರಚನೆಗಳು ಈ ಪ್ರಸ್ತಾವಗಳನ್ನು ಆಳವಾಗಿ ಪರಿಶೀಲಿಸುವ ವರೆಗೆ ಯಾವುದೇ ಮಿಷನ್ನಿನ ಅನುಷ್ಠಾನವನ್ನು ಮಾಡಬಾರದು ಎಂದು ಒತ್ತಿ ಹೇಳಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಟಿಪ್ಪಣಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ ಸಪ್ಟಂಬರ್ 3, 2020 ರಿಂದ ಮುಂದಕ್ಕೆ ಹಾಕಬೇಕು ಎಂದೂ ಆಗ್ರಹಿಸಿದ್ದಾರೆ.

ಏಕಪಕ್ಷೀಯವಾಗಿ ನೌಕರರ ಅವಧಿ–ಪೂರ್ವ ನಿವೃತ್ತಿ: ಕೇಂದ್ರ ಸರಕಾರದ ಸ್ವೇಚ್ಛಾಚಾರದ ನಡೆ

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಖಂಡನೆ

ಭಾರತ ಸರಕಾರ ತನ್ನ ನೌಕರರ ಮೇಲೆ, ಮನಬಂದಂತೆ, ಏಕಪಕ್ಷೀಯವಾಗಿ ಅವಧಿ–ಪೂರ್ವ ಬಲವಂತದ ನಿವೃತ್ತಿಯನ್ನು ಹೇರುವ ತನ್ನ ನಡೆಯನ್ನು ಆಗಸ್ಟ್ 28ರ ಸಿಬ್ಬಂದಿ ಮತ್ತು ತರಬೇತಿ ವಿಭಾಗದ ಕಚೇರಿ ಮೆಮೊ(ಒಎಂ) ಮೂಲಕ ಪುನರಾರಂಭಿಸಿದೆ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ವಲಯವಾರು ಒಕ್ಕೂಟಗಳು/ ಸಂಘಗಳ ಜಂಟಿ ವೇದಿಕೆ ಬಲವಾಗಿ ಖಂಡಿಸಿದೆ.

ಈ ಒಎಂ 30 ವರ್ಷಗಳ ಸೇವೆ ಪೂರ್ಣಗೊಳಿಸಿದ ಮೇಲೆ. 50/55 ವರ್ಷ, ಅಥವ ಹೆಚ್ಚು ವಯಸ್ಸಾದ ಯಾವುದೇ ಸರಕಾರೀ ನೌಕರರನ್ನು ಅವರ ಎಂದಿನ ನಿವೃತ್ತಿ ದಿನಾಂಕದ ಐದರಿಂದ ಹತ್ತು ವರ್ಷಗಳ ಮೊದಲು ಬಲವಂತವಾಗಿ ನಿವೃತ್ತಿಗೊಳಿಸುವ ಅಧಿಕಾರವನ್ನು ಸರಕಾರಕ್ಕೆ ಕೊಡುತ್ತದೆ. ಅದಕ್ಕೆ "ಪ 'ರಿಣಾಮಕಾರಿಯಾಗಿರದಿರುವುದು', 'ಸಂದೇಹಾತ್ಮಕ ಸಮಗ್ರತೆ' ಮುಂತಾದ ಅಸ್ಪಷ್ಟ ಕಾರಣಗಳನ್ನು ನಮೂದಿಸಲಾಗಿದೆ. ಒಎಂ ನಿಗದಿ ಪಡಿಸಿರುವ ಅಧಿಕಾರಿಗೆ ಈ ಬಗ್ಗೆ ಅಸೀಮಿತ ಅಧಿಕಾರಗಳನ್ನು ಕೊಡಲಾಗುತ್ತಿದೆ. ಬಲವಂತದ ನಿವೃತ್ತಿಗೆ ಒಳಗಾಗುವವರಿಗೆಗೆ ತಮ್ಮ ಪ್ರತ್ಯುತ್ತರಗಳನ್ನು ಕೊಡುವ ಅವಕಾಶವನ್ನೂ ಕೊಡಲಾಗುವುದಿಲ್ಲ. ಸರಕಾರದ ಕ್ರಮ ಜಾರಿಯಾದ ಮೇಲೆ ಸರಕಾರ ನೇಮಿಸುವ ಸಲಹಾ ಸಮಿತಿಗೆ ಅಪೀಲು ಹಾಕಬಹುದು. ಆದರೆ ಇದು ಅರ್ಥಹೀನ ಎಂದು ಕಾರ್ಮಿಕ ಸಂಘಟನೆಗಳು ಹೇಳಿವೆ.

ಭಾರತ ಸರಕಾರದ ಇಂತಹ ನಡೆ ನೌಕರರು, ಕಾರ್ಮಿಕರು ಮತ್ತು ಅವರ ಸಂಘಟನೆಗಳ ಮೂಲ ಹಕ್ಕುಗಳ ಬಗ್ಗೆಯೇ ಅದು ಎಂತಹ ನಿರಂಕುಶತ್ವದ ನಿಲುವು ಹೊಂದಿದೆ ಎಂಬುದನ್ನು ಬಿಂಬಿಸುತ್ತದೆ. ಇದು ದೇಶದ ಎಲ್ಲ ಕಾರ್ಮಿಕ ಕಾನೂನುಗಳನ್ನು ಬದಲಿಸಿ ಕಾರ್ಮಿಕರ ಮೇಲೆ ಗುಲಾಮಿಕೆಯನ್ನೇ ಹೇರಿ, ಮಾಲಕರಿಗೆ ಪರವಾಗಿ ಎಲ್ಲ ಕಾರ್ಮಿಕ ಕಾನೂನುಗಳ ರದ್ದತಿ, ರಾಷ್ಟ್ರೀಯ ಹಿತಾಸಕ್ತಿಗಳನ್ನು ಪರಿಗಣಿಸದೆ ಸಮಸ್ತ ಸಾರ್ವಜನಿಕ ವಲಯವನ್ನು ಮತ್ತು ಸರಕಾರೀ ಇಲಾಖೆಗಳನ್ನು ಕಳಚಿ ಹಾಕುವ ಈ ಸರಕಾರದ 'ನಿಲುವಿನಲ್ಲೂ ಇದೇ ನಿರಂಕುಶತ್ವ ಕಾಣುತ್ತಿದೆ

ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ವಲಯವಾರು ಒಕ್ಕೂಟಗಳು/ ಸಂಘಗಳ ಜಂಟಿ ವೇದಿಕೆ, ಇದು ಸರಕಾರದ ಒಂದು ಸರ್ವಾಧಿಕಾರಶಾಹಿ ಹಾಗೂ ಸ್ವೇಚ್ಛಾರದ ಕ್ರಮ ಎಂದು ಖಂಡಿಸಿದೆ, ಈ ಕಚೇರಿ ಮೆಮೊವನ್ನು ಕೂಡಲೇ ಹಿಂಗೆದುಕೊಳ್ಳಬೇಕು ಎಂದೂ ಆಗ್ರಹಿಸಿದೆ.

ಸರಕಾರೀ ನೌಕರರು ಮತ್ತು ಅವರ ಸಂಘಟನೆಗಳು ಇಂತಹ ನಿರಂಕುಶತ್ವದ ಮತ್ತು ಸ್ವೇಚ್ಛಾಚಾರದ ಕಚೇರಿ ಮೆಮೋವನ್ನು ಐಕ್ಯತೆಯಿಂದ ಮತ್ತು ದೃಢನಿರ್ಧಾರದಿಂದ ವಿರೋಧಿಸಬೇಕು ಎಂದು ಜಂಟಿ ವೇದಿಕೆ ಕರೆ ನೀಡಿದೆ. ಅವರ ಈ ಹೋರಾಟಗಳಿಗೆ ಇಡೀ ದೇಶದ ಕಾರ್ಮಿಕ ಆಂದೋಲನದ ಬೆಂಬಲ ಮತ್ತು ಸೌಹಾರ್ದ ಇದೆ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ವಲಯವಾರು ಒಕ್ಕೂಟಗಳು/ ಸಂಘಗಳ ಜಂಟಿ ವೇದಿಕೆ ಸರಕಾರೀ ನೌಕರರಿಗೆ ಆಶ್ವಾಸನೆ ಕೊಟ್ಟಿದೆ.

ಸಂಪಾದಕೀಯ

ಒಳಮೀಸಲಾತಿ ಜಾರಿಯಾಗಲಿ, ಆದರೆ ಮತ ಬೇಟೆಗೆ ಬಳಕೆಯಾಗದಿರಲಿ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ಜಾತಿಗಳಲ್ಲಿನ ಒಳಜಾತಿಗಳಿಗೆ ಒಳಮೀಸಲು ನೀಡಲು ಸುಪ್ರೀಂ ಕೋರ್ಟ್ ಒಲವು ತೋರಿರುವುದು ಸ್ವಾಗತಾರ್ಹವಾಗಿದೆ. ಆದರೆ ಸುಪ್ರೀಂ ಕೋರ್ಟ್‌ನ ಈ ಅಭಿಮತವು ಮೀಸಲಾತಿಗೆ ಸಂಬಂಧಿಸಿ ದೇಶದಲ್ಲಿ ಬಹುದೊಡ್ಡ ಚರ್ಚೆಯನ್ನು ಹುಟ್ಟು ಹಾಕಬಹುದು.

ಕರ್ನಾಟಕದಲ್ಲಿ ಈಗ ಎಸ್.ಸಿ. ಗೆ 15%, ಎಸ್.ಟಿ.ಗೆ 3% ಮತ್ತು ಒಬಿಸಿಗೆ 32% ಮೀಸಲಾತಿ ಇದೆ. 10% ಎಸ್.ಸಿ. ಜಾತಿಗಳಿಗೆ, 50 ಎಸ್.ಟಿ. ಜಾತಿಗಳಿಗೆ ಮತ್ತು 207 ಇತರರ ಹಿಂದುಳಿದ ಜಾತಿಗಳಿಗೆ ಮೀಸಲಾತಿ ದೊರೆಯುತ್ತಿದೆ. ತಮಗೆ ತಮ್ಮ ಜನಸಂಖ್ಯೆ ಆಧಾರದಲ್ಲಿ ಮೀಸಲಾತಿಯನ್ನು ಹೆಚ್ಚಿಸಿ ನ್ಯಾಯ ದೊರಕಿಸಬೇಕೆಂಬ ಕೂಗು ತೀವ್ರವಾದಾಗ ಎ.ಜೆ. ಸದಾಶಿವ ಆಯೋಗ ರಚನೆಯಾಯಿತು. ಆಯೋಗ ವರದಿಯನ್ನು ನೀಡಿತು. ಆದರೆ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಸ್ಪೃಶ್ಯ ಮತ್ತು ಅಸ್ಪೃಶ್ಯರಿಗೆ ಮರು ವರ್ಗೀಕರಣ ಮಾಡಿ ಒಳಮೀಸಲಾತಿ ನೀಡಬೇಕೆಂದು ಶಿಫಾರಸು ಮಾಡಿದೆ ಎನ್ನಲಾದ ಸದಾಶಿವ ಆಯೋಗ ವರದಿ ಸದನದಲ್ಲಿ ಮಂಡನೆ ಆಗಲೇ ಇಲ್ಲ. ಒಟ್ಟು 15% ಎಸ್.ಸಿ. ಮೀಸಲಾತಿಯಲ್ಲಿ 6% ಎಸ್.ಸಿ.(ಎಡ), 5% ಎಸ್.ಸಿ.(ಬಲ) 3% ಸ್ಪೃಶ್ಯರಿಗೆ ಮತ್ತು 1% ಇತರ ಎಸ್.ಸಿ. ಗಳಿಗೆ ವಿಭಜಿಸಬೇಕೆಂದು ಸಹ ಸದಾಶಿವ ಆಯೋಗ ವರದಿಯಲ್ಲಿ ಹೇಳಲಾಗಿದೆ ಎನ್ನಲಾಗಿದೆ.

ಆಂಧ್ರಪ್ರದೇಶದ ಸರ್ಕಾರ ಒಳಮೀಸಲಾತಿ ನೀಡಿದ ಕ್ರಮವನ್ನು ಪ್ರಶ್ನಿಸಿ ಕೆಲವರು ಸುಪ್ರೀಂ ಕೋರ್ಟಿಗೆ ಹೋದರು. ನ್ಯಾ. ಸಂತೋಷ್ ಹೆಗ್ಡೆ ನೇತೃತ್ವದ ಪಂಚಪೀಠ ತೀರ್ಪು ನೀಡಿ ಮೀಸಲಾತಿ ವರ್ಗೀಕರಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇಲ್ಲ ಎಂದು ಹೇಳಿತು. ಆದರೆ ಈಗ ಮೀಸಲಾತಿ ವರ್ಗೀಕರಣ ಮಾಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇಲ್ಲವೆಂದು 2004ರಲ್ಲಿ ನೀಡಲಾದ ತೀರ್ಪನ್ನು ಮರುಪರಿಶೀಲನೆ ಮಾಡುವ ಅಗತ್ಯ ಇದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಒಂದು ಸಮುದಾಯವನ್ನು ಒಳಮೀಸಲಾತಿಗೆ ಪರಿಶೀಲಿಸುವಾಗ ಅವರು ಎದುರಿಸುತ್ತಿರುವ ಅಸ್ಪೃಶ್ಯತೆಯನ್ನು ಪರಿಗಣಿಸಬೇಕೇ ಹೊರತು ಅವರ ಸಾಮಾಜಿಕ, ಶೈಕ್ಷಣಿಕ ಹಿಂದುಳಿಯುವಿಕೆಯನ್ನಲ್ಲ ಕರ್ನಾಟಕದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ 101 ಜಾತಿಗಳಿದ್ದರೂ ಅವರಲ್ಲಿ ಸ್ಪೃಶ್ಯ ಸಮುದಾಯದವರೇ ಹೆಚ್ಚು ಮತ್ತು ಅವರೇ ಇದುವರೆಗೆ ಮೀಸಲಾತಿ ಲಾಭದ ಹೆಚ್ಚಿನ ಪಾಲನ್ನು ಪಡೆದಿದ್ದಾರೆ. ಅಸ್ಪೃಶ್ಯತೆಯ ಯಾತನೆಯನ್ನೇ ಅನುಭವಿಸದಿರುವವರಿಗೆ ಮೀಸಲಾತಿಯ ಸೌಲಭ್ಯ ಸಿಕ್ಕಿದೆ. ಅಸ್ಪೃಶ್ಯತೆಯ ಕ್ರೌರ್ಯವನ್ನು ಅನುಭವಿಸುತ್ತಿರುವವರು ಸ್ವಾಭಿಮಾನದ ಬದುಕಿನಿಂದ ವಂಚಿತರಾಗಿದ್ದಾರೆ. ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿದ್ದಾರೆ. ಇವರಲ್ಲಿ ಬಹುತೇಕ ಮಂದಿ ಯಾರು ಬಯಸದ ವೃತ್ತಿಗಳನ್ನು ಮಾಡಿಕೊಂಡು ಬದುಕುತ್ತಿದ್ದಾರೆ. ಇಂತಹವರಿಗೆ ಆಗಿರುವ ಅನ್ಯಾಯವನ್ನು ಈಗಲಾದರೂ ಸರಿಪಡಿಸಬೇಕಾಗಿದೆ.

ಸುಪ್ರೀಂ ಕೋರ್ಟಿನ ಈ ತೀರ್ಪು ದಲಿತ ಅಸ್ಪೃಶ್ಯರಲ್ಲಿ ಹೊಸ ಕನಸನ್ನು ಮೂಡಿಸಿದೆ. ಅದನ್ನು ನನಸು ಮಾಡಲು ಎಲ್ಲರೂ ಕೈಜೋಡಿಸಬೇಕಾಗಿದೆ. ಆದರೆ ಈ ಬೆಳವಣಿಗೆ ರಾಜಕಾರಣಕ್ಕೆ ಬಳಕೆಯಾಗದಂತೆ ನೋಡಿಕೊಳ್ಳಬೇಕಾಗಿದೆ. ಬಿಜೆಪಿಗರು ಸಹ ಒಳ ಮೀಸಲಾತಿ ಬಗ್ಗೆ ಮಾತನಾಡುತ್ತಿದ್ದಾರೆ. ಡಾ. ಅಂಬೇಡ್ಕರ್ ರೂಪಿಸಿದ ಸಂವಿಧಾನವನ್ನೇ ಕಿತ್ತುಹಾಕಿ ಮನುಶಾಸ್ತ್ರವನ್ನು ಅನುಷ್ಠಾನಕ್ಕೆ ತರುವ ಗುಪ್ತ ಗುರಿ ಹೊಂದಿರುವ ಇವರ ಒಳಮೀಸಲಾತಿ ಪ್ರೇಮವನ್ನು ಯಾರಾದರೂ ನಂಬಬಹುದಾ?. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಅಂದರೆ ಸವರ್ಣೀಯರಿಗೆ 10% ರಷ್ಟು ಮೀಸಲಾತಿ ಘೋಷಿಸಿ ಜಾರಿಗೆ ತಂದಿರುವ ಮೋದಿ ಮಾಡುತ್ತಿರುವ ಮತಬೇಟೆ ಅಲ್ಲವೇ? ಇವರು ಬಾಯಿ ಮಾತಿನಲ್ಲೇ ಮೀಸಲಾತಿ ಪರವಾಗಿರುವುದು ರಹಸ್ಯವೇನಿಲ್ಲ. ಮೀಸಲಾತಿ ಪ್ರಶ್ನೆಯನ್ನು ಒಂದು ಏಣಿಯಾಗಿ ಬಳಸಲು ಬಿಜೆಪಿಗರು ನಿಪುಣರು. ಚುನಾವಣೆ ಬಂದಾಗಲಷ್ಟೇ ಇವರಿಗೆ ಮೀಸಲಾತಿ, ಸದಾಶಿವ ಆಯೋಗ ವರದಿ ನೆನಪಾಗುತ್ತದೆ.

ನರೇಂದ್ರ ಮೋದಿಯವರು ದೇಶವನ್ನೇ ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರಿಸಲು ತುದಿಗಾಲ ಮೇಲೆ ನಿಂತಿದ್ದಾರೆ. ಇವರು ಸಂಚು ಹೂಡಿರುವಂತೆ ಖಾಸಗೀಕರಣದ ಅನುಷ್ಠಾನ ಯಶಸ್ವಿಯಾದ್ದಾರೆ ಯಾವ ಮೀಸಲಾತಿಯೂ ಉಳಿಯದು. ಖಾಸಗಿ ಕೈಗಾರಿಕೆಗಳಲ್ಲಿ ಹಾಗೂ ಖಾಸಗೀಕರಣಗೊಂಡ ಸಾರ್ವಜನಿಕ ಉದ್ದಿಮೆಗಳಲ್ಲಿ ಮೀಸಲಾತಿಗೆ ಅವಕಾಶ ಇರಲಾರದು. ಆದ್ದರಿಂದ ಮೋದಿ ಸರ್ಕಾರದ ದಲಿತ ವಿರೋಧಿ ನಡೆಯ ವಿರುದ್ಧ, ಮೀಸಲಾತಿಯ ಉಳಿವಿಗಾಗಿ ನಾವು ಎಲ್ಲರೂ ಒಂದಾಗಿ ಹೋರಾಡಬೇಕಾಗಿದೆ. ನಮ್ಮ ನಡುವೆ ಭೇದಭಾವ, ಮತ್ಸರ ಇರಬಾರದು. ನಾವು ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂಬ ಬೇಧವಿಲ್ಲದೆ ಒಂದಾಗಿ ಹೋರಾಡಬೇಕು. ಅಸ್ಪೃಶ್ಯರೆನಿಸಿಕೊಂಡು ಹಿಂಸೆಯನ್ನು ಅನುಭವಿಸುತ್ತಿರುವವರ ಬಗ್ಗೆ ಪ್ರೀತಿ-ವಿಶ್ವಾಸ ಇರಲೇಬೇಕು. ಒಳ ಮೀಸಲಾತಿ ಜನಸಂಖ್ಯಾ ಆಧಾರದಲ್ಲಿ ಪ್ರತಿಯೊಂದು ದಲಿತ ಸಮುದಾಯಕ್ಕೆ ದೊರಕಿಸುವುದು ನಮ್ಮ ಗುರಿಯಾಗಬೇಕು. ಅಸ್ಪೃಶ್ಯತೆಯನ್ನು ಹಾಗೂ ಜಾತಿಪದ್ಧತಿಯನ್ನು ಹೊಡೆದು ಹಾಕಲು ನಾವು ಒಂದಾಗಬೇಕು. ಮೀಸಲಾತಿ ರಾಜಕಾರಣಕ್ಕೆ ಬಳಕೆಯಾಗುವುದನ್ನು ತಡೆಯಬೇಕು.

“ಡ್ರಗ್ಸ್ ಜಾಲ ಭೇದಿಸಿ ವಿದ್ಯಾರ್ಥಿ-ಯುವಜನರನ್ನು ರಕ್ಷಿಸಲು ಸಿಪಿಐ(ಎಂ) ಒತ್ತಾಯ”

ರಾಜ್ಯದಲ್ಲಿ ತೆರೆದುಕೊಳ್ಳುತ್ತಿರುವ ಡ್ರಗ್ಸ್ ಜಾಲವು ಮಹಾನಗರದ ವಿವಿದ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿದ್ದು ಹಲವಾರು ವಿದ್ಯಾರ್ಥಿಗಳು ಮತ್ತು ಯುವಜನತೆ ಅದಕ್ಕೆ ಬಲಿಯಾಗುತ್ತಿದ್ದಾರೆ. ಡ್ರಗ್ಸ್ ಜಾಲವನ್ನು ಭೇದಿಸಿ ಅದರಲ್ಲಿ ಸಿಲುಕಿರುವ ಅಮಾಯಕ ವಿದ್ಯಾರ್ಥಿ-ಯುವಜನರನ್ನು ರಕ್ಷಿಸಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಡ್ರಗ್ಸ್ ಜಾಲಕ್ಕೆ ಸಿಲುಕಿ ಬಲಿಪಶುಗಳಾಗುತ್ತಿರುವ ತಮ್ಮ ಮಕ್ಕಳನ್ನು ದೂರು ನೀಡಿ ರಕ್ಷಿಸಲು ಸಾಧ್ಯವಾಗದ ಅಸಹಾಯಕ ಪರಿಸ್ಥಿತಿಯಲ್ಲಿ ಹಲವು ಪೋಷಕರಿದ್ದು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಜಾಲದಲ್ಲಿ ಸಿಲುಕಿರುವ ಹಲವು ಅಮಾಯಕ ವಿದ್ಯಾರ್ಥಿ ಯುವಜನರು ಅದರಿಂದ ಹೊರಬರಲಾಗದೆ, ಹೊರಬಂದರೂ ಡ್ರಗ್ಸ್ ಜಾಲದ ಮಾಫಿಯಾದ ಕೆಂಗಣ್ಣಿಗೆ ಗುರಿಯಾಗುವ ಅಪಾಯದಲ್ಲಿ ಸಿಲುಕಿದ್ದಾರೆ. ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿರುವ ವಿದ್ಯಾರ್ಥಿ-ಯುವಜನರು ಹಾಗೂ ಅವರ ಪೋಷಕರ ನೆರವಿಗೆ ರಾಜ್ಯ ಸರ್ಕಾರ ಮತ್ತು ಪೋಲಿಸ್ ಇಲಾಖೆ ಕೂಡಲೇ ಧಾವಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಸದರಿ ಕಾನೂನಿನಲ್ಲಿರುವ ಪ್ರಾವದಾನಗಳಿಂದಾಗಿ ದೂರು ನೀಡಿದರೆ ತಮ್ಮ ಮಕ್ಕಳು ಸಹಾ ಕ್ರಿಮಿನಲ್ ಪ್ರಕರಣದಲ್ಲಿ ಸಿಲುಕಿಕೊಳ್ಳಲಿದ್ದಾರೆ ಎಂಬ ಭಯ ಹಾಗೂ ಆತಂಕದಲ್ಲಿ ಹಲವು ಪೋಷಕರು ದೂರು ನೀಡಲು ಮುಂದಾಗದೆ ಮತ್ತು ಮಕ್ಕಳನ್ನು ಡ್ರಗ್ಸ್ ಜಾಲದಿಂದ ರಕ್ಷಿಸಿಕೊಳ್ಳಲಾಗದೆ ಅಡಕತ್ತರಿಗೆ ಸಿಲುಕಿ ನಲುಗಿದ್ದಾರೆ. ಇಂತಹ ಸಂದರ್ಭಗಳನ್ನು ರಾಜ್ಯ ಸರ್ಕಾರವು ಸೂಕ್ಷ್ಮವಾಗಿ ಪರಿಗಣಿಸಿ ಅಮಾಯಕ ವಿದ್ಯಾರ್ಥಿ-ಯುವಜನರು ಹಾಗೂ ಪೋಷಕರ ರಕ್ಷಣೆಗೆ ಅಗತ್ಯ ಭರವಸೆ ನೀಡುವ ಮೂಲಕ ಡ್ರಗ್ಸ್ ಜಾಲವನ್ನು ಭೇದಿಸಲು ಹಾಗೂ ಅದರಿಂದ ಮಹಾನಗರದ ಜನತೆಯನ್ನು ರಕ್ಷಿಸಲು ಅಗತ್ಯ ಕಾರ್ಯವ್ಯೂಹವನ್ನು ರೂಪಿಸಬೇಕೆಂದು ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ. ರಾಜ್ಯ ಸರ್ಕಾರ ಹಾಗೂ ಪೋಲಿಸ್ ಇಲಾಖೆಯ ಒಟ್ಟಾರೆ ಗಮನವು ಕೇವಲ ಪ್ರತಿಷ್ಠಿತ ನಟ-ನಟಿಯರ ಕೇಂದ್ರಿತವಾಗಿದ್ದು ಸಾಮಾನ್ಯ ಜನತೆಯು ಸಿಲುಕಿರುವ ಡ್ರಗ್ಸ್ ಜಾಲವು ಅವರ ಗಮನದಿಂದ ಹೊರಗುಳಿಯುವ ಅಪಾಯವನ್ನು ರಾಜ್ಯ ಸರ್ಕಾರ ಮನಗಂಡು ಅಗತ್ಯ ಎಚ್ಚರಿಕೆ ವಹಿಸಿ ಕ್ರಮವಹಿಸಬೇಕೆಂದು ಸಿಪಿಐ(ಎಂ) ಕೋರಿದೆ.

ಎನ್. ಪ್ರತಾಪ್ ಸಿಂಹ ಕಾರ್ಯದರ್ಶಿ, ಸಿಪಿಐ(ಎಂ)
ಬೆಂಗಳೂರು ಉತ್ತರ ಜಿಲ್ಲಾ ಸಮಿತಿ
ಕೆ.ಎನ್. ಉಮೇಶ್ ಕಾರ್ಯದರ್ಶಿ, ಸಿಪಿಐ(ಎಂ)
ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ (01.09.2020)

ಹೋಗುವ ಮುನ್ನ ಲೆಕ್ಕ ಕೊಟ್ಟು ಹೋಗಿ: ಬಿಜೆಪಿಗೆ ಸಿಪಿಐ(ಎಂ) ಆಗ್ರಹ

ಬಿಬಿಎಂಪಿಯ ಚುನಾಯಿತ ಪ್ರಾತಿನಿಧ್ಯದ ಆಡಳಿತವು ಸೆಪ್ಟೆಂಬರ್ 10ಕ್ಕೆ ಮುಕ್ತಾಯವಾಗಲಿದೆ. ಕಳೆದ ಒಂದು ವರ್ಷದಿಂದ ಅಧಿಕಾರದಲ್ಲಿರುವ ಬಿಜೆಪಿ ಆಡಳಿತವು ಕೋವಿಡ್-19 ಲಾಕೌನ್ ನಿರ್ವಹಣೆ ಮತ್ತು ಕೈಗೊಂಡಿರುವ ಪರಿಹಾರ ಕಾರ್ಯಗಳ ಕುರಿತು ಸಿಪಿಐ(ಎಂ) ಕೆಳಗಿನ 10 ಪ್ರಶ್ನೆಗಳಿಗೆ ಉತ್ತರ ಕೊಟ್ಟು ಲೆಕ್ಕ ಕೊಡಲು ಒತ್ತಾಯಿಸಿ **‘ಹೋಗುವ ಮುನ್ನ ಲೆಕ್ಕ ಕೊಟ್ಟು ಹೋಗಿ’** ಅಭಿಯಾನವನ್ನು ಹಮ್ಮಿಕೊಂಡಿದೆ. ಸೆಪ್ಟೆಂಬರ್ 9 ರಂದು ಬಿಬಿಎಂಪಿ ಕೇಂದ್ರ ಕಛೇರಿ ಮತ್ತು ವಲಯ ಕಚೇರಿಗಳ ಬಳಿ ಪ್ರತಿಭಟನೆ ನಡೆಸಿ ಒತ್ತಾಯಿಸಲಿದೆ.

“ದಶ ಅಂಶಗಳಿಗೆ ಲೆಕ್ಕ ಕೊಡಿ”

1. ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕಾರ್ಮಿಕ ಇಲಾಖೆಯಿಂದ ಬಿಬಿಎಂಪಿ ಗೆ ಎಷ್ಟು ಆಹಾರ ಕಿಟ್ ನೀಡಲಾಗಿತ್ತು ಅದರ ಮಾಹಿತಿ ಹಾಗೂ ಅದನ್ನು ವಿತರಿಸಿರುವ ಫಲಾನುಭವಿಗಳ ಪಟ್ಟಿ ಕೊಡಿ?
2. 2020-21 ರ ಬಿಬಿಎಂಪಿ ಆಯವ್ಯಯದಲ್ಲಿನ ಮಹಾಪೌರರ ವಿವೇಚನ ನಿಧಿ 150 ಕೋಟಿ ರೂಗಳ ಲೆಕ್ಕ ಕೊಡಿ?
3. ಉಪಮಹಾಪೌರರ ವಿವೇಚನ ನಿಧಿ 75 ಕೋಟಿ ರೂಗಳ ಲೆಕ್ಕ ಕೊಡಿ?
4. ಆಡಳಿತ ಪಕ್ಷದ ನಾಯಕರ ವಿವೇಚನ ನಿಧಿ 75 ಕೋಟಿ ರೂಗಳ ಲೆಕ್ಕ ಕೊಡಿ ?
5. ಆರ್ಥಿಕ ಮತ್ತು ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರ ವಿವೇಚನ ನಿಧಿ 75 ಕೋಟಿ ರೂಗಳ ಲೆಕ್ಕ ಕೊಡಿ?
6. ವಿವೇಚನಾ ನಿಧಿಯಿಂದ ಅಸಂಘಟಿತ ಕಾರ್ಮಿಕರಿಗೆ ಲಾಕ್ಡೌನ್ ಕಾಲಾವಧಿಯ ಪರಿಹಾರ ನೆರವು ಏಕೆ ನೀಡಲಿಲ್ಲ?
7. ಕೋವಿಡ್-19 ನಿಯಂತ್ರಣಕ್ಕಾಗಿ ಎಷ್ಟು ಕಂಟೈನ್‌ಮೆಂಟ್ ವಲಯಗಳನ್ನು ಘೋಷಿಸಲಾಗಿತ್ತು ಹಾಗೂ ವಲಯಗಳಿಗೆ ಹಾಕಲಾಗಿದ್ದ ಪ್ರತಿ ತಡೆಗೋಡೆಗೆ ಎಷ್ಟು ಖರ್ಚು ಮತ್ತು ಒಟ್ಟು ಎಷ್ಟು ಖರ್ಚು ಮಾಡಲಾಗಿದೆ?
8. ಕೋವಿಡ್-19 ನಿಯಂತ್ರಣಕ್ಕೆ ಪಿ.ಎಂ. ಕೇರ್ ನಿಧಿಯಿಂದ ಬಿಬಿಎಂಪಿ ಗೆ ಎಷ್ಟು ಹಣ ಬಂದಿದೆ?
9. ಕೋವಿಡ್ ಸೋಂಕಿತರ ಪ್ರತಿ ಶವ ಸಂಸ್ಕಾರಕ್ಕೆ ಎಷ್ಟು ಹಣ ನೀಡಲಾಗಿದೆ? ಒಟ್ಟು ಎಷ್ಟು ಹಣ ಖರ್ಚು ಮಾಡಲಾಗಿದೆ?
10. ಲಾಕ್ಡೌನ್ ಕಾಲಾವಧಿಯಲ್ಲಿ ಕೈಗೊಂಡ ಪರಿಹಾರ ಕ್ರಮಗಳ ಪಟ್ಟಿ ಕೊಡಿ? ಅದಕ್ಕೆ ಮಾಡಲಾದ ವೆಚ್ಚದ ಲೆಕ್ಕ ಕೊಡಿ?

ಎನ್. ಪ್ರತಾಪ್ ಸಿಂಹ ಕಾರ್ಯದರ್ಶಿ, ಸಿಪಿಐ(ಎಂ)
ಬೆಂಗಳೂರು ಉ.ಜಿಲ್ಲಾ ಸಮಿತಿ
ಕೆ.ಎನ್. ಉಮೇಶ್ ಕಾರ್ಯದರ್ಶಿ, ಸಿಪಿಐ(ಎಂ)
ಬೆಂಗಳೂರು ದ. ಜಿಲ್ಲಾ ಸಮಿತಿ (03.09.2020)

ಕಟ್ಟಡ ಕಾರ್ಮಿಕರಿಗೆ ಕೊರೋನಾ ಲಾಕ್‌ಡೌನ್ ಅವಧಿಯ ಪರಿಹಾರ ನೀಡುವಂತೆ ಒತ್ತಾಯಿಸಿ ಧರಣಿ ಸತ್ಯಾಗ್ರಹ

ವರದಿ: ವಾ.ಉ.



ದಿನಾಂಕ 3-9-2020 ರಂದು ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಮುಂದುಗಡೆ ಕಟ್ಟಡ ಕಾರ್ಮಿಕರು ಧರಣಿ ಸತ್ಯಾಗ್ರಹವನ್ನು ನಡೆಸಿದರು.

ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸುತ್ತಾ ಫೆಡರೇಶನ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯು. ಜಯಂತ ನಾಯ್ಕ್ ರವರು ಮಾತನಾಡುತ್ತಾ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕೊರೋನಾ ಲಾಕ್‌ಡೌನ್ ಪರಿಹಾರದ ಸಂಬಂಧಪಟ್ಟು ಅರ್ಹತೆ ಇರುವ ಎಲ್ಲಾ ಕಟ್ಟಡ ಕಾರ್ಮಿಕರಿಗೆ ರೂ.5,000/- ಪರಿಹಾರ ನೀಡಬೇಕಾಗಿದ್ದು, ಇನ್ನೂ ಕೆಲವು ಕಾರ್ಮಿಕರಿಗೆ ಬಾಕಿ ಇದ್ದು, ಕಲ್ಯಾಣ ಮಂಡಳಿಯಿಂದ ಈ ಪರಿಹಾರ ಧನವನ್ನು ನೀಡಬೇಕು. ಕರ್ನಾಟಕ ರಾಜ್ಯ ಸರಕಾರ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ನಿಧಿಯಿಂದ ನೀಡುವ ಪರಿಹಾರ ಇನ್ನೂ ಬಾಕಿ ಇರುವುದು ಆಕ್ಷೇಪಾರ್ಹ. ಮಾತ್ರವಲ್ಲದೆ, ಲಾಕ್‌ಡೌನ್ ಅವಧಿಯಲ್ಲಿ ನೋಂದಾಯಿತ ಕಾರ್ಮಿಕರಿಗೆ ಓಡಾಟ ಮಾಡಲು ಅಸಾಧ್ಯವಾಗಿದ್ದು, ನವೀಕರಣ ಮತ್ತು ಸೌಲಭ್ಯಗಳಿಗಾಗಿ ಅರ್ಜಿ ಸಂದಾಯಿಸಲು ಸಾಧ್ಯವಾಗಿರಲಿಲ್ಲ. ಅವರಿಗೆ ವಿಶೇಷವಾದ ಅವಕಾಶ ನೀಡಬೇಕು. ಮಾತ್ರವಲ್ಲದೆ, ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಿ ಕಾರ್ಮಿಕರಿಗೆ ಸೌಲಭ್ಯ ಸಿಗುವಂತೆ ಮಾಡಬೇಕೆಂದು ಅವರು ಒತ್ತಾಯಿಸಿದರು.

ಕಾರ್ಮಿಕ ಅಧಿಕಾರಿಗಳಾದ ವಿಲ್ಮಾರವರು ಕಾರ್ಮಿಕರ ಬೇಡಿಕೆಗಳ ಬಗ್ಗೆ ಸುಮಾರು 2 ಗಂಟೆಗಳ ಕಾಲ ಸಮಾಲೋಚನೆ ನಡೆಸಿ ಕಲ್ಯಾಣ ಮಂಡಳಿಯ ಹಾಗೂ ಕಾರ್ಮಿಕ ಇಲಾಖೆಗಳಿಂದ ಸ್ಪಂದಿಸಿ ಸಮಸ್ಯೆಗಳನ್ನು ಈಡೇರಿಸುವ ಭರವಸೆಯನ್ನು ನೀಡಿದರು.

ಧರಣಿ ಸತ್ಯಾಗ್ರಹದ ಸಮಾರೋಪ ಭಾಷಣವನ್ನು ಫೆಡರೇಶನ್ ಅಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೀಡುವ ಪರಿಹಾರವಾಗಲೀ, ಸೌಲಭ್ಯವಾಗಲೀ ಕಟ್ಟಡ ಕಾರ್ಮಿಕರು ಪಡೆಯಲು ಮುಂದಾಗಬೇಕು ಮಾತ್ರವಲ್ಲದೆ, ಕಲ್ಯಾಣ ಮಂಡಳಿಯನ್ನು ರಕ್ಷಿಸಲು ಕೂಡಾ ಸಂಘಟಿತ ಹೋರಾಟ ಮಾಡಬೇಕಾಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಾಮಾಜಿಕ ಭದ್ರತಾ ಮಸೂದೆಗಳನ್ನು ದುರುಪಯೋಗ ಪಡಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಸಾಮಾಜಿಕ ಭದ್ರತೆಯನ್ನು ಹಾಗೂ ನ್ಯಾಯಯುತವಾಗಿ ಪಡೆಯಬೇಕಾದ ಸೌಲಭ್ಯಗಳನ್ನು ಪಡೆಯಲು ಕಾರ್ಮಿಕರು ಜಾಗೃತರಾಗಿ ಸಂಘಟಿತ ಹೋರಾಟವನ್ನು ಮುಂದುವರಿಸಬೇಕಾಗಿದೆ ಎಂದ ಅವರು ಕಾರ್ಮಿಕರಿಗೆ ನೀಡಬೇಕಾದ ಸೌಲಭ್ಯ ನೀಡುವರೇ, ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ಕಾರ್ಮಿಕ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಅವರು ಅಭಿನಂದಿಸಿ ಮಾತನಾಡಿದರು.

ಈ ಧರಣಿ ಸತ್ಯಾಗ್ರಹದ ನೇತೃತ್ವವನ್ನು ಫೆಡರೇಶನ್ ಮುಂದಾಳುಗಳಾದ ಜನಾರ್ಧನ ಕುತ್ತಾರ್, ದಿನೇಶ್ ಶೆಟ್ಟಿ, ಶಂಕರ ಮೂಡಬಿದ್ರಿ, ವಸಂತಿ ಕುಪ್ಪೆಪದವು, ಸದಾಶಿವ ದಾಸ್, ಜಯಾನಂದ, ರೋಹಿದಾಸ್, ಪಾಂಡುರಂಗ, ಉಮೇಶ್ ಶಕ್ತಿನಗರ, ಯಶೋಧ ಮಳಲಿ ಮುಂತಾದವರು ವಹಿಸಿದ್ದರು.

ಪ್ರಾರಂಭದಲ್ಲಿ ಫೆಡರೇಶನ್ ಮುಂದಾಳು ಚಂದ್ರಹಾಸ ಕುಲಾಲ್ ಸ್ವಾಗತಿಸಿ ಕೊನೆಗೆ ತಸ್ರೀಫ್ ಮೂಡಬಿದ್ರಿಯವರು ಧನ್ಯವಾದ ನೀಡಿದರು.

ಕೇಂದ್ರ ಸರಕಾರದ ಜನವಿರೋಧಿ ನಡೆಗಳ ವಿರುದ್ಧ ಜಪ್ಪಿನಮೊಗರು ಮಹಿಳಾ ಶಾಖೆಯಿಂದ ಪ್ರತಿಭಟನೆ

28 ಆಗಸ್ಟ್ 2020 ರಂದು ಕೇಂದ್ರ ಸರಕಾರದ ಜನವಿರೋಧಿ ನಡೆಗಳ ವಿರುದ್ಧ ಜಪ್ಪಿನಮೊಗರು ಮಹಿಳಾ ಶಾಖೆಯಿಂದ ಜಪ್ಪಿನಮೊಗರು ಯುವಕ ಮಂಡಲದ ಬಳಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿ ಮಾತನಾಡಿ ಕೇಂದ್ರ ಮತ್ತು ರಾಜ್ಯ ಸರಕಾರವು ಕೊರೋನಾ ಸೋಂಕು ಹರಡುವುದನ್ನು ತಡೆಯುವಲ್ಲಿ ವಿಫಲವಾಗಿದೆ. ಏಕಪಕ್ಷೀಯ ಲಾಕ್‌ಡೌನ್‌ನಿಂದ ದೇಶದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ಬಂದಿದೆ. ಈ ಸಂದರ್ಭದಲ್ಲಿ ದೇಶದ ಕಾರ್ಮಿಕ ವರ್ಗ ಮತ್ತು ರೈತಾಪಿ ಜನತೆಯ ರಕ್ಷಿಸಬೇಕಾದ ಕೇಂದ್ರ ಸರಕಾರ ಜನವಿರೋಧಿ ನೀತಿಗಳನ್ನು ಜ್ಯಾರಿಗೊಳಿಸುತ್ತಿದೆ. ಕಾರ್ಮಿಕ ಕಾನೂನುಗಳ ತಿದ್ದುಪಡಿ ಮಾಡಿ, ಕಾರ್ಪರೇಟ್ ಬಂಡವಾಳಶಾಹಿಗಳಿಗೆ ಸಹಾಯ ಮಾಡುತ್ತಿದೆ. ಸರಕಾರದ ನೀತಿಯನ್ನು ವಿರೋಧಿಸಲು ತೀವ್ರ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು. ಸಭೆಯಲ್ಲಿ 16 ಪ್ರಮುಖ ಬೇಡಿಕೆಗಳನ್ನು ಸರಕಾರದ ಮುಂದೆ ಮಂಡಿಸಲಾಯಿತು.

ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯೆ ಜಯಂತಿ ಬಿ. ಶೆಟ್ಟಿಯವರು ಮಾತನಾಡಿ ರಾಜ್ಯ ಸರಕಾರ 76 ಕೈಗಾರಿಕೆಗಳ ಕಾರ್ಮಿಕರ ತುಟ್ಟಿಭತ್ತೆಯನ್ನು ಒಂದು ವರ್ಷಕ್ಕೆ ಮಾಲೀಕರಿಗೆ ರಿಯಾಯಿತಿ ಪ್ರಕಟಿಸಿರುವುದನ್ನು ಖಂಡಿಸಿದರು. ಶಾಖೆಯ ಕಾರ್ಯದರ್ಶಿ ಜಯಲಕ್ಷ್ಮಿಯವರು ಸ್ವಾಗತಿಸಿದರು. ಬೇಬಿ ಸೇನವರವರು ಧನ್ಯವಾದ ಕೊಡುವುದರೊಂದಿಗೆ ಪ್ರತಿಭಟನೆಯನ್ನು ಕೊನೆಗೊಳಿಸಲಾಯಿತು.





ಬೈಂದೂರು ಸಿಪಿಐ(ಎಂ) ಶಾಖಾ ಸದಸ್ಯರ ನೇತೃತ್ವದಲ್ಲಿ ಜನರಿಗೆ ಪರಿಹಾರ ಮತ್ತು ಪರ್ಯಾಯಕ್ಕಾಗಿ ಕೇಂದ್ರ ಸರಕಾರದ ವಿರುದ್ಧ ಮನೆ ಮನೆ ಪ್ರಚಾರ ಬೈಂದೂರಿನಲ್ಲಿ ನಡೆಯಿತು. ಸಿಪಿಎಂ ಪಕ್ಷದ ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಮುಖಂಡರಾದ ವೆಂಕಟೇಶ ಕೋಣಿ, ಶಾಂತಿ, ಸುಶೀಲ, ನಾಗರತ್ನ ಮುಂತಾದವರಿದ್ದರು.

ಕಾಲ್ತೋಡು: ಗೊರಕಲ್ ಕಟ್ಟಡ ಕಾರ್ಮಿಕರ ಸಂಘ ಸ್ಥಾಪನೆ

ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು)ದ ನೇತೃತ್ವದಲ್ಲಿ ಕಾಲ್ತೋಡು ಗ್ರಾಮದ ಗೊರಕಲ್ ಪ್ರದೇಶದ ಕಟ್ಟಡ ಕಾರ್ಮಿಕರ ಸಮಾವೇಶವು ಸ್ಥಳೀಯ ಗೋಪಾಲಕೃಷ್ಣ ದೇವಸ್ಥಾನದ ಸಭಾಂಗಣದಲ್ಲಿ 31 ಆಗಸ್ಟ್ 2020 ರಂದು ಯಶಸ್ವಿಯಾಗಿ ಜರುಗಿತು. ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಗಣೇಶ ದೇವಾಡಿಗ ತೊಂಡೆಮಕ್ಕಿ ಇವರು ಕಾರ್ಮಿಕರ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ ಕಾರ್ಮಿಕ ಕಾನೂನುಗಳನ್ನು ರದ್ದು/ತಿದ್ದುಪಡಿ/ ಅಮಾನತು ಮಾಡುವ ಎಲ್ಲಾ ಪ್ರಸ್ತಾವಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು. ಕಾರ್ಮಿಕ ಮುಖಂಡ ವೆಂಕಟೇಶ್ ಕೋಣಿ, ಅಮ್ಮಯ್ಯ ಪೂಜಾರಿ ಬಿಜೂರು ಸಭೆಯಲ್ಲಿ ಮಾತನಾಡಿದರು. ಕೊರೊನ ಸಂಕಷ್ಟದಲ್ಲಿ ನಿರುದ್ಯೋಗಿಗಳಾಗಿರುವ ಎಲ್ಲಾ ಬಡ ಕಾರ್ಮಿಕರಿಗೆ ಮಾಸಿಕ ರೂಪಾಯಿ 7500/= ರಂತೆ ಆರು ತಿಂಗಳವರೆಗೆ ನಗದು ಪರಿಹಾರ ಕೊಡಬೇಕು ಎಂದು ಸರ್ಕಾರ ವನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು. ಗೊರಕಲ್ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘಕ್ಕೆ ಶ್ರೀಧರ್ ಆಚಾರ್ ಅಧ್ಯಕ್ಷರಾಗಿ, ರಾಘವೇಂದ್ರ ಆಚಾರ್ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ನೂತನ ಕಾರ್ಯದರ್ಶಿ ರಾಘವೇಂದ್ರ ಆಚಾರ್ ಕೊನೆಯಲ್ಲಿ ಎಲ್ಲರಿಗೂ ವಂದಿಸಿದರು.

ವರದಿ: ವೆಂಕಟೇಶ್ ಕೋಣಿ



ದೇಶಾದ್ಯಂತ ವೃತಿಪರ ಕೋರ್ಸಗಳ ಪ್ರವೇಶಕ್ಕಾಗಿ ಜೆಇಇ-ನೀಟ್ ಪರೀಕ್ಷೆಗಳನ್ನು ನಡೆಸುವ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿ ರಾಷ್ಟ್ರ ವ್ಯಾಪ್ತಿ ಪ್ರತಿಭಟನೆ



ಜೆಇಇ-ನೀಟ್ ಮತ್ತು ಎಲ್ಲಾ ಪರೀಕ್ಷೆಗಳನ್ನು ರದ್ದು ಗೊಳಿಸಲು ಒತ್ತಾಯಿಸಿ ಬೆಂಗಳೂರು ನಗರದ ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ ಕಳೆದ ವರ್ಷ ಜೆಇಇ - ನೀಟ್ ಪರೀಕ್ಷೆಗಳು ನಡೆಸುವ ಸಂದರ್ಭದಲ್ಲಿ ಸಾರಿಗೆ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಇದ್ದರೂ ಕೂಡ ಸಮಯಕ್ಕೆ ಸರಿಯಾಗಿ ರೈಲು ನಿಗದಿತ ಸಮಯಕ್ಕೆ ಮತ್ತು ಸ್ಥಳಕ್ಕೆ ತಲುಪದೇ ಇರುವ ಕಾರಣ ನೂರಾರು ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆ ಬರೆಯುವುದರಿಂದ ವಂಚಿತರಾಗಿದ್ದರು. ಪ್ರತಿಭಟನೆಯ ನಂತರ ಮತ್ತೆ ಅವರಿಗೆ ಪರೀಕ್ಷೆಗಳನ್ನು ಬರೆಯುವ ಅವಕಾಶ ದೊರಕಿತು.

ತೀವ್ರ ಆರೋಗ್ಯ ಮತ್ತು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಇತ್ತೀಚಿನ ಸಾಂಕ್ರಾಮಿಕ ಪರಿಸ್ಥಿತಿಯಲ್ಲಿ, ದೇಶಾದ್ಯಂತ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಜೆಇಇ-ನೀಟ್ ಪರೀಕ್ಷೆಗಳನ್ನು ನಡೆಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಎಡ ಹಾಗೂ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಗಳು ಬಲವಾಗಿ ವಿರೋಧಿಸಿವೆ. ಸೋಂಕಿತರ ಸಂಖ್ಯೆ ಮತ್ತು ಸೋಂಕಿನಿಂದ ಸಾಯುವವರ ಸಂಖ್ಯೆಯು ಪ್ರತಿದಿನ ಹೆಚ್ಚಾಗುತ್ತಿರುವುದರಿಂದ, ಇದು ಸರ್ಕಾರದ ಅತ್ಯಂತ ಸೂಕ್ಷ್ಮವಲ್ಲದ ಕ್ರಮವಾಗಿದ್ದು, ವಿದ್ಯಾರ್ಥಿಗಳ ಆರೋಗ್ಯವನ್ನು ಆಳುವ ಸರ್ಕಾರಗಳು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿವೆ.

ಬಿಜೆಪಿ ಸರಕಾರದ ಈ ನಿರಂಕುಶಾಧಿಕಾರಿ ಕ್ರಮವನ್ನು ಖಂಡಿಸಿ ದೇಶಾದ್ಯಂತ ನಡೆಯುತ್ತಿರುವ ಹೋರಾಟದ ಭಾಗವಾಗಿ ಇಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಎಸ್‌ಎಫ್‌ಐ, ಎಐಎಸ್‌ಎಫ್ ಮತ್ತು ಪೋಷಕ ಸಂಘಟನೆ ಎಆರ್‌ಡಿಯು ಸಂಘಟನೆಗಳು ಪ್ರತಿಭಟನೆ ಮಾಡಿದೆವು.

ಈ ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಅಮರೇಶ್ ಕಡಗದ, ರಾಜ್ಯ ಕಾರ್ಯದರ್ಶಿ ವಾಸುದೇವರೆಡ್ಡಿ, ಎಐಎಸ್‌ಎಫ್ ನ ರಾಜ್ಯಾಧ್ಯಕ್ಷರಾದ ಜ್ಯೋತಿ ಕೆ., ಎಆರ್‌ಡಿಯು ನ ಪ್ರಧಾನ ಕಾರ್ಯದರ್ಶಿಯಾದ ಶ್ರೀನಿವಾಸ್ ಸಿ.ಎನ್., ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ದಿಲಿಪ್ ಶೆಟ್ಟಿ, ರಾಜ್ಯ ಜಂಟಿ ಕಾರ್ಯದರ್ಶಿ ಭೀಮನಗೌಡ, ರಾಜ್ಯ ಸಮಿತಿ ಸದಸ್ಯರಾದ ಶ್ರೀಕಾಂತ್ ಹಾಗೂ ಸಾಗರ್ ಅಭಿಷೇಕ್ ಮತ್ತಿತರರು ಇದ್ದರು.





ಉಪ್ಪುಂದ: ಕೊರೊನಾ ಪರಿಹಾರ ಒತ್ತಾಯಿಸಿ ಸಿಪಿಐ(ಎಂ)ಪ್ರಚಾರಂದೋಲನ

ಸಿಪಿಐ(ಎಂ) ಬೈಂದೂರು ವಲಯ ಸಮಿತಿಯ ನೇತೃತ್ವದಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಆಗ್ರಹಿಸಿ ಪ್ರಧಾನ ಮಂತ್ರಿಗಳಿಗೆ ಸಾಮೂಹಿಕವಾಗಿ ಮನವಿ ಕೊಡುವ ಬೃಹತ್ ಹೋರಾಟ ಕಾರ್ಯಕ್ರಮ 01 ಸೆಪ್ಟೆಂಬರ್ 2020 ಮಂಗಳವಾರ ಮಧ್ಯಾಹ್ನ ಉಪ್ಪುಂದ ಗ್ರಾಮ ಪಂಚಾಯತ್ ಕಚೇರಿ ಎದುರು ಜರಗಲಿದೆ. ಈ ಕಾರ್ಯಕ್ರಮ ಯಶಸ್ವಿಗೊಳಿಸಲು ಪೂರ್ವಭಾವಿ ಸಿದ್ಧತೆಯಾಗಿ ಉಪ್ಪುಂದ ಗ್ರಾಮದ ಜನತಾ ಕಾಲನಿಯಲ್ಲಿ ಮನೆ ಮನೆಗೆ ಕರಪತ್ರಗಳನ್ನು ವ್ಯಾಪಕವಾಗಿ ವಿತರಿಸಿ ಪ್ರಚಾರ ಅಭಿಯಾನ ನಡೆಸಲಾಯಿತು. ಸುಮಾರು ನೂರಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ ಪ್ರಚಾರಾಂದೋಲನದ ಮುಖಂಡತ್ವವನ್ನು ಸಿಪಿಐ(ಎಂ) ಮುಖಂಡರಾದ ವೆಂಕಟೇಶ್ ಕೋಣಿ, ಚಂದ್ರ ದೇವಾಡಿಗ ಉಪ್ಪುಂದ, ಮಾಧವ ದೇವಾಡಿಗ ಉಪ್ಪುಂದ, ಉದಯ ಗಾಣಿಗ ಮೊಗೇರಿ, ಅಮ್ಮಯ್ಯ ಪೂಜಾರಿ ಬಿಜೂರು ಹಾಗೂ ಮಹಿಳಾ ಕಾರ್ಮಿಕ ಮುಖಂಡರಾದ ಜ್ಯೋತಿ, ಚಿಕ್ಕಮ್ಮ, ಸಾವಿತ್ರಿ, ಸುಶೀಲ, ಸುಪ್ರೀತಾ, ಸೌಮ್ಯ, ಮಲ್ಲಿಕಾ, ಗೀತ, ಶಾಂತಿ, ಪ್ರೇಮ, ಚೆಂದು, ಮೂಕಾಂಬು ಗಾಂಧಿನಗರ ಮರವಂತೆ, ಮೊದಲಾದವರು ಪ್ರಚಾರಂದೋಲನದ ನೇತೃತ್ವ ವಹಿಸಿದ್ದರು.



ಅಕ್ರಮ-ಸಕ್ರಮ ಸಮಿತಿ ರಚಿಸಿ ಪಾಂ 57 ವಿಲೇವಾರಿ ಮಾಡಿ ಹಕ್ಕು ಪತ್ರ ನೀಡಲು ಒತ್ತಾಯಿಸಿ ಎರಡು ದಿನದ ಪಾದಯಾತ್ರೆ ಮಾಡಿ ಮನವಿ ಸಲ್ಲಿಕೆ

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ,

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಲಿತ ಹಕ್ಕುಗಳ ಸಮಿತಿ ಕರ್ನಾಟಕ(ಡಿ.ಎಚ್.ಎಸ್), ಕರ್ನಾಟಕ ಪ್ರಾಂತ ರೈತ ಸಂಘ (ಕೆ.ಪಿ.ಆರ್.ಎಸ್) ಮತ್ತು ಕ.ರಾ. ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಗರಿಬೊಮ್ಮನಹಳ್ಳಿ ಎರಡು ದಿನದ ಪಾದಯಾತ್ರೆ ಮೂಲಕ ತಮ್ಮಗೆ ಒತ್ತಾಯಿಸುವುದೇನೆಂದರೆ, ತಾಲ್ಲೂಕಿನಲ್ಲಿ ಹಲವಾರು ಬಡ ಹಿಂದುಳಿದ, ದಲಿತರು ಮತ್ತು ಭೂಹೀನರು ಬಂಜರು, ಸರ್ಕಾರಿ, ಹಳ್ಳ ಪಾರಂಪೂಕ ಇತರೆ ಭೂಮಿಯನ್ನು 60ಕ್ಕು ಹೆಚ್ಚು ವರ್ಷಗಳಿಂದ ಸಾಗು ಮಾಡಿದ್ದಾರೆ. ಅಲ್ಲದೆ ಪಾರಂ ನಂ: 51, 53 ಮತ್ತು 57 ಅರ್ಜಿಯನ್ನು ಸಕ್ರಮಗೊಳಿಸಲು ಕರೆದಾಗ ನಿರಂತರವಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಅಗತ್ಯ ದಾಖಲೆಯನ್ನು ನಿಮಗೆನೀಡದ್ದರು ತಾವು ಈ ಕುರಿತು ಯಾವ ಕ್ರಮ ಕೈಗೊಂಡಿಲ್ಲ ಎಂಬುದೇ ಖೇದಕರ. 2019 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಪಾಂ ನಂ: 57 ಅರ್ಜಿ ಕರೆದಾಗ ಹಗರಿಬೊಮ್ಮನಹಳ್ಳಿಯಲ್ಲಿ ಮಾತ್ರವೇ 2800 ಅರ್ಜಿದಾರರು ಇದ್ದರೆ ತಾವು ಇದುವರೆಗೆ ಅಕ್ರಮ ಸಕ್ರಮ ಸಮಿತಿ ರಚನೆಮಾಡದೆ ವಿಳಂಬ ಮಾಡಿರಿವ ಉನ್ನಾರ ಅರ್ಜಿದಾರಿಗೆ ತಿಳಿಯದಾಗಿದೆ.

ತಾಲೂಕಿನಲ್ಲಿ ಅನೇಕ ವರ್ಷಗಳಿಂದ ತಮ್ಮ ಉಪಜೀವನ ನಡೆಸಲು ವಲಸೆ ಹೋಗುವ ಭೂಹೀನರು ತಮ್ಮ ಬದುಕಿನ ಎಲ್ಲಾ ಭದ್ರತೆಯನ್ನು ಕಳೆದುಕೊಂಡಿದ್ದಾರೆ. ಗುಳೇ ಹೋಗುವುದು ಬಿಟ್ಟರೆ ಬೇರೆದಾರಿ ಇಲ್ಲದಂತಾಗಿದೆ. ಇವತ್ತಿಗೂ ದಲಿತ ಸಮುದಾಯದ ಭೂಹೀನರು ಮತ್ತು ಸಣ್ಣ ಕೃಷಿ ರೈತರು ಮಂಡ್ಯ, ಮೈಸೂರು, ಬೆಂಗಳೂರು, ಹಾಸನ,ಹೊರ ರಾಜ್ಯಗಳಿಗೆ ಹೋಗುತಿದ್ದಾರೆ ಇಂತಹ ಸಂದರ್ಭಗಳಲ್ಲಿ ನಮ್ಮ ಕುಟುಂಬಗಳು ತೀರ ತೊಂದರೆಗೆ ಸಿಕ್ಕಿಕೊಳ್ಳುತ್ತವೆ. ಅಲ್ಲದೆ ನಮ್ಮ ಮಕ್ಕಳು ಶಿಕ್ಷಣ, ಉದ್ಯೋಗ ದಿಂದ ವಂಚಿತರಾಗುತ್ತಾರೆ. ನಮ್ಮ ಮುತ್ತಜ್ಜರ ಕಾಲದಿಂದಲು ನಮಗೆ ಯಾವುದೇ ಸ್ವಂತ ಭೂಮಿ ಇಲ್ಲದೆ ಭೂ ಮಾಲಿಕರ ಮನೆಯಲ್ಲಿ ಸಂಬಳಕ್ಕಾಗಿ, ಜೀತದಾಳುಗಳಾಗಿ ದುಡಿದಿದ್ದಾರೆ. ನಮ್ಮ ಕುಟುಂಬಗಳನ್ನು ರಕ್ಷಿಸುವ ಜವಾಬ್ದಾರಿ ಸರ್ಕಾರದ ಕೂಡ ಆಗಿದೆ. ಹಳ್ಳಿಗಳಲ್ಲಿ ಭೂಮಿ ಸಾಗು ಬಡದಲಿತರು, ಭೂಹೀನರು ಭೂಮಿ ಸಾಗು ಮಾಡಿರುವುದರಿಂದ ಸ್ಥಳಿಯವಾಗಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ ಅವರಿಂದ ಹಲವು ರೀತಿಯ ಒತ್ತಡಗಳು ಮತ್ತು ನಾವು ಸಾಗು ಮಾಡಿ ಬಿತ್ತನೆ ಮಾಡಿದ ಹೊಲದಲ್ಲಿ ಕುರಿ, ದನಗಳನ್ನು ಬಿಟ್ಟು ಮೇಯಿಸುವುದು ಅಲ್ಲದೆ ತಹಶಿಲ್ದಾರರ ಮೂಲಕ ನೋಟಿಸ್ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ತಹಶಿಲ್ದಾರರ ಕೂಡ ನಮಗೆ ನೋಟಿಸ್ ಜಾರಿ ಮಾಡಿದ್ದಾರೆ ಇದರಿಂದ ನಮ್ಮ ಕುಟುಂಬಕ್ಕೆ ತೀರ ತೊಂದರೆಯಾಗಿದೆ. ತಾವುಗಳು ಈ ಕೂಡಲೆ ಮಧ್ಯ ಪ್ರದೇಶ ಮಾಡಬೇಕು. ಸರ್ಕಾರದ ಕಾನೂನಿನಂತೆ ಪಾರಂ ನಂ: 57 ಹಾಕಿದ ಎಲ್ಲಾ ಕುಟುಂಗಳ ಅರ್ಜಿಗಳನ್ನು ವಿಲೇ ಮಾಡಿ ಅಕ್ರಮ-ಸಕ್ರಮ ಸಮಿತಿ ರಚಿಸಿ ಹಕ್ಕುಪತ್ರವನ್ನು ನೀಡಬೇಕು. ಹಾಗೆ ದೇವದಾಸಿ ಮಹಿಳೆಯರ ಕುಟುಂಬಕ್ಕೆ ತಲಾ 5 ಎಕ್ಕರೆ ಭೂಮಿ ನೀಡಬೇಕು ಎಂದು ನಮ್ಮಎರಡು ದಿನದ ಪಾದಯಾತ್ರೆ ಮೂಲಕ ಮನವಿಯನ್ನು ಸಲ್ಲಿಸಲಾಯಿತು.

ಬೇಡಿಕೆಗಳು:

1) ಅಕ್ರಮ-ಸಕ್ರಮ ಸಮಿತಿ ರಚನೆ ಮಾಡಿ, ಪಾರಂ ನಂ: 57 ಹಾಕಿದ ಎಲ್ಲಾ ಭೂಹೀನ ಕುಟುಂಗಳಿಗೆ ಹಕ್ಕುಪತ್ರವನ್ನು ನೀಡಬೇಕು.
2) ಸರ್ಕಾರಿ ಭೂಮಿಯಲ್ಲಿ ಸಾಗು ಮಾಡಿದ ಎಲ್ಲಾ ಕುಟುಂಬಗಳಿಗೂ ಬೀಜ, ರಸಗೊಬ್ಬರ ನೀಡಿ ಕೃಷಿ ಮಾಡಲು ಪ್ರೋತ್ಸಾಹ ನೀಡಬೇಕು.
3) ದೇವದಾಸಿ ಮಹಿಳೆಯರ ಕುಟುಂಬಕ್ಕೆ ತಲಾ 5 ಎಕ್ಕರೆ ಭೂಮಿ ನೀಡಬೇಕು.
4) ಎಲ್ಲಾ ಕುಟುಂಗಳು ವಲಸೆ ಹೋಗದಂತೆ ತಡೆಯಬೇಕು MNREG ಯೋಜನೆ 200 ದಿನಕ್ಕೆ ಹೆಚ್ಚಿಸಬೇಕು.

ಬಿ.ಮಾಳಮ್ಮ, ಆನಂದ ಎಂ. ಸಂಚಾಲಕರು
ಬಸವರಾಜ್, ಬಿ.ಮೈಲಮ್ಮ, ಕ.ದೇ.ಮ.ವಿ ಸಂಘ
ಚಾಂದಬೀ ಕಾರ್ಯದರ್ಶಿ ಕ.ದೇ.ಮ.ವಿಸಂಘ
ಗಾಳೆಪ್ಪ, (04-09-2020)

www.janashakthimedia.com

ವೆಬ್ ಪತ್ರಿಕೆ ಲೋಕಾರ್ಪಣೆ
ಕರ್ನಾಟಕ 2020 : ಕೊರೊನಾ ಕಾಲದಲ್ಲಿ ಮತ್ತು ನಂತರ

*** ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15 * ಬರಹ ಮತ್ತು ವೆಬಿನಾರುಗಳ ಸರಣಿಯ ಮೂಲಕ**

ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆಯು **ಸೆಪ್ಟೆಂಬರ್ 15ರಿಂದ ಅಕ್ಟೋಬರ್ 15** ವರೆಗಿನ ಅವಧಿಯಲ್ಲಿ **ಬರಹ ಮತ್ತು ವೆಬಿನಾರುಗಳ ಸರಣಿಯ** ಮೂಲಕ ಲೋಕಾರ್ಪಣೆಗೊಳ್ಳಲಿದೆ. **"ಕರ್ನಾಟಕ 2020 : ಕೊರೊನಾ ಕಾಲದಲ್ಲಿ ಮತ್ತು ನಂತರ"**

ಈ ಲೋಕಾರ್ಪಣೆ ಸರಣಿ ಕಾರ್ಯಕ್ರಮಗಳ ಸಾಮಾನ್ಯ ಥೀಮ್ ಆಗಿರುತ್ತದೆ. ಈ ಸಾಮಾನ್ಯ ಥೀಮ್ ನಡಿಯಲ್ಲಿ ಹಲವು ಉಪಥೀಮ್ ಗಳಿರುತ್ತವೆ

ಈ ಸಾಮಾನ್ಯ ಥೀಮ್ ಕುರಿತು ಕೆಳಗೆ ಕಾಣಿಸಿದ 5 ಪ್ರಶ್ನೆಗಳ ಪ್ರಶ್ನಾವಳಿ ಸುತ್ತ ನಾಡಿನ ಪ್ರಮುಖ ಚಿಂತಕರು, ಲೇಖಕರು, ಕಲಾವಿದರು, ಸಾಮಾಜಿಕ-ರಾಜಕೀಯ ಕಾರ್ಯಕರ್ತರು, ಸಾರ್ವಜನಿಕ ಬುದ್ಧಿಜೀವಿಗಳು, ವಕೀಲರು, ವೈದ್ಯರು, ಅಕಾಡೆಮಿಕ್, ಸಾಹಿತಿ, ಕಲಾವಿದ, ಪತ್ರಕರ್ತರು ಹಾಗೂ ವಿವಿಧ ಜನವಿಭಾಗಗಳನ್ನು ಪ್ರತಿನಿಧಿಸುವವರ ಜೊತೆಗೆ ಒಂದು ಸಂವಾದ ಏರ್ಪಡಿಸಲಾಗುತ್ತಿದೆ.

1. ನಿಮ್ಮ ಪ್ರಕಾರ ಕೊರೊನಾ ಕಾಲದಲ್ಲಿ ಕರ್ನಾಟಕದಲ್ಲಿ ಆದ ಮುಖ್ಯ ಪಲ್ಲಟಗಳು ಅಥವಾ ಮುನ್ನೆಲೆಗೆ ಬಂದ ಮುಖ್ಯ ಪ್ರಶ್ನೆಗಳು ಯಾವುವು? ಇವುಗಳಿಗೆ ಕೊರೊನಾ ಮಾತ್ರ ಕಾರಣವೇ ಅಥವಾ ಕೊರೊನಾ-ಪೂರ್ವ ಪರಿಸ್ಥಿತಿಯ ಪ್ರಭಾವವೂ ಇದೆಯೇ?
2. ಈ ಪಲ್ಲಟಗಳು ಅಥವಾ ಪ್ರಶ್ನೆಗಳು ಕರ್ನಾಟಕದ ಸರ್ವಾಂಗೀಣ ಬೆಳವಣಿಗೆಗೆ ತೊಡಕುಗಳೇ ಅಥವಾ ಹೊಸ ಅವಕಾಶಗಳೇ? ಹೇಗೆ ಎಂದು ವಿವರಿಸಿ.
3. ಕೊರೊನಾ ಕಾಲದ ಪಲ್ಲಟಗಳು ಅಥವಾ ಪ್ರಶ್ನೆಗಳು ವೈಯಕ್ತಿಕವಾಗಿ ನಿಮ್ಮ ಮೇಲೆ ಮತ್ತು ನಿಮ್ಮ ಕಾರ್ಯಕ್ಷೇತ್ರದ ಮೇಲೆ ಹೇಗೆ ಪ್ರಭಾವ ಬೀರಿವೆ?
4. ಈ ಪ್ರಭಾವ ಕೊರೊನಾ ಕಾಲಕ್ಕೆ ಸೀಮಿತವಾದದ್ದೇ? ಅಥವಾ ಕೊರೊನೋತ್ತರ ಕಾಲದಲ್ಲೂ ಶಾಶ್ವತ ಪರಿಣಾಮ ಬೀರುವಂಥದ್ದೆ? ಅದನ್ನು ವೈಯಕ್ತಿಕವಾಗಿ ಮತ್ತು ನಿಮ್ಮ ಕಾರ್ಯಕ್ಷೇತ್ರದಲ್ಲಿ ಹೇಗೆ ನಿಭಾಯಿಸಬಹುದು ?
5. ಕೊರೊನೋತ್ತರ ಕರ್ನಾಟಕ ಹೇಗಿರುತ್ತದೆ? ಹೇಗಿರಬೇಕು?

ಸಾರ್ವಜನಿಕ ಆರೋಗ್ಯ : ಕೊರೊನಾ ಕಾಲದಲ್ಲಿ ಮತ್ತು ನಂತರ

ಕೊರೊನಾ ಕಾಲದ ಮುಖ್ಯ ಸವಾಲಾಗಿ ಎದುರಾದದ್ದು ಸಾರ್ವಜನಿಕ ಆರೋಗ್ಯ ರಕ್ಷಣೆಯ ಸಮಸ್ಯೆ. ದೇಶದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೂಲಸೌಕರ್ಯ, ಸಿಬ್ಬಂದಿಯ ವ್ಯಾಪಕತೆ, ಗಾತ್ರ, ಗುಣಮಟ್ಟ, ಸಮರ್ಪಕತೆ ಇತ್ಯಾದಿ ತೀವ್ರ ಪರೀಕ್ಷೆಗೂ ಒಳಗಾಗಿದೆ. ಇಂತಹ ಮಹಾಸಾಂಕ್ರಾಮಿಕವನ್ನು ಎದುರಿಸಲು ಈ ವ್ಯವಸ್ಥೆಯ ಮತ್ತು ಸರಕಾರದ ಪೂರ್ವಸಿದ್ಧತೆಯ ಕುರಿತೂ ಪ್ರಶ್ನೆಗಳೆದ್ದಿವೆ. ಲಾಕ್ ಡೌನ್ ಮತ್ತು ಅದರ ಜಾರಿಯ ವೈಖರಿ ಸಹ ತೀವ್ರ ವಾದ ವಿವಾದಕ್ಕೆ ಕಾರಣವಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಸಾರ್ವಜನಿಕ ಆರೋಗ್ಯ ಕೊರೊನಾ ಕಾಲದಲ್ಲಿ ಮುನ್ನೆಲೆಗೆ ಬಂದಿರುವ ಒಂದು ಮುಖ್ಯ ವಿಷಯ.

ಆದ್ದರಿಂದ "ಸಾರ್ವಜನಿಕ ಆರೋಗ್ಯ : ಕೊರೊನಾ ಕಾಲದಲ್ಲಿ ಮತ್ತು ನಂತರ" ಎಂಬ ಉಪ ಥೀಮ್ ಕುರಿತು ನಾಡಿನ ವೈದ್ಯಕೀಯ ವಲಯ, ಇತರ ಮುಂಚೂಣಿಯ ಕೊರೋನಾ ಯೋಧರುಗಳು, ಜನಾರೋಗ್ಯ ಚಳುವಳಿಗಾರರು, ಸಾಂಕ್ರಾಮಿಕ ರೋಗ ತಜ್ಞರು, ಆರೋಗ್ಯ ಇಲಾಖೆ ಹಾಗೂ ಸರಕಾರದ ಪ್ರತಿನಿಧಿಗಳು, ಕೊವಿಡ್ ಟಾಸ್ಕ್ ಫೋರ್ಸ್ ಸದಸ್ಯರು, ಮಾಧ್ಯಮ ಪ್ರತಿನಿಧಿಗಳು ಮತ್ತಿತರ ಪರಿಣತರು ಹಾಗೂ ಆಸಕ್ತರುಗಳ ಜೊತೆಗೆ ಈ ಕೆಳಗಿನ ಪ್ರಶ್ನೆಗಳನ್ನಾಧರಿಸಿ ಸಂವಾದ ಏರ್ಪಡಿಸುವ ಉದ್ದೇಶವಿದೆ.

1. ಕರ್ನಾಟಕದ ಕೊರೊನಾ ಸಂದರ್ಭದ ಆರೋಗ್ಯ ಬಿಕಟ್ಟಿನ ನಿರ್ವಹಣೆ ಸಮರ್ಪಕವಾಗಿತ್ತೇ? ಇಲ್ಲದಿದ್ದರೆ ಏನು ಮಾಡಬೇಕಿತ್ತು?
2. ಕರ್ನಾಟಕ ಕೊರೊನಾ ಸಂತ್ರಸ್ತ ರಾಜ್ಯಗಳಲ್ಲಿ 10ನೇ ಸ್ಥಾನದಿಂದ 4ನೇ ಸ್ಥಾನಕ್ಕೆ ಯಾಕೆ ಬಂತು?
3. ಕೊರೊನಾ ಆರೋಗ್ಯ ಬಿಕ್ಕಟ್ಟಿಗೆ ಪ್ರತಿಕ್ರಿಯೆಯಾಗಿ ಖಾಸಗಿ ಆರೋಗ್ಯ ವ್ಯವಸ್ಥೆಯ ಪಾತ್ರ ಏನಿತ್ತು ?
4. ಈಗಿನ ಸ್ಥಿತಿಯಲ್ಲಿ ಆರೋಗ್ಯ ಬಿಕಟ್ಟಿಗೆ ಪ್ರತಿಕ್ರಿಯೆ ಏನಿರಬೇಕು ? ಮುಂದೆ ಬರಬಹುದಾದ ಇಂತಹ ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ಆರೋಗ್ಯ ವ್ಯವಸ್ಥೆಯಲ್ಲಿ ಯಾವ ಬದಲಾವಣೆಗಳು ಬೇಕು?
5. ಕರ್ನಾಟಕದ ಆರೋಗ್ಯ ವ್ಯವಸ್ಥೆ ಈಗ ಏನಿದೆ? ಕೊರೊನಾದಿಂದ ಪಾಠ ಕಲಿತು ಮುಂದೆ ಹೇಗಿರಬೇಕು?

ಸಾಮಾಜಿಕ ಭದ್ರತೆ: : ಕೊರೊನಾ ಕಾಲದಲ್ಲಿ ಮತ್ತು ನಂತರ

ದೇಶದ/ಬಹುಪಾಲು ಜನ ದಿನದ ಆದಾಯದ ಮೇಲೆ ಬದುಕುತ್ತಾ ಯಾವುದೇ ರೀತಿಯ ಸಾಮಾಜಿಕ ಭದ್ರತೆ ಇಲ್ಲದೆ ಇದ್ದುದೇ ಕೊರೊನಾ ಕಾಲದಲ್ಲಿ ಬಹುಪಾಲು ಜನರ ಬವಣೆಗೆ ಮೂಲ ಕಾರಣ ಎನ್ನಲಾಗುತ್ತಿದೆ. ಸಾಮಾಜಿಕ ಭದ್ರತೆ ಎಷ್ಟರ ಮಟ್ಟಿಗೆ ಸಾಧಿತವಾಗಿದೆ, ಅಷ್ಟರ ಮಟ್ಟಿಗೆ ಇಂತಹ ಪರಿಸ್ಥಿತಿಯನ್ನು ಎದುರಿಸಿ ಸಾವು/ನೋವು ಕನಿಷ್ಟಗೊಳಿಸುವುದು ಸಾಧ್ಯವಾಗಿದೆ. ಆದ್ದರಿಂದ ಉದ್ಯೋಗ ಭದ್ರತೆ, ಆಹಾರ ಭದ್ರತೆ, ಆರೋಗ್ಯ ಭದ್ರತೆ, ಭವಿಷ್ಯನಿಧಿ, ಪಿಂಚಣಿ, ವೃದ್ಧಾಪ್ಯ/ವಿಧವಾ ಸಹಾಯಧನ ಇತ್ಯಾದಿಗಳು ಸೇರಿದಂತೆ, ಸಮಗ್ರ ಸಾರ್ವತ್ರಿಕ ಸಾಮಾಜಿಕ ಭದ್ರತೆ (ಅಥವಾ ಅದರ ವ್ಯಾಪಕ ಅಭಾವ) ಕೊರೊನಾ ಕಾಲದಲ್ಲಿ ಮುನ್ನೆಲೆಗೆ ಬಂದಿರುವ ಒಂದು ಮುಖ್ಯ ವಿಷಯ.

ಆದ್ದರಿಂದ "ಸಾಮಾಜಿಕ ಭದ್ರತೆ: : ಕೊರೊನಾ ಕಾಲದಲ್ಲಿ ಮತ್ತು ನಂತರ"ಎಂಬ ಉಪ ಥೀಮ್ ಕುರಿತು ಕೆಳಗೆ ಕಾಣಿಸಿದ 5 ಪ್ರಶ್ನೆಗಳ ಪ್ರಶ್ನಾವಳಿ ಸುತ್ತ ನಾಡಿನ ಸಾಮಾಜಿಕ ಭದ್ರತೆಯ ಕುರಿತು ಪರಿಣತರು, ಅಭಿವೃದ್ಧಿ ಅರ್ಥಶಾಸ್ತ್ರಜ್ಞರು, ಸರಬಂಧಿತ ಇಲಾಖೆಗಳಪ್ರತಿನಿಧಿಗಳು, ವಿವಿಧ ಜನವಿಭಾಗಗಳ ಸಂಘಟನೆಗಳ ನಾಯಕರು/ಪ್ರತಿನಿಧಿಗಳು ಮತ್ತಿತರ ಆಸಕ್ತರುಗಳ ಜೊತೆಗೆ ಒಂದು ಸಂವಾದ ಏರ್ಪಡಿಸಲಾಗುತ್ತಿದೆ.

1. ಈಗ ರಾಜ್ಯದಲ್ಲಿ ಸೀಮಿತವಾಗಿಯಾದರೂ ಜಾರಿಯಲ್ಲಿರುವ (ರೇಗಾ, ಅನ್ನಭಾಗ್ಯ, ಅಂತ್ಯೋದಯ, ಇ.ಎಸ್.ಐ, ಭವಿಷ್ಯನಿಧಿ, ವೃದ್ಧಾಪ್ಯ/ವಿಧವಾ ಸಹಾಯಧನ, ಕಟ್ಟಡ ಕಾರ್ಮಿಕರ ಕಲ್ಯಾಣನಿಧಿ ಇತ್ಯಾದಿ) ಸಾಮಾಜಿಕ ಭದ್ರತಾ ಕ್ರಮಗಳು ಕೊರೊನಾ ಕಾಲದಲ್ಲಿ ಬಹುಪಾಲು ಜನತೆಯ ನೆರವಿಗೆ ಬಂದವೇ? ಕೊರೋನಾದಿಂದ ಉಂಟಾದ ಆರ್ಥಿಕ ಕುಸಿತದ ಅವಧಿಯಲ್ಲಿ ನೆರವಾದಾವೇ? ಇಲ್ಲವಾದರೆ ಅವುಗಳ ನ್ಯೂನತೆಗಳೇನು?
2. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ಕೊರೋನಾ ಬಿಕ್ಕಟ್ಟಿನ ಪರಿಹಾರಕ್ಕೆ ಕೈಗೊಂಡ ಕ್ರಮಗಳ (20 ಲಕ್ಷ ಕೋಟಿ ರೂ. ಕೊರೊನಾ ಪ್ಯಾಕೇಜ್ ಸೇರಿದಂತೆ) ಬಗ್ಗೆ ನಿಮ್ಮ ಅಭಿಪ್ರಾಯ ಏನು? ಅವು ಕೊರೋನಾದಿಂದ ಉಂಟಾಗಿರುವ ದೀರ್ಘಕಾಲೀನ ಆರ್ಥಿಕ ಕುಸಿತದ ಅವಧಿಯಲ್ಲಿ ನೆರವಾದಾವೇ? ಇಲ್ಲವಾದರೆ ಪರ್ಯಾಯ ಕಾರ್ಯಕ್ರಮಗಳು ಹೇಗಿರಬೇಕಿತ್ತು?
3. ಕೊರೊನಾ ಮತ್ತಿತರ ಪ್ರಾಕೃತಿಕ ಹಾಗೂ ಸಾಮಾಜಿಕ-ಆರ್ಥಿಕ ವಿಪತ್ತುಗಳನ್ನು ಎದುರಿಸಲು ನೆರವಾಗಬಲ್ಲ ಸಾರ್ವತ್ರಿಕ ಸಾಮಾಜಿಕ ಭದ್ರತಾ ಕ್ರಮಗಳು ಯಾವುವು? ಅವುಗಳನ್ನು ಜಾರಿ ಮಾಡಲು ಏನು ಮಾಡಬೇಕು?
4. ಇತರ ರಾಜ್ಯಗಳಲ್ಲಿ ಮತ್ತು ದೇಶಗಳಲ್ಲಿ ಜಾರಿ ಮಾಡಲಾಗಿರುವ ಸಾರ್ವತ್ರಿಕ ಸಾಮಾಜಿಕ ಭದ್ರತಾ ಕ್ರಮಗಳಿಂದ ಏನು ಕಲಿಯಬಹುದು?

ಪರ್ಯಾಯ ಮಾಧ್ಯಮ ಏಕೆ? ಹೇಗೆ?

2014ರಿಂದೀಚೆಗೆ ಅದರಲ್ಲೂ ಕೊರೊನಾ ಕಾಲದಲ್ಲಿ (ಪ್ರಮುಖವಾಗಿ 'ಮುಖ್ಯವಾಹಿನಿ') ಮಾಧ್ಯಮಗಳ ಪಾತ್ರದ ಕುರಿತು ವ್ಯಾಪಕವಾಗಿ ತೀಕ್ಷ್ಣ ವಿಮರ್ಶೆ ಕೇಳಿ ಬಂದಿದೆ. ಮುಖ್ಯವಾಹಿನಿ ಮತ್ತು ಗಟರ್ ಸಾಮಾಜಿಕ ಮಾಧ್ಯಮಗಳು, ಸಹಮತ, ಬದಲಿ ಸತ್ಯ, ಬದಲಿ ವಾಸ್ತವ – ಇವುಗಳ ಸಾಮೂಹಿಕ ಉತ್ಪಾದನೆಯಲ್ಲಿ ತೊಡಗಿವೆ. ಆಳುವವರ ಪರವಾದ, ಅವರ ಯಜಮಾನಿಕೆಯನ್ನು ಬಲಪಡಿಸುವ ಮತ್ತು ಜನವಿರೋಧಿಯಾದ ಇವುಗಳ ಫೇಕ್ ಪ್ರಚಾರಕ್ಕೆ ಇವನ್ನು ಬಳಸುತ್ತಿವೆ ಎನ್ನಲಾಗಿದೆ. ಹಾಗಾಗಿ ಬದಲಿ ಮಾಧ್ಯಮವನ್ನು ರೂಪಿಸಬೇಕೆಂಬ ಕೂಗು ಕೇಳಿಬಂದಿದೆ. ಆದ್ದರಿಂದ "ಪರ್ಯಾಯ ಮಾಧ್ಯಮ ಏಕೆ? ಹೇಗೆ?" ಎಂಬ ಉಪ ಥೀಮ್ ಕುರಿತು ಕೆಳಗೆ ಕಾಣಿಸಿದ 5 ಪ್ರಶ್ನೆಗಳ ಪ್ರಶ್ನಾವಳಿ ಸುತ್ತ ನಾಡಿನ ಮಾಧ್ಯಮಗಳ ಸಂಪಾದಕರು, ಪತ್ರಕರ್ತರು, ಮಾಧ್ಯಮ ತಜ್ಞರು ಮತ್ತಿತರ ಪರಿಣತರು ಹಾಗೂ ಆಸಕ್ತರುಗಳ ಜೊತೆಗೆ ಒಂದು ಸಂವಾದ ಏರ್ಪಡಿಸಲಾಗುತ್ತಿದೆ.

1. ಮುಖ್ಯವಾಹಿನಿ ಮಾಧ್ಯಮದ ಸಮಸ್ಯೆಗಳೇನು? ಕೊರೊನಾ ಸಂದರ್ಭದಲ್ಲಿ ಅವು ಹೇಗೆ ಕೆಲಸ ಮಾಡಿದವು?
2. ಮುಖ್ಯವಾಹಿನಿ ಮಾಧ್ಯಮಗಳನ್ನು 'ಸುಧಾರಿಸಲು' ಸಾಧ್ಯವಿಲ್ಲವೇ? ಇದೆ ಎನ್ನುವುದಾದರೆ ಏನು ಮಾಡಬೇಕು?
3. ಇಲ್ಲವಾದರೆ ಬದಲಿ ಏನು? ಬದಲಿ ಮಾಧ್ಯಮ ಹೇಗಿರಬೇಕು ?
4. ಸಾಮಾಜಿಕ ಮಾಧ್ಯಮಗಳ ಸಮಸ್ಯೆಗಳೇನು? ಕೊರೊನಾ ಸಂದರ್ಭದಲ್ಲಿ ಅವು ಹೇಗೆ ಕೆಲಸ ಮಾಡಿದವು?
5. ದೇಶದಲ್ಲಿ ಮತ್ತು ರಾಜ್ಯದಲ್ಲಿ ಬೆಳೆಯುತ್ತಿರುವ ಬದಲಿ ಮಾಧ್ಯಮದ ನಿಮ್ಮ ಕುರಿತು ಅಭಿಪ್ರಾಯ ಏನು?

ಮಾನವ ಹಕ್ಕು/ಸ್ವಾತಂತ್ರ್ಯ: ಕೊರೊನಾ ಕಾಲದಲ್ಲಿ ಮತ್ತು ನಂತರ

ಕೊರೊನಾ ಕಾಲದಲ್ಲಿ ಸಂವಿಧಾನ ದತ್ತ ಮತ್ತು ಸ್ವಾತಂತ್ರ್ಯ ಚಳುವಳಿಯ ಮತ್ತು ಆನಂತರದ ಹೋರಾಟಗಳ ಮೂಲಕ ಪಡೆದುಕೊಂಡ, ಪೂರ್ಣವಾಗಿ ಅಲ್ಲದಿದ್ದರೂ ಆಂಶಿಕವಾಗಿಯಾದರೂ ಸಾಧಿತವಾದ (ಜೀವನೋಪಾಯದ ಹಕ್ಕು ಸೇರಿದಂತೆ) ಎಲ್ಲ ಮಾನವ ಹಕ್ಕು/ಸ್ವಾತಂತ್ರ್ಯಗಳ ಮೇಲೆ ದಾಳಿ ನಡೆಯುತ್ತಿದೆ ಎನ್ನಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಅದು ಸತತವಾಗಿ ಹೆಚ್ಚುತ್ತಾ ಬಂದಿದ್ದರೂ ಕೊರೊನಾ ಕಾಲದಲ್ಲಿ ಅದರ ತೀಕ್ಷ್ಣತೆ ತಾರಕಕ್ಕೇರಿದೆ ಎನ್ನಲಾಗಿದೆ.

ಆದ್ದರಿಂದ "ಮಾನವ ಹಕ್ಕು/ಸ್ವಾತಂತ್ರ್ಯ : : ಕೊರೊನಾ ಕಾಲದಲ್ಲಿ ಮತ್ತು ನಂತರ" ಎಂಬ ಉಪ ಥೀಮ್ ಕುರಿತು ಕೆಳಗೆ ಕಾಣಿಸಿದ 5 ಪ್ರಶ್ನೆಗಳ ಪ್ರಶ್ನಾವಳಿ ಸುತ್ತ ನಾಡಿನ ನ್ಯಾಯಾಧೀಶರು, ವಕೀಲರು, ಕಾನೂನು ತಜ್ಞರು, ಮಾನವ ಹಕ್ಕು ಹೋರಾಟಗಾರರು, ಚಿಂತಕರು, ವಿವಿಧ ಜನವಿಭಾಗಗಳ ಸಂಘಟನೆಗಳ ನಾಯಕರು/ಪ್ರತಿನಿಧಿಗಳು ಮತ್ತಿತರ ಪರಿಣತರು ಹಾಗೂ ಆಸಕ್ತರುಗಳ ಜೊತೆಗೆ ಒಂದು ಸಂವಾದ ಏರ್ಪಡಿಸಲಾಗುತ್ತಿದೆ.

1. ಯಾವ ನಿರ್ದಿಷ್ಟ ಹಕ್ಕು/ಸ್ವಾತಂತ್ರ್ಯ ಹಕ್ಕುಗಳ ಮೇಲೆ ದಾಳಿ ನಡೆದಿದೆ? ದಾಳಿಯ ಸ್ವರೂಪವೇನು?
2. ಇದಕ್ಕೆ ಕೊರೊನಾ ಕಾರಣವೇ? ಅಥವಾ ಬರಿಯ ನೆಪವೇ? ನೆಪವಾದರೆ ನಿಜವಾದ ಕಾರಣಗಳೇನು?
3. ದಾಳಿ ತಾತ್ಕಾಲಿಕ ವಾದದ್ದೇ? ಅಥವಾ ಶಾಶ್ವತ ಸ್ವರೂಪದ್ದೇ? ಶಾಶ್ವತ ಸ್ವರೂಪದ್ದಾದರೆ ಅದರ ಉದ್ದೇಶಗಳೇನು?
4. ದಾಳಿಗೆ ಒಳಗಾದ ನಿರ್ದಿಷ್ಟ ಹಕ್ಕು/ಸ್ವಾತಂತ್ರ್ಯ ಹಕ್ಕುಗಳ ಮೇಲಿನ ದಾಳಿಯನ್ನು ಎದುರಿಸಿ, ಹಿಮ್ಮೆಟ್ಟಿಸುವುದು ಹೇಗೆ?
5. ಈ ದಾಳಿಯನ್ನು ಎದುರಿಸುವಲ್ಲಿ ಹಿಮ್ಮೆಟ್ಟಿಸುವಲ್ಲಿ ತೊಡಕುಗಳು ಯಾವುವು? ಅವುಗಳನ್ನು ನಿವಾರಿಸುವುದು ಹೇಗೆ?

ಪ್ರದರ್ಶನ ಕಲೆಗಳು : ಕೊರೊನಾ ಕಾಲದಲ್ಲಿ ಮತ್ತು ನಂತರ

ಪ್ರದರ್ಶನ ಕಲೆಗಳ (performing arts) ಪ್ರದರ್ಶನ ಪೂರ್ಣವಾಗಿ ನಿಂತು ಹೋಗಿರುವುದು ಕೊರೊನಾ ಕಾಲದ ದಾರುಣ ಪರಿಣಾಮಗಳಲ್ಲಿ ಒಂದು. ಆದ್ದರಿಂದ "ಪ್ರದರ್ಶನ ಕಲೆಗಳು : ಕೊರೊನಾ ಕಾಲದಲ್ಲಿ ಮತ್ತು ನಂತರ" ಈ ಉಪ ಥೀಮ್ ಕುರಿತು ಕೆಳಗೆ ಕಾಣಿಸಿದ 5 ಪ್ರಶ್ನೆಗಳ ಪ್ರಶ್ನಾವಳಿ ಸುತ್ತ ನಾಡಿನ ಕಲಾವಿದರು, ತಾಂತ್ರಿಕ/ತೆರೆಮರೆಯ ಸಹಾಯಕರು, ಸಂಘಟಕರು, ಕಲಾವಿಮರ್ಶಕರು ಮತ್ತಿತರ ಆಸಕ್ತರುಗಳ ಜೊತೆಗೆ ಒಂದು ಸಂವಾದ ಏರ್ಪಡಿಸಲಾಗುತ್ತಿದೆ.

1. ಕೊರೊನಾ ಕಾಲದಲ್ಲಿ ಪ್ರದರ್ಶನ ಕಲೆಗಳ (ನಾಟಕ, ಸಿನಿಮಾ, ಸಂಗೀತ, ನೃತ್ಯ, ಜಾನಪದ, ಸರ್ಕಸ್) ಪ್ರದರ್ಶನ ಪೂರ್ಣವಾಗಿ ನಿಂತು ಹೋಗಿವೆ. ಕಲಾವಿದರ ಮೇಲೆ, ತಾಂತ್ರಿಕ/ತೆರೆಮರೆಯ ಸಿಬ್ಬಂದಿ ಮೇಲೆ, ಸಮಾಜದ ಮೇಲೆ, ಕಲಾ ಪ್ರಕಾರದ ಮೇಲೆ ಆಗಿರುವ ಪರಿಣಾಮಗಳೇನು? ಇವುಗಳು ಕೊರೊನೋತ್ತರ ಕಾಲದಲ್ಲೂ ಮುಂದುವರೆಯಬಹುದೇ?
2. ಇದರಿಂದಾಗಿ ತಾತ್ಕಾಲಿಕವಾಗಿಯಂತೂ ಹೆಚ್ಚಿನ ಪ್ರದರ್ಶನ ಕಲೆಗಳು (ಅದರಲ್ಲೂ ಪ್ರಮುಖವಾಗಿ ಸಿನಿಮಾ) ಆನ್-ಲೈನ್ ವೇದಿಕೆಗಳ ಮೊರೆ ಹೋಗಿವೆ. ಇದರ ಸಾಧಕ-ಬಾಧಕಗಳೇನು? ಈ ವರೆಗೆ ಕಲಾವಿದರು, ಸಮಾಜ, ಕಲಾಪ್ರಕಾರ ಮತ್ತು ಸಾಮೂಹಿಕ ಸಂಸ್ಕೃತಿಗಳ ಮೇಲೆ ಅವುಗಳ ಪರಿಣಾಮಗಳೇನು? ಇದಕ್ಕೆ ಪರ್ಯಾಯವಿದೆಯೇ?
3. ಈ ಬದಲಾವಣೆ ತಾತ್ಕಾಲಿಕವೇ? ಅಥವಾ ಶಾಶ್ವತವಾಗಲಿವೆಯೇ? ಶಾಶ್ವತವಾಗುವುದಾದರೆ ಕಲಾವಿದರು, ಸಮಾಜ, ಕಲಾಪ್ರಕಾರ ಮತ್ತು ಸಾಮೂಹಿಕ ಸಂಸ್ಕೃತಿಗಳ ಮೇಲೆ ಅದರ ದೂರಗಾಮಿ ಪರಿಣಾಮಗಳೇನು?
4. ಆನ್-ಲೈನ್ ವೇದಿಕೆಗಳ ಒಡೆತನದ ಮತ್ತು ಆಳುವವರ ಸ್ವರೂಪದ ಪ್ರಭಾವ ಅದರ ಮೇಲೆ ಏನಿರುತ್ತದೆ?
5. ಈ ಬೆಳವಣಿಗೆಗಳು ಸಕಾರಾತ್ಮವೇ? ಅಲ್ಲದಿದ್ದರೆ ಈ ಕುರಿತು ಏನು ಮಾಡಬಹುದು?

ವೈಜ್ಞಾನಿಕ ಮನೋವೃತ್ತಿ : ಕೊರೊನಾ ಕಾಲದಲ್ಲಿ ಮತ್ತು ನಂತರ

ವೈಜ್ಞಾನಿಕ ಮನೋವೃತ್ತಿ (ಅಥವಾ ಅದರ ಅಭಾವ) ಈ ಕಾಲದಲ್ಲಿ ಮುನ್ನೆಲೆಗೆ ಬಂದ ಮುಖ್ಯ ಪ್ರಶ್ನೆಗಳಲ್ಲೊಂದು. ಆದ್ದರಿಂದ

"ವೈಜ್ಞಾನಿಕ ಮನೋವೃತ್ತಿ : ಕೊರೊನಾ ಕಾಲದಲ್ಲಿ ಮತ್ತು ನಂತರ" ಈ ಉಪ ಥೀಮ್ ಕುರಿತು ಕೆಳಗೆ ಕಾಣಿಸಿದ 5 ಪ್ರಶ್ನೆಗಳ ಪ್ರಶ್ನಾವಳಿ ಸುತ್ತ ನಾಡಿನ ವಿಜ್ಞಾನಿಗಳು, ವಿಜ್ಞಾನ ಬರಹಗಾರರು, ಸಂಶೋಧಕರು, ಜನವಿಜ್ಞಾನ ಚಳುವಳಿಗಾರರು ಮತ್ತಿತರರುಗಳ ಜೊತೆಗೆ ಒಂದು ಸಂವಾದ ಏರ್ಪಡಿಸಲಾಗುತ್ತಿದೆ.


ವೈರಸ್ ಹುಟ್ಟು ಮತ್ತು ಮೂಲದ ಕುರಿತು ವಿವಾದಗಳ ಕುರಿತು ನಿಮ್ಮ ಅಭಿಪ್ರಾಯ ಏನು?

ರೋಗ ಹರಡದಂತೆ ಸಾರ್ವಜನಿಕ ವೈಜ್ಞಾನಿಕ ಅರಿವು ಮೂಡಿಸುವುದರಲ್ಲಿ ಸೋಲು-ಗೆಲುವು ಗಳೇನು? ಮುಂದೇನು ಮಾಡಬಹುದು ?

1. ಕೊರೊನಾ ಸಂಬಂಧಿ ಮೌಢ್ಯದ ಪ್ರಚಾರ ವ್ಯಾಪಕವಾಗಿ ಆದವು. ಅವುಗಳನ್ನು ಪ್ರಜ್ಞಾಪೂರ್ವಕವಾಗಿ ಅಥವಾ
2. ಅಪ್ರಜ್ಞಾಪೂರ್ವಕವಾಗಿ ಮಾಡಿದ ಮತ್ತು ಅದನ್ನು ನಿರ್ದಿಷ್ಟ ಉದ್ದೇಶಗಳಿಗೆ ದುರ್ಬಳಕೆ ಮಾಡಿದ ವಿವಿಧ ಶಕ್ತಿ/ಸಂಸ್ಥೆಗಳು ಯಾವುವು? ಅವುಗಳ ಉದ್ದೇಶವೇನು? ಅದನ್ನು ಎದುರಿಸುವುದು ಹೇಗೆ?
3. ಕೊರೊನಾ 'ಪ್ರಕೃತಿಯ ಸೇಡು' ಎಂದು ಜನಜನಿತವಾಗಿರುವ ವಾದ ವೈಜ್ಞಾನಿಕವಾಗಿ ಎಷ್ಟು ಸರಿ?
4. ಕೊರೊನಾ ವಿರುದ್ಧ ಲಸಿಕೆ ಅಥವಾ ಔಷಧಿಯ ಅಭಿವೃದ್ಧಿ, ಉತ್ಪಾದನೆ, ಪರಿಣಾಮಕಾರಿ ವಿತರಣೆ (ಪೇಟೆಂಟ್
5. ಸೇರಿದಂತೆ) ಸಮಸ್ಯೆಗಳು ಯಾವುವು?



ಒಂದು ರಾಷ್ಟ್ರ, ಒಂದು ತೆರಿಗೆ–ದೇಶ ಚೈತನ್ಯಶೀಲ ಅರ್ಥವ್ಯವಸ್ಥೆಯನ್ನು ಅನುಭವಿಸಲು ಸಜ್ಜಾಗುತ್ತಿದೆ. –ಇದು ಜನವರಿ 19, 2017ರಜಿಎಸ್‌ಟಿ ಆರಂಭದ ಸಮಯದ 'ಕಮಲ ಸಂದೇಶ' ಪೋಸ್ಟರ್



ರಾಜ್ಯಗಳ ಹಕ್ಕುಗಳ ಭಂಡ ಉಲ್ಲಂಘನೆ

ಪ್ರಕಾಶ ಕಾರಟ್

ಕೇಂದ್ರ ಸರಕಾರ ಮತ್ತು ನರೇಂದ್ರ ಮೋದಿಯ 'ಒಂದು ರಾಷ್ಟ್ರ, ಒಂದು ತೆರಿಗೆ' ಎಂಬುದರಲ್ಲಿಯೇ ಒಕ್ಕೂಟ ತತ್ವ–ವಿರೋಧಿ ನಿಲುವು ಅಡಕವಾಗಿದೆ. ಇದು ವಿವಿಧ ವಲಯಗಳಲ್ಲಿ ರಾಜ್ಯಗಳ ಹಕ್ಕುಗಳನ್ನು ಸವೆಸುವ ಮೋದಿ ಸರಕಾರದ ಕೇಂದ್ರೀಕರಣದ ಧಾವಂತಕ್ಕೆ ಅನುಗುಣವಾಗಿಯೇ ಇದೆ. ಜಿಎಸ್‌ಟಿ ಕೇಂದ್ರ ಸರಕಾರದ ವಿತ್ತೀಯ ಸರ್ವಾಧಿಕಾರಶಾಹಿಯನ್ನು ಬಲಪಡಿಸಿದೆ, ರಾಜ್ಯಗಳನ್ನು ಭಿಕ್ಷುಕರ ಮಟ್ಟಕ್ಕೆ ಇಳಿಸಿದೆ. ಇವೆಲ್ಲವೂ ಜಿಎಸ್‌ಟಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಬೇಕಾದ, ಬಹುಶಃ ಅದನ್ನು ಸಂಪೂರ್ಣವಾಗಿ ತೆಗೆದು ಹಾಕಿ ಬೇರೆ ವ್ಯವಸ್ಥೆಯನ್ನು ರೂಪಿಸುವ ಅಗತ್ಯವನ್ನು ಎತ್ತಿ ತೋರುತ್ತವೆ.

ರಾಜ್ಯಗಳಿಗೆ ಸಲ್ಲಬೇಕಾದ ಸರಕು ಮತ್ತು ಸೇವೆಗಳ ತೆರಿಗೆ(ಜಿಎಸ್‌ಟಿ) ಪರಿಹಾರವನ್ನು ತೆರಲು ಕೇಂದ್ರ ಸರಕಾರದ ನಿರಾಕರಣೆ ಸ್ಪಷ್ಟವಾಗಿಯೂ ಕಾನೂನುಬಾಹಿರ ಮತ್ತು ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಬಂಧಗಳ ಸಂವಿಧಾನಿಕ ಯೋಜನೆಯನ್ನು ಉಲ್ಲಂಘಿಸುವಂತದ್ದು. ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಆಗಸ್ಟ್ 27ರಂದು ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಕೇಂದ್ರ ಸರಕಾರ 2020–21ರಲ್ಲಿ ರಾಜ್ಯಗಳಿಗೆ ಪರಿಹಾರ ಪಾವತಿ ಮಾಡಲು ಸಾಧ್ಯವಾಗುವುದಿಲ್ಲ, ಏಕೆಂದರೆ, ಪರಿಹಾರ ಅಧಿಭಾರ(ಸೆಸ್) ಸಂಗ್ರಹದಲ್ಲಿ ಮತ್ತು ಸರಕಾರಕ್ಕೆ ಬಂದಿರುವ ಆದಾಯಗಳಲ್ಲಿ ಒಂದು ದೊಡ್ಡ ಕೊರತೆ ಇದೆ ಎಂದು ಪ್ರಕಟಿಸಿದರು.

ಹಣಕಾಸು ಮಂತ್ರಿಗಳ ಪ್ರಕಾರ ಸೆಸ್ ಸಂಗ್ರಹ ಈ ವರ್ಷ 65,000 ಕೋಟಿ ರೂ. ತಲುಪಬಹುದಷ್ಟೇ, ಆದರೆ ರಾಜ್ಯಗಳಿಗೆ 3ಲಕ್ಷ ಕೋಟಿ ರೂ. ಪರಿಹಾರ ತೆರಬೇಕಾಗಿದೆ. ಆದ್ದರಿಂದ 2.35 ಲಕ್ಷ ಕೋಟಿ ರೂ.ಗಳ ಕೊರತೆಯಾಗುತ್ತದೆ. ಹಣಕಾಸು ಮಂತ್ರಿಗಳು ತೆರಿಗೆ ಆದಾಯದಲ್ಲಿ ಈ ಬಿಕ್ಕಟ್ಟನ್ನು 'ದೇವರ ಕೃತ್ಯ' ಎಂದು ವರ್ಣಿಸಿದರು, ಆಮೂಲಕ ಕೇಂದ್ರ ಸರಕಾರ ತನ್ನ ವಚನಗಳನ್ನು ಈಡೇರಿಸುವ ಹೊಣೆಗಾರಿಕೆಯಿಂದ ಕೈತೊಳೆದುಕೊಂಡರು.

ಜಿಎಸ್‌ಟಿ ಯೋಜನೆಯನ್ನು ತರುವಾಗ, ಕೇಂದ್ರ ಸರಕಾರ ರಾಜ್ಯಗಳಿಗೆ ವಾರ್ಷಿಕವಾಗಿ 14ಶೇ. ರೆವಿನ್ಯೂ ಬೆಳವಣಿಗೆಯನ್ನು ಖಾತ್ರಿಪಡಿಸುತ್ತದೆ, ಇದರಲ್ಲಿ ಕೊರತೆ ಬಿದ್ದರೆ ಅದಕ್ಕೆ ಹಣಕಾಸು ವರ್ಷ 2017ರಿಂದ ಪೂರ್ಣ ಐದು ವರ್ಷಗಳ ಕಾಲ ಕೇಂದ್ರ ಸರಕಾರ ಪರಿಹಾರ ನೀಡುತ್ತದೆ ಎಂದು ವಚನ ನೀಡಿತ್ತು.

ಈ ವಚನ ಜಿಎಸ್‌ಟಿ(ರಾಜ್ಯಗಳಿಗೆ ಪರಿಹಾರ) ಕಾಯ್ದೆ, 2017ರಲ್ಲಿ ಈ ಅಂಶವನ್ನು ಸೇರಿಸುವ ಮೂಲಕ ಬಿಂಬಿತವಾಗಿದೆ. ತೆರಿಗೆ ವಿಧಿಸುವ ತಮ್ಮ ಸಂವಿಧಾನಿಕ ಹಕ್ಕನ್ನು ಬಿಟ್ಟು ಕೊಡಲು ಮನಸ್ಸಿಲ್ಲದ ರಾಜ್ಯಗಳನ್ನು ಒಪ್ಪಿಸಲಿಕ್ಕಾಗಿ ಇದನ್ನು ಮಾಡಲಾಯಿತು.

'ದೇವರ ಕೃತ್ಯ'ದ ಅಥವ 'ಫೋರ್ಸ್ ಮೆಜೂರ್'(ಅನಿವಾರ್ಯ ನಿರ್ಬಂಧ) ಮಾತಾಡುವುದು ಇಲ್ಲಿ ಅಪ್ರಾಸಂಗಿಕ, ಅದು ಇಲ್ಲಿ ಅನ್ವಯವಾಗುವುದಿಲ್ಲ, ಏಕೆಂದರೆ ಇದು ತೆರಿಗೆ ಆದಾಯಗಳನ್ನು ಹಂಚಿಕೊಳ್ಳುವುದರ ಕುರಿತ ಕೇಂದ್ರ ಮತ್ತು ರಾಜ್ಯಗಳ ನಡುವಿನ ಒಂದು ಸಂವಿಧಾನಿಕ ವ್ಯವಸ್ಥೆಯ ಭಾಗವಾಗಿದೆ. ಅಲ್ಲದೆ ಕಳೆದ ವರ್ಷವೂ, 2019–20ರಲ್ಲೂ ಸೆಸ್ ಸಂಗ್ರಹದಲ್ಲಿ ಕೊರತೆ ಉಂಟಾಗಿತ್ತು ಎಂದು ಸ್ವತಃ ಹಣಕಾಸು ಮಂತ್ರಿಗಳೂ ಹೇಳಿದ್ದಾರೆ. ಹಣಕಾಸು ಮಂತ್ರಾಲಯದ ಪ್ರಕಾರ ರಾಜ್ಯಗಳಿಗೆ ಪರಿಹಾರ ಮೊತ್ತ 1.65 ಲಕ್ಷ ಕೋಟಿ ರೂ.ಗಳಾಗುತ್ತದೆ, ಆದರೆ ಸೆಸ್ ಸಂಗ್ರಹವಾದದ್ದು 95,500 ಕೋಟಿ ರೂ. ನಿಜಸಂಗತಿಯೆಂದರೆ, ಜಿಎಸ್‌ಟಿ ಆದಾಯಗಳು ಮತ್ತು ಪರಿಹಾರ ಸೆಸ್ ಏರಿಕೆ ಕಾಣದೆ ಸ್ಥಗಿತಗೊಂಡದ್ದು ಅಥವ ಇಳಿಮುಖಗೊಂಡದ್ದು ಆರ್ಥಿಕ ನಿಧಾನಗತಿ ಅದಾಗಲೇ ಕೊವಿಡ್ ಎರಗುವ ಮೊದಲೇ ಆರಂಭವಾಗಿದ್ದುದರಿಂದ.

ತನ್ನ ವಚನಭ್ರಷ್ಟತೆಯ ನಂತರ ಕೇಂದ್ರ ಸರಕಾರ, ರಾಜ್ಯಗಳಿಗೆ ಸಲ್ಲಬೇಕಾದ ಪರಿಹಾರದಲ್ಲಿ ಕೊರತೆಯನ್ನು ತುಂಬಲಿಕ್ಕಾಗಿ ಸಾಲ ತರಲು ಎರಡು ಆಯ್ಕೆಗಳನ್ನು ಮುಂದಿಟ್ಟಿತು. ಇವೆರಡೂ ಪ್ರಸ್ತಾವನೆಗಳಲ್ಲಿ ನ್ಯಾಯವಿಲ್ಲ, ಅವುಗಳ ಅಂತಿಮ ಫಲಿತಾಂಶವೆಂದರೆ ರಾಜ್ಯಗಳು ಸಾಲಗ್ರಸ್ತವಾಗುತ್ತವೆ ಮತ್ತು ಬಡ್ಡಿ ಪಾವತಿಯ ಹೊರೆಯನ್ನೂ ಹೊರಬೇಕಗುತ್ತದೆ.

ರಾಜ್ಯಗಳು ಕಾನೂನು ಪ್ರಕಾರ ಸಲ್ಲಬೇಕಾದ್ದನ್ನು ಪಡೆಯುವ ಬದಲು ಸಾಲಬಲೆಗೆ ಸಿಲುಕಿ ಕೊಳ್ಳುತ್ತವೆ ಮತ್ತು ಅವುಗಳ ಮೇಲೆ ಭವಿಷ್ಯದಲ್ಲಿ ರೆವಿನ್ಯೂ ಕೊರತೆಯನ್ನು ತುಂಬಲು ಪರಿಹಾರ ನಿಧಿ ಇಲ್ಲವಾದಾಗ ಸಾಲಕ್ಕೆ ಬಡ್ಡಿ ಕಟ್ಟುವ ಹೊರೆಯನ್ನು ಹೊರಬೇಕಾಗುತ್ತದೆ.

ರಾಜ್ಯಗಳಿಗೆ ಸಲ್ಲಬೇಕಾದ್ದನ್ನು ತೆರುವುದಿಲ್ಲ ಎಂಬ ನಿಲುವು ರಾಜ್ಯಗಳು ಮಹಾಸೋಂಕನ್ನು, ನಿರ್ವಹಿಸುವಲ್ಲಿ ಮುಂಚೂಣಿಯಲ್ಲಿರುವಾಗ, ಹಾಗೂ ಆರೋಗ್ಯ ಮತ್ತು ಕಲ್ಯಾಣ ಕ್ರಮಗಳಿಗೆ ಹೆಚ್ಚಿನ ಖರ್ಚು ಮಾಡಬೇಕಾಗಿರುವ ಸಂದರ್ಭದಲ್ಲಂತೂ ಮತ್ತಷ್ಟು ಆಘಾತಕಾರಿ. ರಾಜ್ಯಗಳ ಮೇಲೆ ಹೇರಿರುವ ಹಣಕಾಸು ಬಿಕ್ಕಟ್ಟನ್ನು ಕೇರಳದ ಅಂಕಿ–ಅಂಶಗಳೊಂದಿಗೆ ಉದಹರಿಸಬಹುದು.

ಈ ಹಣಕಾಸು ವರ್ಷದ ನಾಲ್ಕು ತಿಂಗಳುಗಳಿಗೆ, ಅಂದರೆ ಎಪ್ರಿಲ್ 1 ರಿಂದ ಜುಲೈ 31 ರ ವರೆಗೆ ಕೇರಳಕ್ಕೆ ನೀಡಬೇಕಾದ ಪರಿಹಾರದ ಮೊತ್ತ 7100 ಕೋಟಿ ರೂ.ಗಳು. ಕೇಂದ್ರ ಈ ವರ್ಷದ ಉಳಿದ ತಿಂಗಳುಗಳಲ್ಲಿಯೂ ಕೊಡದಿದ್ದರೆ ಕೇರಳಕ್ಕೆ 16,000 ಕೋಟಿ ರೂ. ವಂಚಿಸಿದಂತಾಗುತ್ತದೆ. ಇದು ಮಹಾಸೋಂಕನ್ನು ಎದುರಿಸುವ ಮತ್ತು ಈ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಜನಗಳಿಗೆ ಒದಗಿಸಬೇಕಾದ ಪರಿಹಾರ ಮತ್ತು ಕಲ್ಯಾಣ ಕ್ರಮಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

ಇದರಿಂದ ಹೊರಬರುವ ಏಕೈಕ ದಾರಿಯೆಂದರೆ, ಕೇಂದ್ರ ಸರಕಾರ ಸಾಲ ಮಾಡಿ ಪರಿಹಾರದ ಮೊತ್ತವನ್ನು ಸಂಗ್ರಹಿಸಿ ರಾಜ್ಯಗಳಿಗೆ ತೆರಬೇಕು. ಕೇಂದ್ರವು ರಿಝರ್ವ್ ಬ್ಯಾಂಕಿನಿಂದ ಒಂದು ಕಡಿಮೆ ಬಡ್ಡಿದರದಲ್ಲಿ, ಅದು ಬ್ಯಾಂಕುಗಳು ಸಾಲ ಪಡೆಯಲು ವಿಧಿಸುವ ರೆಪೊ ದರ ಮುಂತಾದ ದರದಲ್ಲಿ ಸಾಲ ಪಡೆಯಬಹುದು ಎಂದು ಕೆಲವು ಅರ್ಥಶಾಸ್ತ್ರಜ್ಞರು ಸೂಚಿಸಿರುವಂತೆ ಮಾಡಬಹುದು.

ಹೆಚ್ಚಿನ ರಾಜ್ಯಸರಕಾರಗಳು ತಮ್ಮ ಪರಿಹಾರ ಬಾಕಿಯನ್ನು ಕೊಡಲು ಕೇಂದ್ರ ಸರಕಾರ ಸಾಲ ತರಬೇಕು ಎನ್ನುತ್ತಿವೆ. ಈಗಾಗಲೇ ಆರು ರಾಜ್ಯ ಸರಕಾರಗಳು ರಾಜ್ಯಗಳು ಸಾಲ ಎತ್ತುವ ಪ್ರಸ್ತಾವಗಳನ್ನು ತಿರಸ್ಕರಿಸುತ್ತ, ಕೇಂದ್ರ ಸರಕಾರವೇ ಹಾಗೆ ಮಾಡಲಿ ಎಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಇನ್ನಷ್ಟು ರಾಜ್ಯಗಳು ಇದನ್ನು ಅನುಸರಿಸಲಿವೆ.

ಇದು ಜಿಎಸ್‌ಟಿ ವ್ಯವಸ್ಥೆಯತ್ತ ಎರಡನೇ ದೃಷ್ಟಿ ಹರಿಸಬೇಕಾದ ಸಮಯ ಕೂಡ ಆಗಿದೆ. ಈ ವ್ಯವಸ್ಥೆ ಆರಂಭವಾದ ಮೂರು ವರ್ಷಗಳಲ್ಲಿ ಜಿಎಸ್‌ಟಿಯಿಂದ ನಿರೀಕ್ಷಿತ ಮಟ್ಟದಲ್ಲಿ ಆದಾಯಗಳು ಉಂಟಾಗಿಲ್ಲ. ಕೊವಿಡ್ ಅವಧಿಯನ್ನು ಬಿಟ್ಟರೂ, ಅರ್ಥವ್ಯವಸ್ಥೆಯ ನಿಧಾನಗತಿಯ ಬೆಳವಣಿಗೆಯ ಅರ್ಥವೆಂದರೆ ಜಿಎಸ್‌ಟಿಯಿಂದ ಉಂಟಾಗುವ ಆದಾಯಗಳಲ್ಲಿ ಸ್ಥಗಿತತೆ ಅಥವ ಕೊರತೆಗಳು. ಇದು ರಾಜ್ಯಗಳನ್ನು ಮಾತ್ರವಲ್ಲ, ಕೇಂದ್ರವನ್ನೂ ತಟ್ಟುತ್ತದೆ.

ಕೊವಿಡ್ ಮಹಾಸೋಂಕು ಮತ್ತು ತೀವ್ರ ಆರ್ಥಿಕ ಸಂಕುಚನ ರಾಜ್ಯಗಳು ತಮ್ಮ ತೆರಿಗೆ ವಿಧಿಸುವ ಹಕ್ಕುಗಳನ್ನು ಬಿಟ್ಟುಕೊಟ್ಟ ಮೇಲೆ ಎಂತಹ ಅಸಹಾಯಕ ಸ್ಥಿತಿಗೆ ಇಳಿದಿವೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ತೋರಿಸಿಕೊಟ್ಟಿವೆ. ಕೇಂದ್ರ ಸರಕಾರದ ಮತ್ತು ನರೇಂದ್ರ ಮೋದಿಯ 'ಒಂದು ರಾಷ್ಟ್ರ, ಒಂದು ತೆರಿಗೆ' ಎಂಬುದರಲ್ಲಿಯೇ ಒಕ್ಕೂಟ ತತ್ವ–ವಿರೋಧಿ ನಿಲುವು ಅಡಕವಾಗಿದೆ. ಇದು ವಿವಿಧ ವಲಯಗಳಲ್ಲಿ ರಾಜ್ಯಗಳ ಹಕ್ಕುಗಳನ್ನು ಸವೆಸುವ ಮೋದಿ ಸರಕಾರದ ಕೇಂದ್ರೀಕರಣದ ಧಾವಂತಕ್ಕೆ ಅನುಗುಣವಾಗಿಯೇ ಇದೆ.

ಜಿಎಸ್‌ಟಿ ಕೇಂದ್ರ ಸರಕಾರದ ವಿತ್ತೀಯ ಸರ್ವಾಧಿಕಾರಶಾಹಿಯನ್ನು ಬಲಪಡಿಸಿದೆ, ರಾಜ್ಯಗಳನ್ನು ಭಿಕ್ಷುಕರ ಮಟ್ಟಕ್ಕೆ ಇಳಿಸಿದೆ. ಇವೆಲ್ಲವೂ ಜಿಎಸ್‌ಟಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಬೇಕಾದ, ಬಹುಶಃ ಅದನ್ನು ಸಂಪೂರ್ಣವಾಗಿ ತೆಗೆದು ಹಾಕಿ ಬೇರೆ ವ್ಯವಸ್ಥೆಯನ್ನು ರೂಪಿಸುವ ಅಗತ್ಯವನ್ನು ಎತ್ತಿ ತೋರುತ್ತವೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಆಂದೋಲನ

29 ಸಾವಿರ ಕೋಟಿ ರೂ.ಸಾಲದ 'ದಾರಿ'

ಕರ್ನಾಟಕಕ್ಕೆ ಎಪ್ರಿಲ್1 , 2020ರಿಂದ ಜುಲೈ 31, 2020ರ ವರೆಗಿನ ಒಟ್ಟು ರೂ. 13,674 ಕೋಟಿ ರೂ. ಜಿಎಸ್‌ಟಿ ಪರಿಹಾರ ಖೋತಾ ಆಗುತ್ತಿದೆ. ಇದಲ್ಲದೆ ಸೆಸ್ ರೂಪದಲ್ಲೂ 6965 ಕೋಟಿ ರೂ. ಕಳೆದುಕೊಳ್ಳದೆ. ಆದರೂ ಕರ್ನಾಟಕದ ಬಿಜೆಪಿ ಸರಕಾರ 'ಘನ ಮೊದಿ ಸರಕಾರ ತೋರಿಸಿರುವ ಮೊದಲ ದಾರಿ'ಯನ್ನು 'ಅಯ್ಕೆ' ಮಾಡಿಕೊಂಡಿದೆ. ಅಂದರೆ, ಹೆಚ್ಚಿನ ರಾಜ್ಯಸರಕಾರಗಳು ತಮ್ಮ ಪರಿಹಾರ ಬಾಕಿಯನ್ನು ಕೊಡಲು ಕೇಂದ್ರ ಸರಕಾರ ಸಾಲ ತರಬೇಕು ಎನ್ನುತ್ತಿರುವಾಗ, ಈಗಾಗಲೇ ಆರು ರಾಜ್ಯ ಸರಕಾರಗಳು ರಾಜ್ಯಗಳು ಸಾಲ ಎತ್ತುವ ಪ್ರಸ್ತಾವಗಳನ್ನು ತಿರಸ್ಕರಿಸುತ್ತ, ಕೇಂದ್ರ ಸರಕಾರವೇ ಹಾಗೆ ಮಾಡಲಿ ಎಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುವಾಗ, ಇನ್ನಷ್ಟು ರಾಜ್ಯಗಳು ಇದನ್ನು ಅನುಸರಿಸಲಿರುವಾಗ, **ಕರ್ನಾಟಕದ ಬಿಜೆಪಿ ಸರಕಾರ ಒಟ್ಟು 29,360 ಕೋಟಿ ರೂ.ಸಾಲ ಪಡೆಯುವ, ಅದಕ್ಕೆ ತಾನೇ ಬಡ್ಡಿ ಕಟ್ಟುವ 'ದಾರಿ'ಯನ್ನು 'ಆಯ್ದು' ಕೊಂಡಿದೆ!**



ವ್ಯಂಗ್ಯಚಿತ್ರ: ಪಂಜು ಗಂಗೊಳ್ಳಿ/ ಫೇಸ್‌ಬುಕ್

ಕೊವಿಡ್ 19, ಲಾಕ್ ಡೌನ್ ದುಷ್ಪರಿಣಾಮಗಳು



ಬಡವರು, ವಂಚಿತರ ಮೇಲೆಯೇ ಹೆಚ್ಚು

ಮಹಾ ಸಾಂಕ್ರಾಮಿಕಗಳು ಒಂದರ್ಥದಲ್ಲಿ ಅಸಮಾನತೆಯ ಸಮಾಜದಲ್ಲಿ ಸಮಾನತೆಯನ್ನು ತರುವಂತವು, ಏಕೆಂದರೆ ಅವು ಜಾತಿ,ವರ್ಗ, ಧರ್ಮಗಳ ಬೇಧ-ಭಾವವಿಲ್ಲದೆ ಎರಗುತ್ತವೆಎಂದು ಹೇಳುವವರಿದ್ದಾರೆ. ಆದರೆ ವಾಸ್ತವತೆ ತದ್ವಿರುದ್ಧವೇ ಅಗಿದೆ ಎನ್ನುತ್ತಾರೆ ಇಬ್ಬರು ಸಂಶೋಧಕರುಗಳಾದ ಪ್ರೊ. ಅಶ್ವಿನಿ ದೇಶಪಾಂಡೆ, ಅಶೋಕ ವಿಶ್ವವಿದ್ಯಾಲಯ ಮತ್ತು ಪ್ರೊ.ರಾಜೇಶ ರಾಮಚಂದ್ರನ್, ಹೈಡೆಲ್‌ಬರ್ಗ್ ವಿಶ್ವವಿದ್ಯಾಲಯ(Differential impact of COVID-19 and the lockdown, The Hindu, ಆಗಸ್ಟ್ 22). ಇವರ ವಿಶ್ಲೇಷಣೆಯ ಪ್ರಕಾರ ವಾಸ್ತವವಾಗಿ ಕೊವಿಡ್-19 ಮತ್ತು ಅದರ ಪರಿಣಾಮವಾದ ಲಾಕ್‌ಡೌನ್ ನಮ್ಮ ಸಮಾಜದಲ್ಲಿ ಈಗಾಗಲೇ ಇರುವ ಅನಾನುಕೂಲಗಳನ್ನು ಮತ್ತಷ್ಟು ಉಲ್ಬಣಗೊಳಿಸಿವೆ.



ಸಂಗ್ರಹಾನುವಾದ: **ಶ್ರೃ. ಶಂ. ನಾ.**

"ಪಿಡುಗು, ಯುದ್ಧ, ಕ್ರಾಂತಿ ಮತ್ತು ಪ್ರಭುತ್ವದ ಕುಸಿತ ಈ ನಾಲ್ಕು ದುರಂತಗಳು ಮಾನವ ಇತಿಹಾಸದುದ್ದಕ್ಕೂ ಹೆಚ್ಚಿನ ಆರ್ಥಿಕ ಸಮಾನತೆ ಸೃಷ್ಟಿಸಿವೆ" ಎಂದು ಆಸ್ಟ್ರೀಯ ದ ಆರ್ಥಿಕ ಇತಿಹಾಸ ತಜ್ಞ ವಾಲ್ಟರ್ ಶೀಡೆಲ್ ತನ್ನ ಪುಸ್ತಕ "The Great Leveller" (ಮಹಾ ಸಮಕಾರಿ)ನಲ್ಲಿ ವಾದಿಸುತ್ತಾರೆ. ಪ್ರಸ್ತುತ ವಿಶ್ವವು ಬೃಹತ್ ಕೋವಿಡ್ 19 ಪಿಡುಗನ್ನು ಎದುರಿಸುತ್ತಿದೆ. ಶೀಡೆಲ್ ನ ವಿಶ್ಲೇಷಣೆಯ ಅನುಸಾರ ಹೆಚ್ಚಾದ ಮರಣ ಪ್ರಮಾಣ ದಿಂದ ದುಡಿಮೆಯ ದರ ಹೆಚ್ಚುವ ಮೂಲಕ ಅಸಮಾನತೆ ಇಳಿಯುತ್ತದೆ. ಪ್ರಸ್ತುತ ಪಿಡುಗಿಗೆ ಇವರ ವಿಶ್ಲೇಷಣೆ ಎಷ್ಟು ಸರಿ ಹೋಗುತ್ತದೆ ಎನ್ನುವುದು ಗೊತ್ತಾಗುವುದು ಈ ಪಿಡುಗು ನಿರ್ಮೂಲನೆ ಆದ ಮೇಲೆಯೇ. ಆದರೆ, ಈ ರೋಗ ಯಾರ ಮೇಲೆ ಬೇಕಾದರೂ ದಾಳಿ ಮಾಡುವುದರಿಂದ ಮತ್ತು ಇದರಿಂದಾದ ಲಾಕ್ ಡೌನ್ ನಿಂದಾಗಿ ಎಲ್ಲಾ ಆದಾಯಗಳ ಮತ್ತು ವೃತ್ತೀಯ ವಿಭಾಗಗಳಲ್ಲಿಯೂ ಅಪಾರ ಪ್ರಮಾಣದ ಕೆಲಸದ ಖೋತಾ ಆಗಿರುವುದು ಮತ್ತು ಆರ್ಥಿಕ ಸಂಕಷ್ಟ ಹೆಚ್ಚುತ್ತಿರುವುದರಿಂದ ಸರಳವಾಗಿ ಈ ಪಿಡುಗನ್ನು ಒಂದು ಸಮಕಾರಿ ಎಂದು ಕರೆಯುತ್ತಾರೆ.

ವಂಚಿತರು ಹೆಚ್ಚಿನ ಅಪಾಯದಲ್ಲಿ :

ಈ ಸರಳ ವಿವರಣೆಯನ್ನು ಕೇಂದ್ರೀಕರಿಸಿಕೊಂಡರೆ, ಪ್ರಾಥಮಿಕ ಅಂಕಿಅಂಶಗಳು ಮತ್ತು ವಿಶ್ವದ ವಿವಿಧ ಬಾಗಗಳಿಂದ ಬಂದಿರುವ ಅಪ್ರತ್ಯಕ್ಷ ಪುರಾವೆಗಳು ಈ ರೋಗದ ಪ್ರಸಂಗಗಳು ವರ್ಗ –ತಟಸ್ಥವಾಗೇನಿಲ್ಲ ಎಂದು ಸೂಚಿಸುತ್ತಿವೆ : ಬಡವರು ಮತ್ತು ಆರ್ಥಿಕವಾಗಿ ದುರ್ಬಲರಾದ ಜನತೆ ವೈರಾಣು ಸೋಂಕಿಗೆ ಸಿಲುಕುವ ಮತ್ತು ಸಾವನ್ನಪ್ಪುವ ಸಾಧ್ಯತೆ ಬಲವಾಗಿದೆ. ಎಷ್ಟರ ಮಟ್ಟಿಗೆಂದರೆ ಆರ್ಥಿಕ ವರ್ಗ ಮತ್ತು ಸಾಮಾಜಿಕ ಅಸ್ಮಿತೆ (ಉದಾ: ಬುಡಕಟ್ಟು ಜನಾಂಗೀಯ ಅಥವಾ ಜಾತಿ)ಗಳು ಒಂದಕ್ಕೊಂದು ಜೊತೆಯಾಗಿಬಿಡುತ್ತವೆ ಮತ್ತು ಇದು ಕೋವಿಡ್ 19 ರಿಂದಾಗಿ ಸಾಮಾಜಿಕವಾಗಿ ವಂಚಿತರಾದ ಗುಂಪುಗಳ ಮರಣ ಪ್ರಮಾಣ ಸಾಧ್ಯತೆ ಜಾಸ್ತಿ ಇದೆ ಎನ್ನುವುದನ್ನು ಸೂಚಿಸುತ್ತಿದೆ.

ಬುಡಕಟ್ಟುಗಳು ಮತ್ತು ಜನಾಂಗೀಯ ಅಲ್ಪಸಂಖ್ಯಾತರನ್ನು ಹೆಚ್ಚು ಪ್ರತಿನಿಧಿಸುವ ಕಾರ್ಮಿಕ ಶಕ್ತಿಗಳು ಕಡಿಮೆ ಕೂಲಿ ಪಡೆಯುವವರು ಮತ್ತು ಕಡಿಮೆ ಓದಿದ ಕೆಲಸಗಾರರ ಮೇಲೆ ಮರಣ ಪ್ರಮಾಣವನ್ನು ಮೀರಿದ ಆರ್ಥಿಕ ಪರಿಣಾಮಗಳು ಇಂದಿನ ಪಿಡುಗಿನಿಂದಾಗಿ ಹೆಚ್ಚಿನದಾಗಿ ಬೀರುವ ಸಾಧ್ಯತೆ ಇದೆ. ಯುನೈಟೆಡ್ ಕಿಂಗ್ಡಮ್ ಮತ್ತು ಅಮೇರಿಕಾ ದೇಶಗಳ ಪ್ರಾಥಮಿಕ ಪುರಾವೆಗಳು ಬುಡಕಟ್ಟುಗಳು ಮತ್ತು ಜನಾಂಗೀಯ ಅಲ್ಪಸಂಖ್ಯಾತರು ನಿರುದ್ಯೋಗದ ಸಮಸ್ಯೆ ಎದುರಿಸುವ ಅಪಾಯ ಹೆಚ್ಚು ಎಂದು ತಿಳಿಸುತ್ತಿವೆ.

ಭಾರತಕ್ಕೆ ಸಂಬಂಧಿಸಿದಂತೆ ಕೋವಿಡ್ 19 ನಿದರ್ಶನಗಳ ಮತ್ತು ಮರಣ ಪ್ರಮಾಣಗಳು ಸರಾಸರಿ ಅಂಕಿಅಂಶ ಲಭ್ಯವಿಲ್ಲದಿರುವುದರಿಂದ ಈ ವೈರಾಣುವಿನಿಂದಾಗಿ ಕೆಲವು ಜಾತಿ ಗುಂಪುಗಳು ಹೆಚ್ಚು ದಾಳಿಗೊಳಗಾಗಿದ್ದಾರೆಯೇ ಎಂಬುದರ ಬಗ್ಗೆ ವಿಮರ್ಶಿಸಲು ಸಾಧ್ಯವಿಲ್ಲ.

ಭಾರತದ ಲಾಕ್ಡೌನ್:

ಎಲ್ಲೆಡೆ ಈ ಪಿಡುಗು ನಿಯಂತ್ರಣ ಮಾಡಲು ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಮುಚ್ಚುವುದು ಮತ್ತು ವಿವಿಧ ಹಂತಗಳ ಕಠಿಣತೆಯ ಮೂಲಕ ಸಾಮಾಜಿಕ ಅಂತರ ವಿಧಿಸುವ ಕ್ರಮಗಳನ್ನು ಕೈಗೊಳ್ಳಲಾಗಿದೆ. ಭಾರತದಲ್ಲಿ ಮಾರ್ಚ್ 2020ರ ಕೊನೆಯಲ್ಲಿ ಘೋಷಿಸಲಾದ ಲಾಕ್ಡೌನ್ ಅತ್ಯಂತ ಕಠಿಣವಾಗಿತ್ತು. ಈ ಕಠಿಣ ಲಾಕ್ಡೌನ್ ನ ಮೊದಲ ತಿಂಗಳಾಂತ್ಯಕ್ಕೆ ಅಂದರೆ ಏಪ್ರಿಲ್ 2020ರಲ್ಲಿ ನಿರುದ್ಯೋಗ ಪ್ರಮಾಣ ತೀವ್ರವಾಗಿ ಹೆಚ್ಚಳ ಕಂಡಿತು. ಈ ಡಿಢೀರ್ ನಿರುದ್ಯೋಗವು ಜಾತಿ ಕುರುಡಾಗಿದ್ದರೂ, ಜಾತಿ ತಟಸ್ಥವಾಗಿದೆಯೇ?

ಭಾರತದ ಆರ್ಥಿಕತೆ ನಿಗಾ ಕೇಂದ್ರ (CMIE) ದ ಗ್ರಾಹಕ ಪಿರಾಮಿಡ್ ಗೃಹ ಸಮೀಕ್ಷಾ (CPHS) ಅಂಕಿಅಂಶಗಳ ಆಧಾರದಲ್ಲಿ ನಾವು ಉದ್ಯೋಗ ಮತ್ತು ನಿರುದ್ಯೋಗ ಪ್ರಮಾಣಗಳ ಬದಲಾವಣೆಯನ್ನು ಪರಿಶೀಲಿಸಿದೆವು. ಇವು 1,74,405 ಕುಟುಂಬಗಳಲ್ಲಿ ನಡೆಸಿದ ಅಂಕಿ ಅಂಶಗಳ ಗುಂಪು. ವರ್ಷದಲ್ಲಿ ಮೂರು ಬಾರಿ ಈ ಕುಟುಂಬಗಳನ್ನು ಸಂಪರ್ಕಿಸಲಾಗಿದೆ. ಅಕಲೂಖ ನ ಆರು ಹಂತಗಳ ಮೂಲ ಅಂಕಿಅಂಶಗಳನ್ನು ನಾವು ಬಳಸಿದ್ದೇವೆ.

ಮೇಲ್ಜಾತಿಗಳ ಉದ್ಯೋಗಿಗಳ ಪ್ರಮಾಣ ಡಿಸೆಂಬರ್ 2019ರಿಂದ ಏಪ್ರಿಲ್ 2020ರ ಅವಧಿಯಲ್ಲಿ ಶೇ. 39 ರಿಂದ ಶೇ. 32ಕ್ಕೆ ಇಳಿದಿದ್ದರೆ, ಇದೇ ಅವಧಿಯಲ್ಲಿ ಎಸ್. ಸಿ ಗಳ ಪ್ರಮಾಣ ಶೇ. 44 ರಿಂದ ಶೇ. 24(ಶೇ. 20 ರಷ್ಟು), ಇಂಟರ್ ಮೀಡಿಯೆಟ್ ಜಾತಿಗಳ ಈ ಪ್ರಮಾಣ ಶೇ. 42ರಿಂದ ಶೇ. 34ಕ್ಕೆ, ಒಬಿಸಿ ಗಳಲ್ಲಿ ಶೇ. 40 ರಿಂದ ಶೇ. 26ಕ್ಕೆ ಮತ್ತು ಎಸ್. ಟಿ. ಗಳಲ್ಲಿ ಶೇ. 48ರಿಂದ ಶೇ. 33ಕ್ಕೆ ಉದ್ಯೋಗ ಪ್ರಮಾಣ ಇಳಿದಿರುವುದನ್ನು ನಾವು ಗಮನಿಸಿದೆವು. ಇದರಿಂದ ಉದ್ಯೋಗ ಕುಸಿತವು ಮೇಲ್ಜಾತಿಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಎಸ್. ಸಿ ಮತ್ತು ಎಸ್. ಟಿ ಗಳ ನಡುವೆ ಜಾಸ್ತಿ ಇದೆ ಎಂದು ತಿಳಿಯುತ್ತಿದೆ.

ಶಿಕ್ಷಣದ ಅಂಶ:

ಕಡಿಮೆ ಮಟ್ಟದ ಶಿಕ್ಷಣ ಪಡೆದ ವ್ಯಕ್ತಿಗಳು ಮತ್ತು ಯಾವುದೇ ನಿಗದಿತ ಅವಧಿ ಅಥವಾ ಭದ್ರತೆ ಇಲ್ಲದ ದುರ್ಬಲ ಕೆಲಸ ಪಡೆದಿರುವವರ ನಡುವೆ ಕೋವಿಡ್ 19 ರಿಂದ ಉಂಟಾಗಿರುವ ಉದ್ಯೋಗ ಕಡಿತ ಹೆಚ್ಚು ಕೇಂದ್ರೀಕೃತವಾಗಿದೆ ಎನ್ನುವುದನ್ನು ಜಾಗತಿಕ ಪುರಾವೆಗಳು ಸೂಚಿಸುತ್ತಿವೆ. ಸ್ವಲ್ಪ ಹೆಚ್ಚಿನ ಕೆಲಸದ ಭದ್ರತೆ ಇರುವ ವ್ಯಕ್ತಿಗಳು, ಅಂದರೆ ದಿನಗೂಲಿ ಅಲ್ಲದವರು ಮತ್ತು 12ವರ್ಷಗಳಿಗೂ ಹೆಚ್ಚು ಶಿಕ್ಷಣ ಪಡೆದವರು ಏಪ್ರಿಲ್ 2020ರಲ್ಲಿ ನಿರುದ್ಯೋಗಿಗಳಾಗದೇ ಇರಬಹುದು ಎಂದು ನಾವು ನೋಡಿದ್ದೇವೆ. ಹೀಗಾಗಿ ಲಾಕ್ಡೌನ್ ನಂತರದ ತಕ್ಷಣದಲ್ಲಿ ಕೆಲಸ ಕಡಿತವಾಗಿರುವ ಮೊದಲ ಹಂತದಲ್ಲಿ ಶಿಕ್ಷಣ ಒಂದು ರಕ್ಷಣಾ ಕವಚವಾಗಿದೆ.

ನಮ್ಮ ಹಿಂದಿನ ಅಧ್ಯಯನದ ಪ್ರಕಾರ ಉನ್ನತ ಮಟ್ಟದ ಶಿಕ್ಷಣದಲ್ಲಿ ಇದ್ದ ಜಾತಿ ಅಂತರಗಳು ಕಳೆದ ಮೂರು ದಶಕಗಳಲ್ಲಿ ಹಾಗೇ ಇವೆ ಅಥವಾ ಇನ್ನಷ್ಟು ವಿಸ್ತಾರವಾಗಿದೆ.


ಪ್ರಸ್ತುತದ ಪಿಡುಗು ಈ ಶೈಕ್ಷಣಿಕ ವ್ಯತ್ಯಾಸಗಳನ್ನು ಉಲ್ಬಣಗೊಳಿಸುವ ಸಾಧ್ಯತೆ ಇದೆ. 2011–12ರ ಸಾಲಿನ ಭಾರತ ಮಾನವ ಅಭಿವೃದ್ಧಿ ಸಮೀಕ್ಷೆ ಪ್ರಕಾರ ಶೇ. 51 ಎಸ್. ಸಿ. ಕುಟುಂಬಗಳಲ್ಲಿ ಅಕ್ಷರ ಕಲಿಯದ ಹಿರಿಯ ಮಹಿಳೆಯರಿದ್ದಾರೆ ಮತ್ತು ಶೇ. 27 ಕುಟುಂಬಗಳಲ್ಲಿ ಅಕ್ಷರ ಕಲಿಯದ ಹಿರಿಯ ಪುರುಷ ಸದಸ್ಯರಿದ್ದಾರೆ. ಇದೇ ಅಂಕಿಅಂಶಗಳು ಮೇಲ್ಜಾತಿ ಕುಟುಂಬಗಳಲ್ಲಿ ಕ್ರಮವಾಗಿ ಶೇ. 11 ಮತ್ತು ಶೇ. 24 ಇದೆ. ಹೀಗಾಗಿ ಶಾಲೆ ಮುಚ್ಚಿರುವ ಈ ದಿನಗಳಲ್ಲಿ ಮೇಲ್ಜಾತಿ ಮಕ್ಕಳಿಗೆ ಹೋಲಿಸಿದಲ್ಲಿ ಎಸ್. ಸಿ. ಮಕ್ಕಳ ಪೋಷಕರು ತಮ್ಮ ಮಕ್ಕಳಿಗೆ ಯಾವುದೇ ವಿಧದ ಮನೆ ಕಲಿಕೆಯಲ್ಲಿ ಸಹಾಯ ಮಾಡಲು ಸಮರ್ಥರಾಗಿರುವುದಿಲ್ಲ. ಪೋಷಕರ ಶಿಕ್ಷಣದ ವ್ಯತ್ಯಾಸಗಳು ಒಂದೆಡೆಯಾದರೆ, ಜೀವನ ಮಟ್ಟದ ಸಾಮರ್ಥ್ಯವು ಇನ್ನೊಂದೆಡೆ ಇದಕ್ಕೆ ಕಾರಣವಾಗಿದೆ.

ತಂತ್ರಜ್ಞಾನದ ವಿಷಯ –

ದಲಿತ ಮತ್ತು ಆದಿವಾಸಿ ಕುಟುಂಬಗಳಿಗೆ ಡಿಜಿಟಲ್ ಶಿಕ್ಷಣವನ್ನು ಹೊಂದಿಸಿಕೊಳ್ಳುವ ಸಾಮರ್ಥ್ಯಕ್ಕೆ ಧಕ್ಕೆ ತರುವ ಹಲವು ಆಯಾಮಗಳಿವೆ. ಉದಾ :ಇಂಟರ್ನೆಟ್ ಸೌಲಭ್ಯ ಪಡೆಯುವ ಕುಟುಂಬಗಳ ಪ್ರಮಾಣ ಮೇಲ್ಜಾತಿಗಳಲ್ಲಿ ಶೇ. 20ರಷ್ಟಿದ್ದರೆ ಎಸ್. ಸಿ. ಕುಟುಂಬಗಳಲ್ಲಿ ಶೇ. 10 ರಷ್ಟಿದೆ. ಶೇ. 49 ಎಸ್. ಸಿ. ಗಳು ಮಾತ್ರ ಬ್ಯಾಂಕ್ ಉಳಿತಾಯ ಹೊಂದಿದ್ದರೆ, ಮೇಲ್ಜಾತಿ ಕುಟುಂಬಗಳಲ್ಲಿ ಈ ಪ್ರಮಾಣ ಶೇ. 62ರಷ್ಟಿದೆ. ಹೀಗಾಗಿ ಈ ಪಿಡುಗು ಶಾಲೆಗಳನ್ನು ಇನ್ನಷ್ಟು ದಿವಸಗಳ ಕಾಲ ಮುಚ್ಚುವಂತಹ ಒತ್ತಡ ನಿರ್ಮಾಣ ಮಾಡಿದರೆ ಡಿಜಿಟಲ್ ಶಿಕ್ಷಣ ದೊರಕಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಈ ಅಂತರಗಳು ಪ್ರಮುಖ ಪಾತ್ರ ವಹಿಸುತ್ತವೆ.

ಸಾಮಾಜಿಕ ಅಸ್ಮಿತೆಯ ಆಧಾರದಲ್ಲಿ ಈ ಹಿಂದೆ ಇದ್ದ ಆರ್ಥಿಕ ಸಂಕಷ್ಟವನ್ನು ಈ ಪಿಡುಗು ಪ್ರೇರಿತ ಲಾಕ್ಡೌನ್ ಇನ್ನಷ್ಟು ಉಲ್ಬಣಗೊಳಿಸುತ್ತಿದೆ ಎಂದು ಪ್ರಾಥಮಿಕ ಪರಿಣಾಮಗಳು ತೋರಿಸುತ್ತಿವೆ. ಈ ಸಂದರ್ಭದಲ್ಲಿ ಮುಂಬರುವ ಆಘಾತಗಳನ್ನು ಎದುರಿಸಲು ಸಾಮಾಜಿಕ ಅಂತರಗಳನ್ನು ಮುಚ್ಚುವ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಪ್ರಭುತ್ವ ಹೂಡಿಕೆ ಮಾಡುವುದು ಅತ್ಯಗತ್ಯವಾಗಿದೆ.

ಮೋಂಬತ್ತಿ ಪ್ರದರ್ಶನ ಅಲ್ಲ ಸಾರ್,. ಅವರು ತಮ್ಮ ಊರುಗಳಿಗೆ ಹೊಗುತ್ತಿರುವ ವಲಸೆ ಕಾರ್ಮಿಕರು



ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

64 ವರ್ಷಗಳ ನಂತರ ಈಗೇಕೆ ಎಲ್.ಐ.ಸಿ.ಯ ಶೇರು ವಿಕ್ರಯ?

ಜನವರಿ 19, 1956ರಂದು ಭಾರತ ಸರಕಾರ ಒಂದು ಸುಗ್ರೀವಾಜ್ಞೆಯ ಮೂಲಕ ದೇಶದಲ್ಲಿ ಜೀವ ವಿಮಾ ವ್ಯವಹಾರವನ್ನು ರಾಷ್ಟ್ರೀಕರಿಸಿತು. ಹೀಗೆ ರಾಷ್ಟ್ರೀಕರಿಸಿದ 154 ಭಾರತೀಯ, 16 ವಿದೇಶಿ ಖಾಸಗಿ ಜೀವ ವಮಾಕಂಪನಿಗಳನ್ನು ಮತ್ತು ವಿಮಾವ್ಯವಹಾರ ನಡೆಸುತ್ತಿದ್ದ 75 ಪ್ರಾವಿಡೆಂಟ್ ಫಂಡ್ ಸೊಸೈಟಿಗಳನ್ನು ಒಟ್ಟುಗೂಡಿಸಿ ಭಾರತದ ಸಂಸತ್ತು ಒಂದು ಶಾಸನದ ಮೂಲಕ ಲೈಫ್ ಇನ್ಶೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯ' (ಎಲ್‌ಐಸಿ) ಯನ್ನು ರಚಿಸಿತು. ಸಪ್ಟಂಬರ್ 1, 1956ರಿಂದ ಇದು ಕಾರ್ಯಾರಂಭ ಮಾಡಿತು. ಆದರೆ ಈಗ ಭಾರತ ಸರಕಾರ ಅದರ ಶೇರುವಿಕ್ರಯಕ್ಕೆ, ಅಂದರೆ ಅವೇ ಅದಕ್ಷ, ನಂಬಲನರ್ಹ ಎನಿಸಿಕೊಂಡಿದ್ದ ಖಾಸಗಿಯವರಿಗೇ ಒಪ್ಪಿಸುವ ಪ್ರಕ್ರಿಯೆಯನ್ನು ಆರಂಭಿಸುವ ಧಾವಂತದಲ್ಲಿ ಏಕಿದೆ?
ಎಲ್‌ಐಸಿ 65ನೇ ವರ್ಷಕ್ಕೆ ಕಾಲಿಡುತ್ತಿರುವ' ಸಂದರ್ಭದಲ್ಲಿ, ಎಲ್‌ಐಸಿಯ ಬೆಂಗಳೂರು ವಿಭಾಗ-1ರ ನೌಕರರ ಸಂಘದ ಪ್ರಧಾನ ಕಾರ್ಯದಶಿಗಳು ಈ ಲೇಖನದಲ್ಲಿ ಪರಿಶೀಲಿಸಿದ್ದಾರೆ.

ಎಸ್.ಕೆ. ಗೀತಾ

ಸೆಪ್ಟೆಂಬರ್ ಒಂದನೇ ತಾರೀಕಿಗೆ ಈ ದೇಶದ ಅತಿದೊಡ್ಡ ಆರ್ಥಿಕ ಸಂಸ್ಥೆಯಾದ ಭಾರತೀಯ ಜೀವವಿಮಾ ನಿಗಮವು(ಎಲ್ ಐ ಸಿ) ತನ್ನ ಅರ್ಥಪೂರ್ಣ 64 ವರ್ಷಗಳನ್ನು ಪೂರೈಸಿದೆ. ಈ 64 ವರ್ಷಗಳಲ್ಲಿ ಎಲ್‌ಐಸಿ ಭಾರತದ ಜನತೆಯ ಪಾಲಿಗೆ ಒಂದು ಅತ್ಯಂತ ವಿಶ್ವಾಸಾರ್ಹ ಸಂಸ್ಥೆಯಾಗಿ ಹೊರಹೊಮ್ಮಿದೆ.

1956 ಕ್ಕೂ ಹಿಂದೆ ಜೀವ ವಿಮಾ ವ್ಯವಹಾರದ ರಾಷ್ಟ್ರೀಕರಣಕ್ಕೆ ಇದ್ದ ಉದ್ದೇಶಗಳೇನು? ಆ ಕಾಲಘಟ್ಟದಲ್ಲಿ ಅದು ಏಕೆ ಅನಿವಾರ್ಯವಾಗಿತ್ತು ಎಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳೋಣ. ಜೀವ ವಿಮೆ ಉದ್ದಿಮೆಯ ರಾಷ್ಟ್ರೀಕರಣಕ್ಕೆ ಮೂಲಭೂತ ಪ್ರೇರಣೆ ದೊರೆತಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲೇ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದವರು ಕೇವಲ ಬ್ರಿಟಿಷರಿಂದ ಭಾರತವನ್ನು ಬಿಡುಗಡೆಗೊಳಿಸುವುದನ್ನಷ್ಟನ್ನೆ ಉದ್ದೇಶವನ್ನಾಗಿ ಹೊಂದಿರಲಿಲ್ಲ. ಅದರೊಂದಿಗೇ ಸ್ವಾತಂತ್ರದ ನಂತರ ಒಂದು ಸದೃಢ, ಆರ್ಥಿಕ ಸ್ವಾವಲಂಬೀ ದೇಶ ಕಟ್ಟುವ ಕನಸನ್ನೂ ಹೊಂದಿದ್ದರು.

ಎಲ್‌ಐಸಿ–ಸ್ವಾತಂತ್ರ್ಯ ಚಳುವಳಿಯ ಆಶಯಗಳ ಯಶಸ್ವಿ ಈಡೇರಿಕೆ

1934ರಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಕರಾಚಿ ಅಧಿವೇಶನದಲ್ಲಿ ಸಮಾಜವಾದಿ ಕಾಂಗ್ರೆಸಿಗರು ಮಂಡಿಸಿದ ಆರ್ಥಿಕ ಸನ್ನದು ದೇಶದ ಜನತೆಯ ಉಳಿತಾಯದ ಮೇಲೆ ಸರ್ಕಾರದ ಆಡಳಿತಕ್ಕೆ ಹಿಡಿತವಿರ ಬೇಕೆಂದು ಹೇಳಿತ್ತು.

ದೇಶದ ಸ್ವಾತಂತ್ರ್ಯಾನಂತರ ದೇಶದ ಸ್ವಾವಲಂಬನೆಗೆ ಬಗೆಬಗೆಯ ದೊಡ್ಡ ಕೈಗಾರಿಕೆಗಳ ನಿರ್ಮಾಣ ಮತ್ತು ಅದಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳ ನಿರ್ಮಾಣ ಅನಿವಾರ್ಯವಾಗಿತ್ತು. ಅಂದು ದೇಶದಲ್ಲಿದ್ದ ಬಂಡವಾಳಿಗರ ಕೈಯಲ್ಲಿ ಅಷ್ಟು ದೊಡ್ಡ ಮೊತ್ತದ ಹಣವಿರಲಿಲ್ಲ ಮಾತ್ರವಲ್ಲ ಆ ಹಂತದಲ್ಲಿ ಅದು ಅವರಿಗೆ ಲಾಭದಾಯಕವೂ ಆಗಿರಲಿಲ್ಲ. ಹಾಗಾಗಿ ಅಂತಹ ದೇಶ ನಿರ್ಮಾಣ ಚಟುವಟಿಕೆಗಳಿಗೆ ಬಂಡವಾಳ ಒದಗಿಸಲು ಜೀವ ವಿಮಾ ವ್ಯವಹಾರವನ್ನು ರಾಷ್ಟ್ರೀಕರಣ ಮಾಡಲಾಯಿತು. ಆ ಕಾಲಘಟ್ಟದಲ್ಲಿ ಸುಮಾರು 247 ಜೀವ ವಿಮಾ ಸಂಸ್ಥೆಗಳಿದ್ದವು ಈ ಸಂಸ್ಥೆಗಳಲ್ಲಿ ಹಣ ಹೂಡಿದ ಪಾಲಿಸಿದಾರರ ಹಣಕ್ಕೆ ಯಾವುದೇ ಭದ್ರತೆಯೂ ಇರಲಿಲ್ಲ. ಅವ್ಯವಹಾರಗಳ ದೂರುಗಳ ಸಂಖ್ಯೆ ಗಮನಾರ್ಹವಾಗಿತ್ತು.

ಅಂದಿನ ಸರ್ಕಾರ ಈ 247 ಖಾಸಗಿ ಸಂಸ್ಥೆಗಳನ್ನು ಒಗ್ಗೂಡಿಸಿ ರಾಷ್ಟ್ರೀಕೃತ ಭಾರತೀಯ ಜೀವ ವಿಮಾ ನಿಗಮವನ್ನು ಅಸ್ತಿತ್ವಕ್ಕೆ ತರುವ ಮೂಲಕ ಪಾಲಿಸಿದಾರರ ಹಣಕ್ಕೆ ಭದ್ರತೆ ಒದಗಿಸಿದ್ದು ಮಾತ್ರವಲ್ಲ ದೇಶ ನಿರ್ಮಾಣಕ್ಕೆ ಅಗತ್ಯವಾದ ಬಂಡವಾಳವನ್ನೂ ಕ್ರೋಢೀಕರಿಸುತ್ತಿದೆ. ಭಾರತೀಯ ಜೀವ ವಿಮಾ ನಿಗಮದ 64 ವರ್ಷಗಳ ಈ ಪಯಣವನ್ನು ಗಮನಿಸಿದರೆ ಅದು ತನ್ನ ರಾಷ್ಟ್ರೀಕರಣದ ಈ ಮೂಲ ಉದ್ದೇಶವನ್ನು ಸಂಪೂರ್ಣವಾಗಿ ಈಡೇರಿಸಿದೆ.

ಭಾರತೀಯ ಜೀವವಿಮಾ ನಿಗಮವು ಈ ದೇಶದ ಅತಿದೊಡ್ಡ ಆರ್ಥಿಕ ಸಂಸ್ಥೆಯಾಗಿದೆ. ಸುಮಾರು 40 ಕೋಟಿ ಪಾಲಿಸಿದಾರರನ್ನು ಹೊಂದಿರುವ ಅದು ವಿಶ್ವದ ಅತಿ ದೊಡ್ಡ ವಿಮಾ ಸಂಸ್ಥೆಗಳಲ್ಲೆ ಪ್ರಮುಖವಾದುದು. ದೇಶದ ಜನತೆಗೆ ನೀಡಿದ ಭರವಸೆಯನ್ನು ತಪ್ಪದೇ ಪರಿಪಾಲಿಸುತ್ತಿರುವ ಈ ಸಂಸ್ಥೆಯು ಶೇ. 99.6 ರಷ್ಟು ದಾವೆ (ಕ್ಲೈಮ್ಸ್) ಗಳನ್ನು ಇತ್ಯರ್ಥಗೊಳಿಸುವ ಮೂಲಕ ಒಂದು ಅತ್ಯಂತ ವಿಶ್ವಾಸಾರ್ಹ ಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

1956ರಲ್ಲಿ ಸರ್ಕಾರ ಇದರಲ್ಲಿ ತೊಡಗಿಸಿದ್ದು ಕೇವಲ 5 ಕೋಟಿ ರೂ. ಬಂಡವಾಳ (ಮುಂದೆ 2011 ರಲ್ಲಿ ಈ ಬಂಡವಾಳವನ್ನು 100 ಕೋಟಿ ರೂ.ಗೆ ಒಂದು ಶಾನಾತ್ಮ ಕ್ರಮವಾಗಿಯಷ್ಟೇ ಏರಿಸಲಾಗಿದೆ.) ಈ ಬಂಡವಾಳಕ್ಕೆ ಪ್ರತಿಯಾಗಿ ಸರಕಾರಕ್ಕೆ ಎಲ್‌ಐಸಿ ಈವರೆಗೆ ಸರಿಸುಮಾರು 2660 ಕೋಟಿ ರೂಗಳ ಲಾಭಾಂಶ ನೀಡಿದೆ. ಇತ್ತೀಚಿನ ಅಂಕಿ-ಅಂಶಗಳನ್ನು ನೋಡಿ:

* ಎಲ್‌ಐಸಿ ಯ ಒಟ್ಟು ಆಸ್ತಿಯ ಮೊತ್ತ 32 ಲಕ್ಷ ಕೋಟಿ ರೂ.ಗಳು.
* ಸರ್ಕಾರದ ವಿವಿಧ ಯೋಜನೆಗಳಲ್ಲಿ ಹೂಡಲು ಸಂಗ್ರಹಿಸಿರುವ ಮೊತ್ತ 4 ಲಕ್ಷ ಕೋಟಿ ರೂ.ಗೂ ಹೆಚ್ಚಿನದು.
* ಇಲ್ಲಿಯವರೆಗೆ ಪಂಚವಾರ್ಷಿಕ ಯೋಜನೆಗಳಿಗೆ ಹೂಡಿರುವ ಒಟ್ಟು ಮೊತ್ತ 29 ಲಕ್ಷ ಕೋಟಿಗಳು.
* ವಿವಿಧ ಸರ್ಕಾರಿ ಯೋಜನೆಗಳಲ್ಲಿ ಹೂಡಿರುವ ಒಟ್ಟು ಮೊತ್ತ 2.82 ಲಕ್ಷ ಕೋಟಿ ರೂ.ಗಳು.

ಒಟ್ಟಾರೆಯಾಗಿ ಭಾರತೀಯ ಜೀವವಿಮಾ ನಿಗಮವು ಭಾರತದ ಆರ್ಥಿಕತೆ ಮತ್ತು ದೇಶ ನಿರ್ಮಾಣದ ಅನಿವಾರ್ಯ ಅಂಗವಾಗಿದೆ.

ನವ-ಉದಾರವಾದದ ಕರಿನೆರಳು

90 ರ ದಶಕದಲ್ಲಿ ಆರ್ಥಿಕ ಸುಧಾರಣೆಗಳ ಅಲೆಯೆದ್ದು ನಮ್ಮ ದೇಶವೂ ನವ ಉದಾರೀಕರಣ ನೀತಿಗಳನ್ನು ಅಪ್ಪಿಕೊಳ್ಳಲು ಆರಂಭಿಸುತ್ತಿದ್ದಂತೆ ಅದರ ಛಾಯೆಯು ಆರ್ಥಿಕ ವಲಯದ ಮೇಲೆಯೂ ಬೀಳಲಾರಂಭಿಸಿತು. ಅದರ ಭಾಗವಾಗಿ ವಿಮಾ ಕ್ಷೇತ್ರಗಳ ಸುಧಾರಣೆಗಾಗಿ 1991 ರಲ್ಲಿ ಸರ್ಕಾರ ಮಲ್ಹೋತ್ರ ಸಮಿತಿಯನ್ನು ನೇಮಿಸಿತು. ಮಲ್ಹೋತ್ರ ಸಮಿತಿಯು ಎಲ್‌ಐಸಿಯ ಶೇರು ಬಂಡವಾಳವನ್ನು ನೂರು ಕೋಟಿ ರೂಪಾಯಿಗೆ ಏರಿಸಿ ಅದರ ಶೇ. ರಷ್ಟು ಶೇರುಗಳನ್ನು ಖಾಸಗಿಯವರಿಗೆ ಮಾಡುವಂತೆ ಶಿಫಾರಸ್ಸು ಮಾಡಿತ್ತು. ಅಂದಿನಿಂದಲೇ ಅಖಿಲ ಭಾರತ ವಿಮಾ ನೌಕರರ ಸಂಘದ ನೇತೃತ್ವದಲ್ಲಿ ತೀವ್ರ ಹೋರಾಟ ಆರಂಭವಾಯಿತು

ಎಲ್‌ಐಸಿ ಖಾಸಗೀಕರಣದ ವಿರುದ್ಧ ದೇಶದಾದ್ಯಂತ 1.5 ಕೋಟಿ ಸಹಿ ಸಂಗ್ರಹಿಸಲಾಯಿತು. ಕೊನೆಗೆ 1999 ರಲ್ಲಿ ಆಡಳಿತಾರೂಢ ವಾಜಪೇಯಿ ನೇತೃತ್ವದ ಸರ್ಕಾರ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ)ಮಸೂದೆ ಸ್ವೀಕರಿಸುವ ಮೂಲಕ ಶೇ. 26 ರಷ್ಟು ವಿದೇಶಿ ಬಂಡವಾಳದೊಂದಿಗೆ ಖಾಸಗಿ ವಿಮಾ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದರೂ ಭಾರತೀಯ ಜೀವವಿಮಾ ನಿಗಮವು ಸಂಪೂರ್ಣ ಸಾರ್ವಜನಿಕ ವಲಯದಲ್ಲೇ ಮುಂದುವರೆದಿದೆ. ಎರಡು ದಶಕಗಳ ತೀವ್ರ ಸ್ಪರ್ಧೆಯ ನಡುವೆಯೂ ಇಂದಿಗೂ ಭಾರತದ ವಿಮಾ ಮಾರುಕಟ್ಟೆಯ ಅಗ್ರ ನಾಯಕನಾಗಿ ಮುಂದುವರೆದಿದೆ.

ಭಾರತೀಯ ಜೀವವಿಮಾ ನಿಗಮ ಇಂತಹ ಅದ್ಭುತ ಸಾಧನೆ ಮಾಡುತ್ತಿದ್ದರೂ ಸರ್ಕಾರಗಳು ಈ ಸಂಸ್ಥೆಯನ್ನು ದುರ್ಬಲಗೊಳಿಸುವ, ಖಾಸಗೀಕರಣದ ತಮ್ಮ ಪ್ರಯತ್ನಗಳನ್ನು ಮುಂದುವರೆಸಿವೆ. 2008 ರಲ್ಲಿ ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರಬಂಡವಾಳವನ್ನು ಶೇ.49 ಹೆಚ್ಚಿಸಲಾಗಿದೆ. 2011 ರಲ್ಲಿ ತಿದ್ದುಪಡಿ ತರುವ ಮೂಲಕ ಎಲ್‌ಐಸಿಯ ಬಂಡವಾಳವನ್ನು ನೂರು ಕೋಟಿಗೆ ಏರಿಸಲಾಗಿದೆ. ಎಲ್‌ಐಸಿಯ ಖಾಸಗೀಕರಣಕ್ಕೆ ಸರ್ಕಾರ ನಿರಂತರ ಪ್ರಯತ್ನ ನಡೆಸಿದ್ದರೂ ಸಂಘಟನೆಯು ವಿವಿಧ ಪ್ರಚಾರಾಂದೋಲನದ ಮೂಲಕ ಜನರ ಬೆಂಬಲ ಗಳಿಸಿದ ಕಾರಣ ಅದು ಇಲ್ಲಿಯವರೆಗೆ ಸಾಧ್ಯವಾಗಿಲ್ಲ.

ಕಾರ್ಪೋರೇಟ್‌ಗಳಿಗಾಗಿ ಹುಸಿ ತರ್ಕಗಳು

ಇದೀಗ ಆಡಳಿತದಲ್ಲಿರುವ ಬಿಜೆಪಿಗೆ ಸ್ಪಷ್ಟ ಬಹುಮತವಿದೆ. ಅದು ಅನುಸರಿಸುತ್ತಿರುವ ನೀತಿಗಳಿಂದಾಗಿ ದೇಶ ಸಂಕಷ್ಟಕ್ಕೆ ಸಿಲುಕಿದೆ ಇದಕ್ಕೆ ಪರಿಹಾರವಾಗಿ ಸರ್ಕಾರ ಈಗಾಗಲೇ ಬಜೆಟ್‌ನಲ್ಲಿ ಎಲ್‌ಐಸಿಯ ಶೇರು ವಿಕ್ರಯದ ಪ್ರಸ್ತಾಪ ಮಾಡಿರುವುದು ಮಾತ್ರವಲ್ಲ ಅದರ ಮುಂದುವರೆದ ಭಾಗವಾಗಿ ಎಲ್‌ಐಸಿ ಯ ಶೇರು ವಿಕ್ರಯದ ಮೌಲ್ಯ ಮಾಪನ ಮಾಡಲು ಡಿಲೈಟ್ ಸಂಸ್ಥೆಯನ್ನೂ ನಿಯೋಜಿಸಿದೆ. ಎಲ್‌ಐಸಿಯ ಶೇರುಗಳನ್ನು ಮಾರಾಟಕ್ಕಿಟ್ಟರೆ

ಇದನ್ನು ಸಮರ್ಥಿಸಿಕೊಳ್ಳಲು ಅದು ಮುಂದಿಟ್ಟಿರುವ ತರ್ಕ ಇದರಿಂದ ಎಲ್‌ಐಸಿ ಯ ಆಡಳಿತದಲ್ಲಿ ಉತ್ತರದಾಯಿತ್ವ ಮತ್ತು ಪಾರದರ್ಶಕತೆ ಬರುತ್ತದೆ ಎಂಬುದು. ಇದು ಹುಸಿ ವಾದ. ಏಕೆಂದರೆ ಎಲ್‌ಐಸಿ ನಿರ್ವಹಣೆಯ ಎಲ್ಲ ಎಲ್ಲ ಮಾಹಿತಿಗಳನ್ನು ಸಂಸತ್ತಿಗೆ ಸಲ್ಲಿಸುತ್ತ ಬಂದಿದೆ, ಮತ್ತು ದೇಶದ ಅತ್ಯುಚ್ಚ ಶಾಸಕೀಯ ಸಂಸ್ಥೆಯಯಾದ ಸಂಸತ್ತು ಇದನ್ನು ಪರಿಶೀಲಿಸುತ್ತ ಬಂದಿದೆ. ಇದಕ್ಕಿಂತ ಹೆಚ್ಚಿನ ಪಾರದರ್ಶಕತೆ ಇನ್ನೇನು. ಬೇಕು? ಎಲ್‌ಐಸಿ ಯು ಈ ದೇಶಕ್ಕೆ ಮತ್ತು ಅದರ ಅಸ್ತಿತ್ವದ ಉದ್ದೇಶಕ್ಕೆ ಬದ್ಧವಾಗಿರುವುದರಿಂದಲೇ ಇಷ್ಟೊಂದು ಲಾಭದಾಯಕವಾಗಿ ಕೆಲಸ ಮಾಡುತ್ತಿದೆ. ಅದು ತನ್ನ

ಶೇರುಗಳನ್ನು ಮಾರಾಟ ಮಾಡುವ ಮೂಲಕ ಎಲ್‌ಐಸಿಯ ವ್ಯವಹಾರ ವೃದ್ಧಿಸಲು ಅಗತ್ಯ ಬಂಡವಾಳ ದೊರೆಯುತ್ತದೆಯೆಂದು ಹೇಳಲಾಗುತ್ತಿದೆ. ಇದು ಇನ್ನೊಂದು ಹುಸಿ ತರ್ಕ. ಏಕೆಂದರೆ ಸರ್ಕಾರದ ಯೋಜನೆಗಳಿಗೇ ಎಲ್‌ಐಸಿ ಬಂಡವಾಳ ಕ್ರೋಢೀಕರಿಸುತ್ತಿರುವಾಗ ಅದು ತನ್ನ ವ್ಯವಹಾರ ವಿಸ್ತರಣೆಗೆ ಶೇರುಗಳನ್ನು ಮಾರುವ ಅಗತ್ಯವೇ ಬರುವುದಿಲ್ಲ.

ಎಲ್‌ಐಸಿ ಯು ಶೇರುಗಳನ್ನು ಮಾರುವ ಮೂಲಕ ಸಾರ್ವಜನಿಕರಿಗೆ ಅದರ ಒಡೆತನದಲ್ಲಿ ಪಾಲು ನೀಡಬಹುದೆಂಬುದು ಮತ್ತೊಂದು ವಾದ. ಸಾರ್ವಜನಿಕ ವಲಯದ ಸಂಸ್ಥೆಯೆಂದರೆ ಸಾರ್ವಜನಿಕರೇ ಅದರ ಒಡೆಯರು. ಆದರೆ ಶೇರು ಮಾರುಕಟ್ಟೆಗೆ ಹೋಗುವುದರಿಮದ ಈ ಒಡೆತನ ನಿಜವಾಗಿಯೂ ಕುಂಠಿತಗೊಳ್ಳುತ್ತದೆ. ಏಕೆಂದರೆ ಶೇರು ಮಾರುಕಟ್ಟೆಯಲ್ಲಿ ಚಿಲ್ಲರೆ ಶೇರುದಾರರ, ಅಂದರೆ ವೈಯಕ್ತಿಕವಾಗಿ ಹಣ ಹೂಡುವವರರ ಪ್ರಮಾಣ ಕೇವಲ ಶೇ. 3. ಅಂದರೆ ಕೇವಲ 3ಶೇ. ರಷ್ಟು ಜನರ ಕೈಗೆ ಒಡೆತನ ನೀಡುವುದು ನಿಜವಾದ ಪಾಲುದಾರಿಕೆಯೆ?

ಎಲ್‌ಐಸಿ ಯಂತಹ ಉತ್ತಮ ಆರ್ಥಿಕ ಸಂಸ್ಥೆಯ ಖಾಸಗೀಕರಣಕ್ಕೆ ಯಾವುದೇ ಸಮರ್ಥ ಕಾರಣವಿಲ್ಲ. ಅದಕ್ಕೆ ಇರುವ ಏಕೈಕ ಕಾರಣ ಸರ್ಕಾರ ನವ-ಉದಾರೀಕರಣ ನೀತಿಗಳಿಗೆ ಹೊಂದಿರುವ ಬದ್ಧತೆ. "ಜನರ ಹಣ ಜನ ಕಲ್ಯಾಣಕ್ಕಾಗಿ" ಎನ್ನುವ ಹಂತದಿಂದ "ಜನರ ಹಣ ಬಂಡವಾಳಗಾರರ ಲಾಭಕ್ಕಾಗಿ" ಎನ್ನುವ ಹಂತಕ್ಕೆ ಈ ಮಹಾನ್ ಸಂಸ್ಥೆಯನ್ನು ಸರ್ಕಾರ ತೆಗೆದುಕೊಂಡು ಹೋಗುತ್ತಿದೆ.

ಹಾಗಾಗದಂತೆ ಎಲ್‌ಐಸಿ ಯನ್ನು ಸಾರ್ವಜನಿಕ ವಲಯದಲ್ಲೇ ಉಳಿಸಿಕೊಳ್ಳಲು ಸೈದ್ಧಾಂತಿಕ ಸಂಘರ್ಷಕ್ಕಿಳಿದಿರುವ ಎಲ್ಲ ನೌಕರರಿಗೆ ಬೆಂಬಲ ನೀಡುವುದು ಎಲ್ಲ ದೇಶ ಪ್ರೇಮಿಗಳ ಕರ್ತವ್ಯ. ಎಲ್‌ಐಸಿಯಂತಹ ಸಾರ್ವಜನಿಕ ಸಂಸ್ಥೆಗಳ ಉಳಿವಿನಲ್ಲೇ ನಿಜವಾದ ಆತ್ಮನಿರ್ಭರತೆ ಅಂದರೆ ಸ್ವಾವಲಂಬನೆ ಅಡಗಿದೆ.



1956ರಲ್ಲಿ ಜೀವ ವಿಮೆಯ ರಾಷ್ಟ್ರೀಕರಣ ನಡೆಸಿದಾಗ ಆಗಿನ ಹಣಕಾಸು ಮಂತ್ರಿ ಸಿ.ಡಿ.ದೇಶಮುಖ್ ಅವರು ಇದನ್ನು ತಾತ್ವಿಕವಾಗಿ, ಸೈದ್ಧಾಂತಿಕವಾಗಿ ಮತ್ತು ಒಂದು ಕಲ್ಯಾಣ ಪ್ರಭುತ್ವದ ಗುರಿ ಸಾಧನೆಯ ದೃಷ್ಟಿಯಿಂದ ಸಮರ್ಥಿಸಿಕೊಳ್ಳಬಹುದು ಎಂದಿದ್ದರು.

"ಜೀವ ವಿಮೆಯ ರಾಷ್ಟ್ರೀಕರಣ ವಿಮೆ ಮಾಡಿಸಿರುವ ಸಾರ್ವಜನಿಕರ ಮತ್ತು ಉದ್ದಿಮೆಯ ಹಿತರಕ್ಷಣೆಯ ದೃಷ್ಟಿಯಿಂದ ಬಹಳ ಕಾಲದಿಂದ ಅಪೇಕ್ಷಿಸುತ್ತಿದ್ದ ಒಂದು ಕ್ರಮ" ಎಂದು ಆಗ ಖಾಸಗಿ ವಿಮಾಕಂಪನಿಗಳು ಸಾರ್ವಜನಿಕ ಉಳಿತಾಯಗಳನ್ನು ತಮ್ಮ ಅವ್ಯವಹಾರಗಳಿಗೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದ ಹಿನ್ನೆಲೆಯಲ್ಲಿ ಅವರು ಹೇಳಿದ್ದರು. ಇಂತಹ ರಕ್ಷಣೆ ಒದಗಿಸುವುದರೊಂದಿಗೆ, ಸಮುದಾಯದ ಉಳಿತಾಯಗಳು ಇನ್ನು ಮುಂದೆ ದೇಶದ ಆರ್ಥಿಕ ಬೆಳವಣಿಗೆಗೆ ಬಳಕೆಯಾಗುತ್ತವೆ ಎಂದಿದ್ದರು.

ತದ್ವಿರುದ್ಧವಾಗಿ, ಈಗಿನ ಹಣಕಾಸು ಮಂತ್ರಿಗಳು ಶೇರು ವಿಕ್ರಯಕ್ಕೆ ಕೊಟ್ಟಿರುವ 'ದಕ್ಷತೆ, ಪಾರದರ್ಶಕತೆ ಮತ್ತು ಜನರಿಗೆ ಒಡೆತನದಲ್ಲಿ ಪಾಲು' ಎಂಬ ಹುಸಿ ತರ್ಕಗಳ ಮರೆಯಲ್ಲಿ ಕೊವಿಡ್ ಪರಿಸ್ಥಿತಿಗಳನ್ನು ಬಳಸಿಕೊಂಡು ತಮ್ಮ ಕಾರ್ಪೋರೇಟ್ ಗೆಳೆಯರ ಬಹುದಿನಗಳ ಬೇಡಿಕೆಗಳನ್ನು ಈಡೇರಿಸುವ ಪ್ರಕ್ರಿಯೆಯನ್ನು ಆರಂಭಿಸುವ ಆಳುವ ಮಂದಿಯ ಧಾವಂತವನ್ನು ಇಲ್ಲಿ ಗುರುತಿಸದಿರಲು ಸಾಧ್ಯವೇ?



ಕ್ಯೂಬಾದ ವೈದ್ಯರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಕೊಡಬೇಕು!

– ವಿಜಯ ಪ್ರಶಾದ್

ಸಂಗ್ರಹಾನುವಾದ : ನಾಗರಾಜ್ ನಂಜುಂಡಯ್ಯ

ವಿಶ್ವದಾದ್ಯಂತ ಕೋವಿಡ್-19 ಹರಡುವಿಕೆ ತಡೆಗಟ್ಟುವ ಕಾರ್ಯ ಯೋಜನೆಗಳಲ್ಲಿ 27 ದೇಶಗಳಲ್ಲಿ ಮುಂಚೂಣಿಯಲ್ಲಿರುವ ಕ್ಯೂಬಾದ ವೈದ್ಯರ ಮೇಲೆ ನಿರಂತರ ಅಮೆರಿಕದ ಅಪಪ್ರಚಾರದ ದಾಳಿಗಳ ಮದ್ಯೆಯೂ, ನಿರಂತರವಾಗಿ ತಮ್ಮ ಕರ್ತವ್ಯದಲ್ಲಿ ನಿರತರಾಗಿದ್ದಾರೆ. ಇವರೆಲ್ಲ ಕ್ಯೂಬಾದ 'ಹೆನ್ರಿ ರೀವ್ ಇಂಟರ್ನ್ಯಾಷನಲ್ ಮೆಡಿಕಲ್ ಬ್ರಿಗೇಡ್' ಗೆ ಸೇರಿದವರು. ಈ ವೈದ್ಯರಿಗೆ ನೋಬೆಲ್ ಶಾಂತಿ ಪಾರಿತೋಷಕ ಪ್ರಶಸ್ತಿಯನ್ನು ಕೊಡಬೇಕೆಂದು ಒತ್ತಾಯಿಸುವ ಅಂತರ್‍ರಾಷ್ಟ್ರೀಯ ಅಭಿಯಾನವೊಂದು ನಡೆಯುತ್ತಿದೆ. ಇದರ ಹಿಂದಿರುವ ಕಾರಣದ ಕುರಿತು ಈ ಲೇಖನ.

ಐದು ವರ್ಷಗಳ ಹಿಂದೆ ನಡೆದ ಪ್ರಕರಣ ಇದಾಗಿದೆ. ಎಬೋಲಾ ಎಂಬ ವೈರಸ್ ಕಾಯಿಲೆಯ ಬಗ್ಗೆ ಎಲ್ಲರಿಗೂ ತಿಳಿದಿದೆ. ಈ ರೋಗಾಣು 1976 ರಲ್ಲಿ ಮೊದಲು ದಕ್ಷಿಣ ಆಫ್ರಿಕಾ ದಲ್ಲಿ ಪತ್ತೆಯಾಗಿದ್ದು, ಆ ನಂತರ ಇದರ ಭೀಕರತೆ 2014 ರಲ್ಲಿ ಗರಿಗೆದರಿತ್ತು. ಎಬೋಲಾ ಹರಡುವುದನ್ನು ತಡೆಯಲು ಪಶ್ಚಿಮ ಆಫ್ರಿಕಾದಲ್ಲಿ ಕಾರ್ಯ ನಿರ್ವಹಿಸಿದ ಕ್ಯೂಬಾದ ಒಬ್ಬ ವೈದ್ಯ, ಇವರ ಹೆಸರು ಡಾ.ಫೆಲಿಕ್ಸ್ ಬೀಜ್, ಇವರ ರೋಮಾಂಚಕ ಕಥೆಯನ್ನು ಕೇಳಿಲ್ಲದಿದ್ದರೆ, ಮುಂದೆ ಓದಿ.



ಭೀಕರ ಎಬೋಲಾ ಹರಡುವಿಕೆಯನ್ನು ತಡೆಗಟ್ಟಲು, 'ಹೆನ್ರಿ ರೀವ್ ಇಂಟರ್ನ್ಯಾಷನಲ್ ಮೆಡಿಕಲ್ ಬ್ರಿಗೇಡ್' ನ 165 ಕ್ಯೂಬನ್ ವೈದ್ಯರು ದಕ್ಷಿಣ ಆಫ್ರಿಕಾದ ಸಿಯೆಲ್ ಲಿಯೋ ಗೆ ಹೋದರು. ವೈದ್ಯರ ತಂಡದಲ್ಲಿ ಡಾ. ಫೆಲೆಕ್ಸ್ ಬೀಜ್ ಒಬ್ಬರು. ಕೆಲಸದಲ್ಲಿ ತೊಡಗಿಸಿಕೊಂಡಿದ್ದ ಡಾ.ಬೀಜ್ ರವರು ತೀವ್ರ ಎಬೋಲಾ ಸೋಂಕಿತರಾದರು. ರೋಗ ಇವರ ಆರೋಗ್ಯ ಸ್ಥಿತಿಯನ್ನು ಹದಗೆಡಿಸಿತು. ಆದಾಗ್ಯೂ ಡಾ.ಬೀಜ್ ಧೃತಿಗೆಡಲಿಲ್ಲ.

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂ.ಎಚ್.ಒ) ಮತ್ತು ಕ್ಯೂಬನ್ ಸರ್ಕಾರವು ಡಾ. ಬೀಜ್ ರನ್ನು ಚಿಕಿತ್ಸೆಗಾಗಿ ಜಿನೀವಾ ಕ್ಕೆ ಕರೆದೊಯ್ಯಿತು. ಅಲ್ಲಿ ಅವರಿಗೆ ಹೆಪಿಟಾಕ್ಸ್ ಯೂನಿವರ್ಸಿಟಿ ಡಿ ಜೆನೆವ್ ನಲ್ಲಿ ಚಿಕಿತ್ಸೆ ನೀಡಲಾಯಿತು. ಅವರು ಎಬೋಲಾ ಕಾಯಿಲೆಯೊಂದಿಗೆ ಸಾಕಷ್ಟು ಹೋರಾಡಿದರು, ಅವರು ಪಡೆದ ಆರೋಗ್ಯ ಆರೈಕೆ ಮಾತ್ರ ಅದ್ಭುತವಾಗಿತ್ತು. ಹೀಗಾಗಿ, ಅವರಲ್ಲಿ ಆವರಿಸಿಕೊಂಡಿದ್ದ ಎಬೋಲಾ ಕಡಿಮೆಯಾಯಿತು. ಇದಕ್ಕಾಗಿ ಅವರು ಆರೈಕೆ ಮಾಡಿದ ವೈದ್ಯರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಆ ನಂತರ ಡಾ.ಬೀಜ್ ರವರನ್ನು ವಿಮಾನದ ಮೂಲಕ ಕ್ಯೂಬಾ ಕ್ಕೆ ಕರೆದೊಯ್ಯಲಾಯಿತು. ಹವಾನ' ವಿಮಾನ ನಿಲ್ದಾಣ ದಲ್ಲಿ ಡಾ.ಬೀಜ್ ರನ್ನು ಸ್ವಾಗತಿಸಲು, ಅವರ ಪತ್ನಿ, ಇಬ್ಬರು ಪುತ್ರರು ಮತ್ತು ಕ್ಯೂಬಾ ದ ಆರೋಗ್ಯ ಸಚಿವರು ಆಗಮಿಸಿದ್ದರು. ಕ್ಯೂಬಾನ್ ವೆಬ್ ಸೈಟ್ ಒಂದರಲ್ಲಿ, ವೈದ್ಯಕೀಯ ವಿದ್ಯಾರ್ಥಿ ಯುವಕ ಅಲೆಜಾಂಡ್ರೊ "ಕ್ಯೂಬಾ ನಿಮಗಾಗಿ ಕಾಯುತ್ತಿದೆ." ಎಂದು ಬರೆದಿದ್ದ ಸಂದೇಶ ವೈರಲ್ ಆಗಿತ್ತು.

ಎಬೋಲಾ ವಿರುದ್ದ ಹೋರಾಡುತ್ತಿದ್ದ, ಇತರೆ ಕ್ಯೂಬನ್ ವೈದ್ಯರು ಡಾ.ಬೀಜ್ ರನ್ನು ಹುರಿದುಂಬಿಸಿದ್ದರು. "ಕ್ಯೂಬಾ ಈಸ್ ವಿತ್ ಫೆಲಿಕ್ಸ್ ಬೀಜ್" ಎಂಬ ಫೇಸ್ ಬುಕ್ ಪುಟವನ್ನು ಪ್ರಾರಂಭಿಸಲಾಯಿತು. ಇತರೆ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಅವರ ಹೆಸರಿನ ಹ್ಯಾಶ್ ಟ್ಯಾಗ್ ಕೂಡಾ ವೈರಲ್ ಆಗಿತ್ತು.

ಡಾ: ಫೆಲಿಕ್ಸ್ ಬೀಜ್ ನಿಧಾನವಾಗಿ ಚೇತರಿಸಿಕೊಂಡರು. ಆ ನಂತರ, ಎಬೋಲಾ ವಿರುದ್ದದ ತಮ್ಮ ಹೋರಾಟವನ್ನು ಮುಂದುವರಿಸಲು ಪಶ್ಚಿಮ ಆಫ್ರಿಕಾಕ್ಕೆ ಮರಳಲು ನಿರ್ಧರಿಸಿದರು. ಡಾ: ಫೆಲಿಕ್ಸ್ ಬೀಜ್ ಮತ್ತು ಇತರ ಕ್ಯೂಬನ್ ವೈದ್ಯರು 'ಆಫ್ರಿಕಾ ಮತ್ತು ಜಗತ್ತಿಗೆ ಎಬೊಲ ಒಂದು ಆರೋಗ್ಯ ಸವಾಲು ಆಗಿರುವವರೆಗೆ ಇಲ್ಲೇ ಇರುತ್ತೇವೆ.' ಎಂದಿದ್ದು, ಹಾಗನೇ ನಡೆದುಕೊಂಡರು ಕೂಡಾ. ಇದೊಂದು ಅದ್ಭುತ ಮಾನವೀಯ ಕಾರ್ಯವಾಗಿತ್ತು.

ಕ್ಯೂಬನ್ ವೈದ್ಯರಿಗೆ ನೋಬೆಲ್ ಶಾಂತಿ ಸೌಹಾರ್ದ ಪಾರಿತೋಷಕ ಪ್ರಶಸ್ತಿ ಗೆ ಇದಕ್ಕಿಂತ ಉತ್ತಮ ಕಾರ್ಯ ಬದ್ಧತೆಯ ಸಾಕ್ಷಿ ಬೇರೆ ಬೇಕೆ?. ಈ ವಿಚಾರದಲ್ಲಿ ಅಂತರಾಷ್ಟ್ರೀಯ ಅಭಿಯಾನ ನಡೆಯುತ್ತಿದೆ. ಆರೋಗ್ಯ ಸಂರಕ್ಷಣೆ ಮತ್ತು ಆರೈಕೆ ಕಾರ್ಯದ ಮೂಲಕ ಕ್ಯೂಬನ್ ವೈದ್ಯರ ಅಂತರಾಷ್ಟ್ರೀಯ ಸೌಹಾರ್ದತೆ ಕ್ಯೂಬಾದ ಸಮಾಜವಾದಿ ಕಾರ್ಯಕ್ರಮದ ಅನಿವಾರ್ಯ ಅಂಗವಾಗಿದೆ.

ಕ್ಯೂಬನ್ ವೈದ್ಯರ ವಿರುದ್ದ ಅಮೆರಿಕದ ಅಪಪ್ರಚಾರ

ಡಾ: ಫೆಲಿಕ್ಸ್ ಬೀಜ್ ರವರು ಪಶ್ಚಿಮ ಆಫ್ರಿಕಾಕ್ಕೆ ಮತ್ತೆ ಹಿಂದಿರುಗಿ ಬಂದಾಗ, ಜಗತ್ತಿನ ಎಲ್ಲಾ ದೇಶಗಳಿಗೂ ಆಶ್ಚರ್ಯ ಎನಿಸಿತ್ತು. ಡಾ: ಬೀಜ್ ಅವರಲ್ಲಿದ್ದ ಕ್ಯಾಸ್ಟ್ರೋ ರವರ ಅಂತರಾಷ್ಟ್ರೀಯ ವೈದ್ಯಕೀಯ ಸೌಹಾರ್ದತೆ, ಅಂದರೆ ಸಮಾಜವಾದಿ ವೈದ್ಯಕೀಯ ಸೌಹಾರ್ದತೆಯಲ್ಲಿದ್ದ ಅನುಪಮ ಬದ್ಧತೆಯನ್ನು ಜಗತ್ತಿಗೆ ಎತ್ತಿ ತೋರಿಸಿತು. ಇದೊಂದು ಸಮಾಜವಾದಿ ಸೌಹಾರ್ದತೆಯ ಅಸಾಧಾರಣ ಬದ್ಧತೆಯಾಗಿತ್ತು. ಇದನ್ನು ಯುಎಸ್ ಆಡಳಿತಗಾರರು ಹೇಗೆ ಸಹಿಸಿಕೊಳ್ಳಲು ಸಾಧ್ಯ ?.

ಹಾಗಾಗಿ, ಯುಎಸ್ ತನ್ನ ಅಪಪ್ರಚಾರವನ್ನು ಕ್ಯೂಬಾದ ವೈದ್ಯರ ವಿರುದ್ದ ಆರಂಭಿಸಲು ನಿರ್ಧರಿಸಿತು. ಯುಎಸ್ ತನ್ನ ಕಾಂಗ್ರೆಸ್ ನ ರಿಸರ್ಚ್ ಸರ್ವಿಸ್ ನ ಜೂನ್ 2019 ವರದಿಯಲ್ಲಿ, ವ್ಯಕ್ತಿಗಳ ಕಳ್ಳ ಸಾಗಣೆಯಲ್ಲಿ ಕ್ಯೂಬಾವನ್ನು ಶ್ರೇಣಿ 3 ಕ್ಕೆ ಇಳಿಸಿತು. 'ವಿದೇಶಿ ವೈದ್ಯಕೀಯದ ಮಿಶನ್' ಕಾರ್ಯಕ್ರಮದಲ್ಲಿ, ಬಲವಂತದಿಂದ ತೆಗೆದುಕೊಂಡ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಕ್ಯೂಬಾ ಸೂಕ್ತ ಕ್ರಮ ಕೈಗೊಳ್ಳಲಿಲ್ಲ ಎಂದು 2019 ರ ಯುಎಸ್ ಡಿಪಾರ್ಟ್ ಮೆಂಟ್ ನ ಆಪಾದನೆಗೆ ಯಾವುದೇ ಪುರಾವೆಯಿರಲಿಲ್ಲ. ಹೀಗಾಗಿ, ಕ್ಯೂಬನ್ ವೈದ್ಯರ ವೈದ್ಯಕೀಯ ಅಂತರಾಷ್ಟ್ರೀಯ ಸೌಹಾರ್ದ ಕಾರ್ಯಾಚರಣೆ ಗಳನ್ನು ನಿಲ್ಲಿಸಲು, ಅವರನ್ನು ತಮ್ಮ ದೇಶಗಳಿಂದ ಹೊರಹಾಕಬೇಕೆಂದು ಟ್ರಂಪ್ ಆಡಳಿತವು ತನ್ನ ಮಿತ್ರ ರಾಷ್ಟ್ರಗಳ ಮೇಲೆ ಒತ್ತಡವನ್ನು ಹೇರಿತ್ತು.

ಮತ್ತೊಂದು, ಆಶ್ಚರ್ಯಕರ ಅಂಶವೆಂದರೆ, ವಾಷಿಂಗ್ಟನ್ ನ ಒತ್ತಡಕ್ಕೆ ಮಣಿದ ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಮಂಡಳಿ ಕೂಡಾ, ಕ್ಯೂಬನ್ ವೈದ್ಯರನ್ನು ತನಿಖೆಗೆ ಒಳಪಡಿಸಿತು. ಇದಕ್ಕೆ ಸಾಕ್ಷಿ ಎಂಬಂತೆ, ವಿಶ್ವ ಸಂಸ್ಥೆಯ ಗುಲಾಮಗಿರಿಯ ಸಮಕಾಲೀನ ರೂಪಗಳ ಬಗ್ಗೆ ವಿಶೇಷ ವರದಿ ಮಾಡುವ, ಪತ್ರಕರ್ತರಾದ ಊರ್ಮಿಳಾ ಭೂಲಾ ಮತ್ತು ಮಾರಿಯಾ ಗ್ರಾಜಿಯಾ ಜಿಯಾಮರಿನಾರೊ ಇವರು ವ್ಯಕ್ತಿಗಳ ಕಳ್ಳ ಸಾಗಾಣೆ ಕುರಿತ ಯುಎನ್ ನ ವಿಶೇಷ ವರದಿಗಾರರು. ಈ ಇಬ್ಬರೂ ವರದಿಗಾರರು 2019 ರ ನವೆಂಬರ್ ನಲ್ಲಿ ಕ್ಯೂಬನ್ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆದರೆ, ಈ ಪತ್ರಗಳಿಗೆ ಯಾವುದೇ ಸೂಕ್ತ ಪುರಾವೆಗಳು ಅಥವಾ ಹುರುಳು ಇರಲಿಲ್ಲ. ವರದಿಗಳು ವೈಜ್ಞಾನಿಕ ವಿಧಿ ವಿಧಾನಗಳಿಗಿಂತ ಹೆಚ್ಚಾಗಿ ಅವರ ಸೈದ್ಧಾಂತಿಕ ಪ್ರೇರಿತ-ರಾಜಕೀಯ ವರದಿಯಾಗಿತ್ತು.

ಇದಕ್ಕೆ ಮುಂದುವರಿದ ಭಾಗವಾಗಿ 2020 ರ ಆರಂಭದಲ್ಲಿ, ಯುಎಸ್ ಸರ್ಕಾರವು ಕ್ಯೂಬನ್ ವೈದ್ಯಕೀಯ ಮಿಷನ್ ಕಾರ್ಯಕ್ರಮ ವನ್ನು ವಿಫಲಗೊಳಿಸುವ ಪ್ರಯತ್ನ ವನ್ನು ತೀವ್ರಗತಿಯಲ್ಲಿ ಮುಂದುವರಿಸಿತು. 2020 ರ ಜನವರಿ 12, ರಂದು ಯುಎಸ್ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ಕ್ಯೂಬದ 'ಈ ಮಿಷನ್ ಮಾನವ ಹಕ್ಕುಗಳ ಉಲಂಘನೆ" ಯಾಗಿದೆ. ಆದ್ದರಿಂದ, ಇದನ್ನು ಹಿಮ್ಮೆಟ್ಟಿಸಬೇಕೆಂದು ಅತಿಥೇಯ ರಾಷ್ಟ್ರ ಗಳ ಮೇಲೆ ಒತ್ತಡ ಹೇರಿದ್ದರು.


ಇದಕ್ಕೆ ಅನುಗುಣವಾಗಿ, ಲ್ಯಾಟಿನ್ ಅಮೆರಿಕಾದ ಯುಎಸ್ ಮಿತ್ರ ರಾಷ್ಟ್ರಗಳಾದ ಬ್ರೆಜಿಲ್, ಬೊಲಿವಿಯ ಮತ್ತು ಈಕ್ವೆಡರ್ ದೇಶಗಳು ಕ್ಯೂಬನ್ ವೈದ್ಯಕೀಯ ಕಾರ್ಯಕರ್ತರನ್ನು ಹೊರ ಹಾಕಿದವು. ಬ್ರೆಜಿಲ್ ನಂತಹ ದೇಶಗಳಿಗೆ ಈ ನಿರ್ಧಾರ ಮುಂದೆ ಮಾರಕವಾಗಿ ಪರಿಣಮಿಸಿತು. ಕ್ಯೂಬನ್ ವೈದ್ಯರನ್ನು ಹೊರ ಹಾಕಿದ ನಂತರ, ಬ್ರೆಜಿಲ್ ನಲ್ಲಿ ಶಿಶು ಮರಣ ಮತ್ತು ನ್ಯುಮೋನಿಯಾ ಹೆಚ್ಚಾಗಿ, ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ದುರಂತಮಯ ಪರಿಸ್ಥಿತಿ ಉಂಟಾಯಿತು. ಡಿಸೆಂಬರ್ 2019 ರಲ್ಲಿ ಕ್ಯೂಬನ್ ವೈದ್ಯರ ನ್ನು ಹೊರಹಾಕಿದ್ದ ಬೋಲ್ಸನಾರೊ ರವರು, ಕೋವಿಡ್-19 ವೈರಸ್ ಗೆ ಬ್ರೆಜಿಲ್ ತತ್ತರಿಸಿ ದುರಂತವಾದ ನಂತರ, ಮತ್ತೆ ಕ್ಯೂಬನ್ ವೈದ್ಯರು ಬ್ರೆಜಿಲ್ ನಲ್ಲೇ ಉಳಿಯಬೇಕೆಂದು ಬಯಸಿದ್ದರು.

ಜೀವವನ್ನು ಪಣಕಿಟ್ಟ ಕ್ಯೂಬನ್ ವೈದ್ಯರು ಅಂತರಾಷ್ಟ್ರೀಯ ಸೌಹಾರ್ದತೆಯ ಮೆರಗು

ಕೋವಿಡ್-19 ಸೋಂಕಿನ ಸರಪಣಿಯನ್ನು ಮುರಿಯಲು ಕ್ಯೂಬನ್ ವೈದ್ಯಕೀಯ ಕಾರ್ಯಕರ್ತರು ಒಂದು ಕಡೆ, ತಮ್ಮ ಆರೋಗ್ಯವನ್ನು ಪಣಕಿಟ್ಟು ದುಡಿಯುತ್ತಿದ್ದಾರೆ. ಮತ್ತೊಂದೆಡೆ, ಕ್ಯೂಬನ್ ವಿಜ್ಞಾನಿಗಳು ರೋಗದ ವಿರುದ್ಧ ಹೋರಾಡಲು 'ಇಂಟರ್‌ಫೆರಾನ್ ಆಲ್ಫಾ-2 ಬಿ ನಂತಹ ಔಷಧಿ ಗಳನ್ನು ಅಭಿವೃದ್ಧಿ ಪಡಿಸಿ, ತಮ್ಮ ಲಸಿಕೆ ಪ್ರಯೋಗಳ ಹಂತದಲ್ಲಿದೆ ಎಂದು ಘೋಷಿಸಿದ್ದಾರೆ. ಈ ಲಸಿಕೆಯನ್ನು ಖಾಸಗಿ ಆಸ್ತಿಯೆಂದು ಪರಿಗಣಿಸದೆ, ಅದನ್ನು ವಿಶ್ವದ ಜನರೊಂದಿಗೆ ಹಂಚಿಕೊಳ್ಳಲಾಗುವುದು ಎಂದಿದ್ದಾರೆ. ಇದು ಕ್ಯೂಬನ್ ವೈದ್ಯಕೀಯ ಅಂತರಾಷ್ಟ್ರೀಯ ಸೌಹಾರ್ದತೆಯ ನಿಷ್ಠೆಯನ್ನು ಎತ್ತಿ ತೋರಿಸುತ್ತದೆ.

ಆ ಮೂಲಕ, ಕ್ಯೂಬ ತಮ್ಮ ರಾಷ್ಟ್ರೀಯತೆಯ ಸ್ವಹಿತವನ್ನು ಎತ್ತಿಹಿಡಿಯುವುದಕ್ಕಿಂತ, ಮಿಗಿಲಾಗಿ ಅಂತರಾಷ್ಟ್ರೀಯ ಸೌಹಾರ್ದತೆಯನ್ನು ಮೆರೆಸಿದೆ. ಇಂತಹ ಗುಣಲಕ್ಷಣಗಳು ಸಮಾಜವಾದ ರಾಷ್ಟ್ರ ಗಳಿಂದ ಮಾತ್ರ ಸಾಧ್ಯ.

ಆಗಸ್ಟ್ 21 ರಂದು, ಕ್ಯೂಬಾ ದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಮೊದಲ ಕಾರ್ಯದರ್ಶಿ ರೌಲ್ ಕ್ಯಾಸ್ಟ್ರೋ ಅವರು ಫೆಡರೇಶನ್ ಆಫ್ ಕ್ಯೂಬನ್ ವುಮೆನ್(ಎಫ್.ಎಮ್.ಸಿ) ಸಭೆಯ 60 ನೇ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, "ಹೆನ್ರಿ ರೀವ್ ಬ್ರಿಗೇಡ್" ನ ವೈದ್ಯಕೀಯ ಕಾರ್ಯಕರ್ತರಲ್ಲಿ 61 ಪ್ರತಿಶತ ಮಹಿಳೆಯರು ಇದ್ದಾರೆ ಎಂದು ಉಲ್ಲೇಖಿಸಿದ್ದಾರೆ. 1960ರಲ್ಲಿ ಕ್ಯೂಬನ್ ರು, ಫಿಡಲ್ ಕ್ಯಾಸ್ಟ್ರೋ ನೇತೃತ್ವದಲ್ಲಿ "ವೈದ್ಯಕೀಯ ಅಂತರಾಷ್ಟ್ರೀಯ ಸೌಹಾರ್ದತೆ" ಯ ಕಾರ್ಯಕ್ರಮವನ್ನು ಆರಂಭಿಸಿದ ನಂತರ, ಇಲ್ಲಿಯವರೆಗೂ ಸುಮಾರು 4 ಲಕ್ಷಕ್ಕೂ ಹೆಚ್ಚು ವೈದ್ಯಕೀಯ ಕಾರ್ಯ ಕರ್ತರು 40 ಕ್ಕೂ ಹೆಚ್ಚು ದೇಶಗಳಲ್ಲಿ ಕೆಲಸ ಮಾಡಿದ್ದಾರೆ. ಈ ವೈದ್ಯಕೀಯ ಕಾರ್ಯ ಕರ್ತರು" ವೈದ್ಯಕೀಯ ಆರೈಕೆ ಮತ್ತು ಅಂತರಾಷ್ಟ್ರೀಯ ಸೌಹಾರ್ದತೆ" ಎಂಬ ಅವಳಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಇದು ಕ್ಯೂಬನ್ ರು ಒಬ್ಬ ಡಾಕ್ಟರ್ ಮತ್ತು ಕಮ್ಯುನಿಸ್ಟ್ ಕ್ರಾಂತಿಕಾರಿಯಾಗಿದ್ದ ಚೆ ಗುವೇರಾ ರವರ ಬೋಧನೆಗಳಿಂದ ಕಲಿತ ಪಾಠ. ಹಾಗಾಗಿ 'ಹೆನ್ರಿ ರೀವ್ ಇಂಟರ್ನ್ಯಾಷನಲ್ ಮೆಡಿಕಲ್ ಬ್ರಿಗೇಡ್' ನ ಇವರು ನೋಬೆಲ್ ಶಾಂತಿ ಪ್ರಶಸ್ತಿಗೆ ಅರ್ಹರು. ನೊಬೆಲ್ ಶಾಂತಿ ಸಮಿತಿ ಇದನ್ನು ಗಮನಿಸಬೇಕು.



ಶತಮಾನೋತ್ಸವ ಲೇಖನಮಾಲೆ-42

1959ರ ಚಾರಿತ್ರಿಕ ಬಂಗಾಳ ಆಹಾರ ಚಳುವಳಿ

ಪಶ್ಚಿಮ ಬಂಗಾಲದಲ್ಲಿ ಜುಲೈ 13, 1959 ರಂದು ಪ್ರಾರಂಭವಾಗಿ ಸೆಪ್ಟೆಂಬರ್‌ವರೆಗೂ ಮುಂದುವರಿಯಿತು. ಆ ಹೋರಾಟವು ಬಂಗಾಳದ ಇಡೀ ಜನಸಮೂಹದ ಮಹಾ ಉಬ್ಬರದ ಸ್ವರೂಪವನ್ನು ತಳೆಯಿತು. ಕಾಂಗ್ರೆಸ್ ಪಕ್ಷದ ಬೂಟಾಟಿಕೆ ಕೇರಳದಲ್ಲಿ ಮಾತ್ರವಲ್ಲ, ಅದೇ ವೇಳೆಯಲ್ಲಿ ಪಶ್ಚಿಮ ಬಂಗಾಲದಲ್ಲಿ ನಡೆದ ಆಹಾರ ಆಂದೋಲನದ ದಮನದಲ್ಲೂ ಬಯಲಾಯಿತು. ಅದಕ್ಕೆ ವ್ಯತಿರಿಕ್ತವಾಗಿ ಅದಕ್ಕೂ ಮತ್ತು ಕಮ್ಯುನಿಸ್ಟ್ ಪಕ್ಷಕ್ಕೂ ಇದ್ದ ವ್ಯತ್ಯಾಸ ಹಿಂದೆಂದಿಗಿಂತಲೂ ಹೆಚ್ಚಾಗಿ ಎಲ್ಲರ ಕಣ್ಣಿಗೆ ರಾಚುವಂತಾಯಿತು.ಇದು ಭಾರತ ಕಮ್ಯುನಿಸ್ಟ್ ಪಕ್ಷದೊಳಗಿನ ಆಂತರಿಕ ಚರ್ಚೆಯ, ಬಹು ಮುಖ್ಯವಾಗಿ ಕಾಂಗ್ರೆಸ್ ಪಕ್ಷದ ಬಗೆಗಿನ ಧೋರಣೆಯ ಕುರಿತ ಚರ್ಚೆಯ, ಮೇಲೂ ಪ್ರಭಾವ ಬೀರಿತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಪಶ್ಚಿಮ ಬಂಗಾಳದ ಜನರು ನಡೆಸಿದ ಆಹಾರಕ್ಕಾಗಿನ ಹೋರಾಟವು ರಕ್ತದಲ್ಲಿ ಬರೆದ ಅಮರ ಸಾಹಸಗಾಥೆ: ತಮ್ಮ ಬದುಕುವ ಹಕ್ಕಿನ ರಕ್ಷಣೆಗಾಗಿ ಸಂಕಟಪಡುತ್ತಿದ್ದ ಜನರು ಸಿಡಿದೆದ್ದ ವೀರಗಾಥೆಯದು. ಆಹಾರಕ್ಕಾಗಿನ ಹೋರಾಟ ಜುಲೈ 13, 1959 ರಂದು ಪ್ರಾರಂಭವಾಗಿ ಸೆಪ್ಟೆಂಬರ್‌ವರೆಗೂ ಮುಂದುವರಿಯಿತು, ಕಾಂಗ್ರೆಸ್ ಸರ್ಕಾರದ ನಿರ್ದಯ ದಬ್ಬಾಳಿಕೆಗಳಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಜನರು ಹತರಾದರು, ನೂರಾರು ಜನರು ಗಾಯಗೊಂಡರು ಮತ್ತು ಸಾವಿರಾರು ಜನ ಬಂಧಿಸಲ್ಪಟ್ಟರು. ಆ ಹೋರಾಟವು ಬಂಗಾಳದ ಇಡೀ ಜನಸಮೂಹದ ಮಹಾ ಉಬ್ಬರದ ಸ್ವರೂಪವನ್ನು ತಳೆಯಿತು. ಲಕ್ಷಾಂತರ ಜನರು ಬೀದಿಗೆ ಬಂದರು – ಕೊಲ್ಕೊತ್ತಾ ಮತ್ತು ಜಿಲ್ಲಾ ಕೇಂದ್ರಗಳಿಗೆ ಸೀಮಿತವಾಗದ ಆ ಹೋರಾಟ ಹಳ್ಳಿಗಳ ಮೂಲೆ ಮೂಲೆಗೂ ಹರಡಿತು. ನೂರಾರು ಸಾವಿರಾರು ಸಂಖ್ಯೆಯ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಮಧ್ಯಮವರ್ಗದ ನೌಕರರು, ವೃತ್ತಿನಿರತರು ಹಾಗೂ ಇತರ ವಿಭಾಗದ ಜನರು ಹೋರಾಟದಲ್ಲಿ ಧುಮುಕಿದರು.

ಆಹಾರಕ್ಕಾಗಿನ ಹೋರಾಟ ಆರಂಭವಾದಾಗ ಪಶ್ಚಿಮ ಬಂಗಾಳದ ಮೊಟ್ಟ ಮೊದಲ ಮುಖ್ಯಮಂತ್ರಿ ಡಾ.ಬಿ.ಸಿ.ರಾಯ್ ಅವರ ನೇತೃತ್ವದಲ್ಲಿನ ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ, ಆಹಾರ ಬಿಕ್ಕಟ್ಟು ಮತ್ತು ಬರಗಾಲದ ರೀತಿಯ ಪರಿಸ್ಥಿತಿ ರಾಜ್ಯದ ಆರ್ಥಿಕತೆಯ ಶಾಶ್ವತ ಲಕ್ಷಣಗಳಾಗಿದ್ದವು. ಬಂಗಾಳದ ಆಹಾರ ಪರಿಸ್ಥಿತಿ 1955 ರಿಂದಲೇ ಗಂಭೀರ ಸ್ವರೂಪಕ್ಕೆ ತಿರುಗಿತ್ತು, ಮುಖ್ಯವಾಗಿ ಏಪ್ರಿಲ್ ಮತ್ತು ಸೆಪ್ಟೆಂಬರ್ ತಿಂಗಳುಗಳ ನಡುವಿನ ಅವಧಿಯಲ್ಲಿ ಅದು ಇನ್ನೂ ಹದಗೆಟ್ಟ ಸ್ಥಿತಿ ತಲುಪಿತು. ಅಕ್ಕಿಯ ಬೆಲೆ ಸೂಚ್ಯಾಂಕವು ಡಿಸೆಂಬರ್ 1955 ರ ಹೊತ್ತಿಗೆ ಒಂದು ಟನ್ನಿಗೆ ರೂ.382/– ಇದ್ದದ್ದು ಡಿಸೆಂಬರ್ 1956ರ ಹೊತ್ತಿಗೆ ರೂ.532/– ಆಗಿತ್ತು. 1959ರ ಆದಿಯಲ್ಲಿ ಪರಿಸ್ಥಿತಿ ತೀರ ಹದಗೆಟ್ಟಿತು. ಇಡೀ ಜನಸಮೂಹವೇ ಹಸಿವಿನಿಂದ ನರಳುವಂತಾಗಿ ಸಾವು, ಆತ್ಮಹತ್ಯೆಗಳು ಮತ್ತು ನೂರಾರು ಸಾವಿರಾರು ಸಂಖ್ಯೆಯ ಜನರು



ಹಳ್ಳಿಗಳಿಂದ ನಗರಗಳತ್ತ ಗುಳೆ ಹೋಗುವ ದುರಂತ ಸ್ಥಿತಿ ತಲುಪಿತ್ತು. ಮುಖ್ಯವಾಗಿ ಆಹಾರ ಮತ್ತು ಉದ್ಯೋಗಗಳ ಹುಡುಕಾಟ ಮಾಡುತ್ತಾ ಕೊಲ್ಕತ್ತಾಕ್ಕೆ ತೆರಳುವ ಚಿತ್ರಣ ಸಾಮಾನ್ಯವಾಗಿತ್ತು. ಸ್ವಾತಂತ್ರ್ಯ ಬಂದಾಗಿನಿಂದಲೂ ಕಾಂಗ್ರೆಸ್ ಸರ್ಕಾರದ ಆಳ್ವಿಕೆಯಲ್ಲಿ, ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಬದಲು ದೊಡ್ಡ ಮಟ್ಟದಲ್ಲಿ ರೈತರು ಜಮೀನುಗಳನ್ನು ಮತ್ತು ಉದ್ಯೋಗಗಳನ್ನು ಕಳೆದುಕೊಂಡು ದಿವಾಳಿ ಏಳುವ ಸನ್ನಿವೇಶ ಉಂಟಾಯಿತು.

ಈ ಹೋರಾಟದುದ್ದಕ್ಕೂ ಕಮ್ಯುನಿಸ್ಟ್ ಪಕ್ಷವು ಮಹತ್ವದ ಪಾತ್ರವನ್ನು ವಹಿಸಿತು. ಪಕ್ಷವು ಮುತುವರ್ಜಿ ವಹಿಸಿ ಅಪಾರ ಸಂಖ್ಯೆಯ ಜನರನ್ನು ಸಂಘಟಿಸಿ 'ಬೆಲೆ ಏರಿಕೆ ಮತ್ತು ಬರಗಾಲ ಪ್ರತಿರೋಧ ಸಮಿತಿ'(ಪ್ರೈಸ್ ಇನ್ಕ್ರೀಸ್ ಅಂಡ್ ಫ್ಯಾಮಿನ್ ರೆಸಿಸ್ಟೆನ್ಸ್ ಕಮಿಟಿ – ಪಿಐಎಫ್‌ಆರ್‌ಸಿ)ಗಳೆಂಬ ವಿಶಾಲವಾದ ವೇದಿಕೆಯನ್ನು ರಚಿಸಿತು. ಈ ಪಿಐಎಫ್‌ಆರ್‌ಸಿ ಮೂಲಕ, ಆ ಸಮಿತಿಯ ತೀರ್ಮಾನಗಳನ್ನು ರೂಪಿಸುವಲ್ಲಿ ಮತ್ತು ಜಾರಿಮಾಡುವಲ್ಲಿ ಅದು ಭಾರಿ ಪ್ರಮಾಣದಲ್ಲಿ ಸಹಾಯ ಮಾಡಿತು ಮತ್ತು ಅತ್ಯಂತ ಕಷ್ಟದ ಸ್ಥಿತಿಯಲ್ಲೂ, ಪರಿಸ್ಥಿತಿಯ ಮೇಲೆ ಸಂಪೂರ್ಣ ಹಿಡಿತ ಸಾಧಿಸಿತು. ಲಾಠಿ ಚಾರ್ಜು ಹಾಗೂ ಗೋಲಿಬಾರ್‌ಗಳ ನಟ್ಟನಡುವಿನಲ್ಲೂ, ಗೂಂಡಾಗಳು ಮತ್ತು ಬಾಡಿಗೆ ಪ್ರಚೋದಕರ ವಿರುದ್ಧದ ಕಾದಾಟಗಳಲ್ಲೂ, ಕೋಪೋದ್ರಿಕ್ತ ಜನರ ದ್ವೇಷ ಹಾಗೂ ಕೋಪ ಅನಪೇಕ್ಷಣೀಯ ವಿಷಯಗಳತ್ತ ಹರಿಯದಂತೆ ಮನವೊಲಿಸುವಲ್ಲೂ ಹೀಗೆ ಯಾವಾಗಲೂ ಮತ್ತು ಎಲ್ಲಾ ಕಡೆಗಳಲ್ಲೂ ಪಕ್ಷದ ಕಾರ್ಯಕರ್ತರು ಜನರೊಂದಿಗೆ ಇದ್ದರು.



ವಿಧಾನಸಭೆಗೆ ಚುನಾಯಿತರಾದ ಕಮ್ಯುನಿಸ್ಟ್ ಪಕ್ಷದ ಮುಖಂಡರು ರಾಜ್ಯದ ಆಹಾರ ಬಿಕ್ಕಟ್ಟನ್ನು ಹೋಗಲಾಡಿಸಲು ಪಿಐಎಫ್‌ಆರ್‌ಸಿ ನೀಡಿದ್ದ ಸಲಹೆಗಳನ್ನು ವಿಧಾನಸಭೆಯಲ್ಲಿ ಫೆಬ್ರವರಿಯ ಬಜೆಟ್ ಅಧಿವೇಶನದಲ್ಲಿ ಚರ್ಚೆಗೆ ಎತ್ತಿಕೊಂಡರು. ಆದರೆ ಸರ್ಕಾರ ಕ್ರಮ ಕೈಗೊಳ್ಳಲು ನಿರಾಕರಿಸಿತು ಮತ್ತು ಬದಲಿಗೆ ವರ್ತಕರ ಲಾಭದ ಹಿತಾಸಕ್ತಿಗೆ ಅನುಗುಣವಾಗಿ ನಡೆದುಕೊಂಡಿತು. ದುರ್ಭಿಕ್ಷದ ತಿಂಗಳುಗಳು ಶುರುವಾದಾಗ ಸರ್ಕಾರವು ಬೆಲೆ ನಿಯಂತ್ರಣ ಆದೇಶವನ್ನು ಅಮಾನತುಗೊಳಿಸಿತು, ಲಾಭಬಡುಕತನವನ್ನು ಮತ್ತು ಕಾಳಸಂತೆ ಬೆಲೆಗಳನ್ನು ಕಾನೂನುಬದ್ಧಗೊಳಿಸಿತು. ಸಾಕಷ್ಟು ಪ್ರಮಾಣದ ಭತ್ತ ಮತ್ತು ಅಕ್ಕಿಯನ್ನು ರೈತರಿಂದ ನೇರವಾಗಿ ಸಂಗ್ರಹಿಸಲು ನಿರಾಕರಿಸಿತು ಮತ್ತು ಅಕ್ಕಿ ಗಿರಣಿಗಳ ಉತ್ಪಾದನೆಗಳ ಮೇಲೆ ಲೆವಿ ಹೆಚ್ಚು ಮಾಡಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಿತು. ಸರ್ಕಾರದ ವಿರುದ್ಧ ಕಮ್ಯುನಿಸ್ಟ್ ಪಕ್ಷವು ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿಯು ಸರ್ಕಾರದ ಜನ–ವಿರೋಧಿ ಹಾಗೂ ಕಳ್ಳದಾಸ್ತಾನುಗಾರರ ಪರವಾದ ಆಹಾರ ನೀತಿಯನ್ನು ಸಂಪೂರ್ಣವಾಗಿ ಬಯಲು ಮಾಡಿತು.

ಕಮ್ಯುನಿಸ್ಟ್ ಪಕ್ಷವು ಪಿಐಎಫ್‌ಆರ್‌ಸಿ ಮೂಲಕ ಒಂದು ಸಮಗ್ರವಾದ ಪರ್ಯಾಯ ನೀತಿಯನ್ನು ಸರ್ಕಾರದ ಮುಂದೆ ಪರಿಗಣನೆಗಾಗಿ ಮಂಡಿಸಿತು. ರಾಜ್ಯದಲ್ಲಿ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಅಳವಡಿಸಬೇಕಾದ ಕ್ರಮಗಳನ್ನು, ರೈತರಿಂದ ನೇರವಾಗಿ ಖರೀದಿಸಿದ ಧಾನ್ಯಗಳನ್ನು ಸರಿಯಾಗಿ ವಿತರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಮತ್ತು ಹಿರಿಯ, ದುರ್ಬಲ ಹಾಗು ನಿರುದ್ಯೋಗಿಗಳಿಗೆ ಒದಗಿಸಬೇಕಾದ ಕೆಲವು ಪರಿಹಾರ ಕ್ರಮಗಳನ್ನೂ ಈ ಪರ್ಯಾಯ ನೀತಿಯು ಸೂಚಿಸಿತ್ತು. ಅದೇ ಸಮಯದಲ್ಲಿ ಕೇರಳದಲ್ಲಿನ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರ್ಕಾರವು ಅನುಸರಿಸುತ್ತಿರುವಂತೆ ಎಲ್ಲಾ ಹಂತಗಳಲ್ಲೂ ಆಹಾರ ಸಲಹಾ ಸಮಿತಿಗಳನ್ನು ರಚಿಸಬೇಕೆಂದು ಕೂಡ ಪಕ್ಷವು ಸಲಹೆ ನೀಡಿತು. ಮುಂದುವರಿದು ಹೆಚ್ಚುವರಿ ಜಮೀನುಗಳನ್ನು ಭೂಹೀನ ಕೃಷಿ ಕೂಲಿಕಾರರಿಗೆ ಮತ್ತು ಬಡ ರೈತರಿಗೆ ಹಂಚಬೇಕೆಂದು, ನೆರವಿನ ಅಗತ್ಯವಿರುವ ಎಲ್ಲ ಜನರನ್ನು ಒಳಗೊಳ್ಳುವಂತೆ ಸುಧಾರಿತ ಪಡಿತರ ಯೋಜನೆಯನ್ನು ವಿಸ್ತರಿಸಬೇಕೆಂದು, ಅಗತ್ಯವಿರುವಷ್ಟು ಆಹಾರ ದಾಸ್ತಾನು ಸಂಗ್ರಹಿಸಬೇಕೆಂದು, ಬೆಲೆಗಳನ್ನು ಇಳಿಸಬೇಕೆಂದು ಮತ್ತು ಕಳ್ಳದಾಸ್ತಾನು ಹಾಗೂ ಸಟ್ಟಾ ವ್ಯಾಪಾರವನ್ನು ತಡೆಹಿಡಿಯಬೇಕೆಂದು ಪಕ್ಷವು ಒತ್ತಾಯಿಸಿತು.

ಈ ಬೇಡಿಕೆಗಳನ್ನು ಒಪ್ಪುವ ಬದಲು ರಾಜ್ಯದ ಕಾಂಗ್ರೆಸ್ ಸರ್ಕಾರವು ಕಮ್ಯುನಿಸ್ಟ್ ಪಕ್ಷ ಹಾಗೂ ಪಿಐಎಫ್‌ಆರ್‌ಸಿ ಒಟ್ಟುಗೂಡಿ ಮುಂದಿಟ್ಟಿದ್ದ ಪ್ರತಿಯೊಂದು ಬೇಡಿಕೆಯನ್ನೂ ಮೊಂಡುತನದಿಂದ ತಿರಸ್ಕರಿಸಿತು. ಆಹಾರ ಪರಿಸ್ಥಿತಿ ಹದಗೆಟ್ಟಾಗ, ಕಮ್ಯುನಿಸ್ಟ್ ಪಕ್ಷವು ಪಿಐಎಫ್‌ಆರ್‌ಸಿ ಮೂಲಕ ಜನರನ್ನು ಅಣಿನೆರೆಸಲು ಕರೆ ಕೊಟ್ಟಿತು. ಅತ್ಯಂತ ಕಡಿಮೆ ಅವಧಿಯಲ್ಲಿ, ರಾಜ್ಯಾದ್ಯಂತ ಪ್ರತಿಭಟನಾ ಸಭೆಗಳು ಮತ್ತು ಮತಪ್ರದರ್ಶನಗಳೂ ನಡೆದವು, ಚಳುವಳಿಯು ರಾಜ್ಯಮಟ್ಟದ ಸ್ವರೂಪ ಪಡೆಯಿತು. ಇದಾದ ಕೂಡಲೇ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಡಲಾಯಿತು, ಇದಕ್ಕೆ ಕಾರ್ಮಿಕ ವರ್ಗದಿಂದ ಪ್ರಚಂಡ ಸ್ಪಂದನೆ ದೊರೆಯಿತು. ಈ ಯಾವ ಪ್ರತಿಭಟನೆಗಳು ಕಾಂಗ್ರೆಸ್ ಸರ್ಕಾರದ ಮೊಂಡುತನವನ್ನು ಅಲುಗಾಡಿಸಲಾಗಲಿಲ್ಲ.

ಗತ್ಯಂತರವಿಲ್ಲದೇ ಪಿಐಎಫ್‌ಆರ್‌ಸಿ ನೇರ ಕಾರ್ಯಾಚರಣೆಗೆ ಕರೆ ನೀಡಿತು. ಈ ಹೋರಾಟವನ್ನು ಜುಲೈ 13ರಂದು ಮಿಡ್ನಾಪುರದಲ್ಲಿ ಪ್ರಾರಂಭಿಸಲಾಯಿತು ಮತ್ತು ಹತ್ತು ದಿನಗಳೊಳಗೆ ಎಲ್ಲಾ ಜಿಲ್ಲೆಗಳಿಗೆ ಹಬ್ಬಿತು. ಆಗಸ್ಟ್ 8 ರಂದು ರಾಜ್ಯ ಆಹಾರ ಸಮಾವೇಶವನ್ನು ಸಂಘಟಿಸಲಾಯಿತು, ಆಗಸ್ಟ್ 20 ರಿಂದ ರಾಜ್ಯಾದ್ಯಂತ ನೇರ ಕಾರ್ಯಾಚರಣೆಗೆ ಅದು ಕರೆ ನೀಡಿತು. ಅವತ್ತಿನ ನಂತರ, ಚಳುವಳಿಯು ವೇಗ ಪಡೆದುಕೊಂಡು ಘಟನೆಗಳು ತ್ವರಿತಗತಿಯಲ್ಲಿ ಮುಂದುವರಿದವು.

ಬಿ.ಸಿ.ರಾಯ್ ಸರ್ಕಾರವು ಈ ಚಳುವಳಿಯ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಯಿತು; ಮೊದಲು ಎಡಪಕ್ಷಗಳ, ಕಾರ್ಮಿಕ ಸಂಘಗಳ, ಕಿಸಾನ್ ಸಭಾದ ಮತ್ತಿತರ ಸಾಮೂಹಿಕ ಸಂಘಟನೆಗಳ 100ಕ್ಕೂ ಹೆಚ್ಚು ಮುಖಂಡರನ್ನು ಬಂಧಿಸಿತು. ಚಳುವಳಿಯನ್ನು ದುರ್ಬಲಗೊಳಿಸಲು ಮಾಡಿದ ಮಿಂಚಿನದಾಳಿ ಎಂದು ಅದನ್ನು ಬಿಂಬಿಸಲಾಯಿತು, ಆದರೆ ಅವರ ಉದ್ದೇಶ ಫಲಿಸಲಿಲ್ಲ. ಆಗಸ್ಟ್ 20ರಂದು, ಮುಂಚೆಯೇ ನಿರ್ಧಾರ ಮಾಡಿದ ನೇರ ಕಾರ್ಯಾಚರಣೆಯ ದಿನ, ಸಾವಿರಾರು ಜನರು ಅಣಿನೆರೆದು ಚಳುವಳಿಗೆ ಹಿಂದೆಂದೂ ಕಂಡಿರದ ಸಾಮೂಹಿಕ ಸ್ವರೂಪವನ್ನು ನೀಡಿತು. ಕಲ್ಕತ್ತಾದಲ್ಲಿ 30,000 ಕ್ಕೂ ಹೆಚ್ಚು ಜನ ಸೇರಿ ಆಹಾರ ಸಚಿವರ ಮನೆಯ ಮುಂದೆ ಮತಪ್ರದರ್ಶನ ಮಾಡಲು ಮುಂದಾದರು. ಆಗಸ್ಟ್ 31 ರಂದು ಕಲ್ಕತ್ತಾದಲ್ಲಿ ಭಾರಿ ಬಹಿರಂಗ ಸಭೆಯನ್ನು, ರಾಜ್ಯವ್ಯಾಪೀ ಸಾರ್ವತ್ರಿಕ ಮುಷ್ಕರವನ್ನು ಮತ್ತು ಸೆಪ್ಟೆಂಬರ್ 3 ರಂದು ಹರತಾಳವನ್ನು ಸಂಘಟಿಸಲು ಪಿಐಎಫ್‌ಆರ್‌ಸಿ ಕರೆ ಕೊಟ್ಟಿತು. ಪಿಐಎಫ್‌ಆರ್‌ಸಿಯ ಈ ತೀರ್ಮಾನಗಳು ಮತ್ತು ಅದಕ್ಕೆ ಬಂಗಾಳದ

ಪುಟ 14 ನೋಡಿ

ಸೆಪ್ಟೆಂಬರ್ 26, 1959 ರಂದು ಆಹಾರ ಚಳುವಳಿಯನ್ನು ಹಿಂದಕ್ಕೆ ಪಡೆಯುವ ನಿರ್ಧಾರವನ್ನು ಪಿಐಎಫ್‌ಆರ್‌ಸಿಯು ಔಪಚಾರಿಕವಾಗಿ ಪ್ರಕಟಿಸಿತು; ಅಂದು ಹುತಾತ್ಮರ ಶಾಶ್ವತ ಸ್ಥಂಭಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಒಂದು ಅವಿಸ್ಮರಣೀಯ ಮೌನ ಮೆರವಣಿಗೆಯನ್ನು ಕಲ್ಕತ್ತಾದಲ್ಲಿ ನಡೆಸಿ ಪೋಲಿಸ್ ದೌರ್ಜನ್ಯ ಕುರಿತು ಸಾರ್ವಜನಿಕ ವಿಚಾರಣೆ ನಡೆಸಬೇಕೆಂದು, ಹುತಾತ್ಮರಿಗೆ ಸರಿಯಾದ ಪರಿಹಾರ ನೀಡಬೇಕೆಂದು ಒತ್ತಾಯಿಸಲಾಯಿತು.

ಈ ವರ್ಷ ಕೊವಿಡ್ ಮಹಾಸೋಂಕಿನ ಸಂದರ್ಭದಲ್ಲಿ ಉಂಟಾಗಿರುವ ಸಂಕಟಗಳ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಲದಲ್ಲಿ 60 ವರ್ಷಗಳ ಹಿಂದಿನ ಈ ಹೋರಾಟದ ಹುತಾತ್ಮರನ್ನು ಕೊಲ್ಕತಾದ ಹುತಾತ್ಮ ಸ್ಮಾರಕದಲ್ಲಿ ಮತ್ತು ರಾಜ್ಯದ ಮೂಲೆ–ಮೂಲೆಗಳಲ್ಲಿ ನೆನಪಿಸಿಕೊಳ್ಳಲಯಿತು.



ಕೊನೆಗೂ ಮೋದಿ ಸರಕಾರ ನಗರಗಳಲ್ಲಿನ ನಿರುದ್ಯೋಗದ ಬಗ್ಗೆ ಎಚ್ಚೆತ್ತುಕೊಂಡಿದೆಯೇ?

ಇದು ಒಬ್ಬ ಆರ್ಥಿಕ ತಜ್ಞರು ಕೇಳಿರುವ ಪ್ರಶ್ನೆ(ನ್ಯೂಸ್‌ಕ್ಲಿಕ್, ಸುಬೋಧ್ ವರ್ಮ, ಸಪ್ಟಂಬರ್ 3)

ನಿರುದ್ಯೋಗ ಈ ಕೊವಿಡ್ ಸಮಯದಲ್ಲಿ ಲಾಕ್‌ಡೌನಿನ ಪರಿಣಾಮವಾಗಿ ಪ್ರಮುಖ ಸಮಸ್ಯೆಯಾಗಿ ಮೇಲೆದ್ದು ಬಂದಿರುವುದು ಎಲ್ಲರೂ ಗಮನಿಸಿರುವ ಸಂಗತಿಯೇ. ಆದರೆ ಪ್ರಧಾನ ಮಂತ್ರಿಗಳ 'ಮನ್‌ಕೀ ಬಾತ್'ಗಳಲ್ಲಿ ಟ್ವೀಟ್‌ಗಳಲ್ಲಿ , ಸರಕಾರದ ವೆಬ್ ತಾಣಗಳಲ್ಲಿ, ಒಟ್ಟಾರೆಯಾಗಿ ಸರಕಾರದ ಬೃಹತ್ ಪ್ರಚಾರಯಂತ್ರದಲ್ಲಿ ಈ ಬಗ್ಗೆ ದಿವ್ಯಮೌನವನ್ನು ಇನ್ನೂ ಕಾದುಕೊಳ್ಳಲಾಗಿದೆ.

ನಿರುದ್ಯೋಗದ ಒಂದು ಗಮನಾರ್ಹ ಸಂಗತಿಯೆಂದರೆ ನಿರುದ್ಯೋಗ ದರ ನಗರಗಳಲ್ಲಿ ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚಿದೆ. ಕೊವಿಡ್ ಎರಗುವ ಮೊದಲು ಈ ವರ್ಷದ ಜನವರಿಯಲ್ಲಿ ಗ್ರಾಮೀಣ ಪ್ರದೇಗಳಲ್ಲಿ ನಿರುದ್ಯೋಗ ದರ 6.1ಶೇ. ಇದ್ದಾಗ ನಗರಗಳಲ್ಲಿ ಆಗಲೇ ಅದು 9.7ಶೇ. ಆಗಿತ್ತು. ಲಾಕ್‌ಡೌನಿನಿಂದಾಗಿ ನಗರಪ್ರದೇಶಗಳಲ್ಲಿ ಎಪ್ರಿಲ್‌ನಲಲಿ 25ಶೇ.ಕ್ಕೆ, ಜೂನ್‌ನಲ್ಲಿ 25.8ಶೇ.ಕ್ಕೆ ಜಿಗಿದಾಗ, ಗ್ರಾಮೀಣ ಪ್ರದೇಶದಲ್ಲಿಯೂ ಈ ಜಿಗಿತ ಕಂಡಿದ್ದರೂ, ಅಲ್ಲಿ ಅದು ಅನುಕ್ರಮವಾಗಿ 22.9ಶೇ. ಮತ್ತು 22.5ಶೇ,. ಇತ್ತು.

ಅಲ್ಲದೆ ಪ್ರಧಾನಿಗಳ ಚಪ್ಪಾಳೆ, ತಟ್ಟೆ, ದೀಪ ಹಚ್ಚುನ ಕರೆಗಳಿಗೆ ಓಗೊಟ್ಟ ನಗರಪ್ರದೇಶಗಳಲ್ಲೂ ಕೊವಿಡ್ ಮತ್ತು ಲಾಕ್‌ಡೌನ್ ನಿರ್ವಹಣೆ ನಕಾರಾತ್ಮಕ ಪರಿಣಾಮ ಬೀರಿರುವಂತೆ ಕಾಣುತ್ತದೆ.

ಈ ಹಿನ್ನೆಲೆಯಲ್ಲಿ ಮೋದಿ ಸರಕಾರ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ನಗರ ಪ್ರದೇಶಗಳಿಗೂ, ಆರಂಭದಲ್ಲಿ ಸಣ್ಣ ನಗರಗಳಿಗೆ ವಿಸ್ತರಿಸುವ ಬಗ್ಗೆ ಯೋಚಿಸಲಾರಂಭಿಸಿದೆ ಎಂಬ ಸುದ್ದಿ ಬಂದಿದೆ. ಆರಂಭದಲ್ಲಿ ಇದಕ್ಕೆ 35,000 ಕೋಟಿ ರೂ.ಗಳನ್ನು ಕೊಡಲಾಗುವುದು ಎಂದು ವಸತಿ ಮತ್ತು ನಗರ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿ ಹೇಳಿರುವುದಾಗಿ ವರದಿಯಾಗಿದೆ. ಇದು ಮನರೇಗದಂತೆ ರಸ್ತೆ ನಿರ್ಮಾಣ, ಬಾವಿ ತೋಡುವುದು, ಮರು ಅರಣ್ಯೀಕರಣ ಮುಂತಾದ ಕಾಮಗಾರಿಗಳಲ್ಲಿ ಉದ್ಯೋಗ ಒದಗಿಸುವ ಯೋಜನೆ ಹೊಂದಿದೆಯಂತೆ(ಲೈವ್‌ಮಿಂಟ್, ಸಪ್ಟಂಬರ್2) ಇನ್ನೂ ಅಧಿಕೃತವಾಗಿ ಇದರ ಪ್ರಕಟಣೆ ಆಗಿಲ್ಲ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಯುಪಿಎ–1 ಆಳ್ವಿಕೆಯಲ್ಲಿ ಎಡಪಕ್ಷಗಳ ಒತ್ತಡದಿಂದ ಜಾರಿಗೆ ಬಂದ ಹಕ್ಕು–ಆಧಾರಿತ ಯೋಜನೆ. ಅದೀಗ ಜಗತ್ತಿನ ಅತಿ ದೊಡ್ಡ ಉದ್ಯೋಗ ಯೋಜನೆ ಎನಿಸಿಕೊಂಡಿದೆ. ಸೀಮಿತವಾದರೂ ಗಮನಾರ್ಹವಾದ ಇದರ ಯಶಸ್ಸು ಇದನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು ಎಂಬ ಬೇಡಿಕೆಗೆ ಕಾರಣವಾಗಿದೆ. ಆದರೆ ಈ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಮನರೇಗವನ್ನು ಹೀಗಳೆಯುವ ಕುಂಠಿತಗೊಳಿಸುವ ಪ್ರಯತ್ನಗಳು ಯಶಸ್ವಿಯಾಗದಿದ್ದರೂ ಸತತವಾಗಿ ನಡೆದಿವೆ. ಇಂತಹ ಸರಕಾರ ಇದನ್ನು ನಗರಪ್ರದೇಶಗಳಿಗೆ ನಿಜವಾಗಿಯೂ ವಿಸ್ತರಿಸುತ್ತದೆಯೇ, ಗ್ರಾಮೀಣ ಯೋಜನೆಗೆ ಹಣ ಕಡಿತ ಮಾಡುತ್ತಿರುವ ಸರಕಾರ ಇದಕ್ಕೆ ನಿಜವಾಗಿಯೂ ಕೊಡುತ್ತದೆಯೇ ಎಂಬಿತ್ಯಾದಿ ಸಂದೇಹ ಬಾರದಿರದು.

ಜನವರಿ–ಎಪ್ರಿಲ್ 2020ರ ತ್ರೈಮಾಸಿಕದಲ್ಲಿ ನಗರಪ್ರದೇಶಗಳಲ್ಲಿನ ಒಟ್ಟು ಶ್ರಮಶಕ್ತಿ 14.5 ಕೋಟಿ ಎಂದು ಸಿಎಂಐಇ ಲೆಕ್ಕ ಹಾಕಿದೆ. ಇದರಲ್ಲಿ 11.7 ಕೋಟಿ ಉದ್ಯೋಗದಲ್ಲಿದ್ದರು. ಅಂದರೆ ಉದ್ಯೋಗವಿಲ್ಲದರ ಸಂಖ್ಯೆ ಸುಮಾರು 2.8 ಕೋಟಿ. ಇವರಲ್ಲಿ 1.1 ಕೋಟಿ ಉದ್ಯೋಗ ಹುಡುಕಿ–ಹುಡುಕಿ ಹತಾಶರಾಗಿ ಕೈಚೆಲ್ಲಿ ಕೂತವರು ಎನ್ನಲಾಗಿದೆ. ಈ 2.8 ಕೋಟಿಯಲ್ಲಿ 60ಶೇ. 29ವರ್ಷಗಳಿಗಿಂತ ಕಡಿಮೆ ವಯಸ್ಸಿನವರು.

ಲಾಕ್‌ಡೌನಿನಿಂದ ಮುಚ್ಚಿರುವ ಸಣ್ಣ–ದೊಡ್ಡ ಉದ್ದಿಮೆಗಳು ಬಹಳಷ್ಟು ಇನ್ನೂ ತೆರೆದಿಲ್ಲ. ಬೇಡಿಕೆ ಹೆಚ್ಚಿಸುವ ಕ್ರಮಗಳಿಲ್ಲದೆ ಅವು ಬೇಗನೇ ತೆರೆಯುವಂತೆಯೂ ಕಾಣುತ್ತಿಲ್ಲ. ಇನ್ನು ರಸ್ತೆ ನಿರ್ಮಾಣ ಮುಂತಾದ ಕಾಮಗಾರಿಗಳಲ್ಲಿ ತಿಂಗಳಿಗೆ ಒಂದು ವಾರ, ಮನರೇಗ ದರದಲ್ಲಿ ಕೂಲಿ ಕೊಟ್ಟರೆ, ಅಂದರೆ ತಿಂಗಳಿಗೆ 1400ರೂ.ನಷ್ಟು ಆದಾಯಕ್ಕೆ ಎಷ್ಟು ಮಂದಿ ಇಂತಹ ಕೆಲಸಗಳಿಗೆ ಬಂದಾರು ಎಂಬ ಪ್ರಶ್ನೆಯೂ ಇದೆ.

ಎಡಪಕ್ಷಗಳು, ಮತ್ತು ಕೆಲವು ಅರ್ಥಶಾಸ್ತ್ರಜ್ಞರು ಕೂಡ ಮೊದಲು ಜನಗಳ ಕೈಗಳಲ್ಲಿ ಹಣ ಮತ್ತು ಆಹಾರಧಾನ್ಯಗಳನ್ನು ಇಡುವ ಕ್ರಮಗಳ ಬಗ್ಗೆ ಒತ್ತಾಯ ಮಾಡುತ್ತ ಬಂದಿದ್ದಾರೆ. ಆದರೆ ಸರಕಾರ ಇದಕ್ಕೆ ಖರ್ಚು ಮಾಡಲು ಸಿದ್ಧವಿಲ್ಲ. ಸಿಪಿಐ(ಎಂ) ಸಲ್ಲಿಸಿದ ಪ್ರಸಕ್ತ ಕಾಲದ ' 'ಆರ್ಥಿಕ ಕ್ರಮಗಳಲ್ಲಿ ಮನರೇಗವನ್ನು ನಗರಪ್ರದೇಶಗಳಿಗೂ ವಿಸ್ತರಿಸಿ ಈ ಯೋಜನೆಯಲ್ಲಿ ಸಣ್ಣ ಉದ್ದಿಮೆಗಳಲ್ಲಿ, ಅದರಲ್ಲೂ ಅಗತ್ಯ ಸಾಮಗ್ರಿಗಳ, ಸೇವೆಗಳ ಪೂರೈಕೆ ಮಾಡುವ ಉದ್ದಿಮೆಗಳಲ್ಲಿನ ಉದ್ಯೋಗವನ್ನೂ ಸೇರಿಸಬಹುದು ಎಂದಿತ್ತು. ಇದು ಒಂದು ರೀತಿಯಲ್ಲಿ ಒಂದು ನಿರ್ದಿಷ್ಟ ಅವಧಿಯ ವರೆಗೆ ಅಂತಹ ಸಣ್ಣ ಉದ್ದಿಮೆಗಳ ಸಂಬಳದ ಮೊತ್ತಗಳಿಗೆ ಸಬ್ಸಿಡಿ ಕೊಟ್ಟಂತಾಗಿ ಅವುಗಳು ಪುನಶ್ಚೇತನಗೊಳ್ಳಲು ನೆರವಾಗಬಲ್ಲದು.

ಸರಕಾರಕ್ಕೆ ಈ ಯೋಜನೆ ಇದೆಯೋ ಗೊತ್ತಿಲ್ಲ.

ನಗರ ಪ್ರದೇಶಗಳಲ್ಲಿ ಮತ್ತೆ ಬೆಂಬಲ ಪಡೆಯುವುದಂತೂ ಈ ಸರಕಾರಕ್ಕೆ ಅನಿವಾರ್ಯವಾಗಿದೆ. ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ವಿಭಾಗಗಳಿಗೆ ಒಂದು ರೀತಿಯ ಪರಿಹಾರ ಎಂದು ಇದನ್ನು ಬಗೆಯಬಹುದು. ಆದರೆ ಇದರ ಬಗ್ಗೆ ಇನ್ನೂ ಪ್ರಕಟಿಸಿಲ್ಲವಾದ್ದರಿಂದ, ನಿಜವಗಿಯೂ ಇಂತಹ ಒಂದು ಯೋಜನೆ ಇದ್ದರೆ ಅದು ಕಾರ್ಯರೂಪಕ್ಕೆ ಬರಲು ತಿಂಗಳುಗಳೇಹಿಡಿಯಬಹುದು. ಆದರೆ ಸದ್ಯಕ್ಕಂತೂ ಇದು ನಗರಗಳಲ್ಲಿನ ಅಸಂತೃಪ್ತಿಗೆ ತುಸು ಮುಲಾಮು ಹಚ್ಚಬಹುದಷ್ಟೇ. ಅದಕ್ಕಿಂತ ಹೆಚ್ಚೇನೂ ಆಗದು ಎನ್ನಲಾಗಿದೆ.



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್)

ಡಿಸ್‌ಲೈಕ್‌ಗಳು, ನಾಯಿ ತಳಿಗಳು ಮತ್ತು ಆಟಿಕೆಗಳು ಹಾಗೂ ಮನ್ ಕೀ ಬಾತ್

ಪ್ರಧಾನ ಮಂತ್ರಿಗಳ ಈ ತಿಂಗಳ ಮನ್ ಕೀ ಬಾತ್ ಮೊದಲ ಬಾರಿಗೆ ಬಹಳಷ್ಟು ವಿವಾದಗಳಿಗೆ ಒಳಗಾಗಿದೆ, ಅದರೊಳಗಿನ ವಿಚಾರಗಳ ಬಗ್ಗೆ ಅಲ್ಲ, ಅದರಲ್ಲಿ ಇಲ್ಲದ ವಿಷಯಗಳ ಬಗ್ಗೆ, ಸಾಮಾಜಿಕ ಮಾಧ್ಯಮಗಳ ಜೀವಾಳವೆನಿಸಿದ 'ಡಿಸ್‌ಲೈಕ್'ಗಳಿಗೆ ಸಂಬಂಧಪಟ್ಟಂತೆ. ದೇಶದಲ್ಲಿ ಲಕ್ಷಾಂತರ ವೃತ್ತಿಪರ ಶಿಕ್ಷಣದ ಕನಸು ಕಾಣುತ್ತಿರುವ ಯುವಜನರು ಜೆಇಇ ಮತ್ತು ಎನ್‌ಇಇಟಿ ಪರೀಕ್ಷೆಗಳ ಬಗ್ಗೆ ಆತಂಕ ಪಡುತ್ತಿದ್ದಾಗ ಪ್ರಧಾನಿಗಳ ಮನಸ್ಸಿಗೆ ಈ ಆತಂಕ ತಟ್ಟಲೇ ಇಲ್ಲ ಎಂದು ಕ್ರುದ್ಧರಾದ ಯುವಜನರಿಂದ ಬಿಜೆಪಿ ಯೂ ಟ್ಯೂಬ್ ಚಾನೆಲ್‌ನಲ್ಲಿ ಅದರ ವೀಡಿಯೋಗೆ 24 ಗಂಟೆಗಳೋಳಗೆ 5 ಲಕ್ಷಕ್ಕೂ ಹೆಚ್ಚು 'ಡಿಸ್‌ಲೈಕ್'ಗಳು ಬಂದವು ಎಂದು ಇಂಡಿಯನ್ ಎಕ್ಸ್‌ಪ್ರೆಸ್ (ಆಗಸ್ಟ್ 31)ವರದಿ ಮಾಡಿದೆ. ಇದು ಬಿಜೆಪಿಯ ಈ ಚಾನೆಲ್‌ನಲ್ಲಿ ಅತ್ಯಂತ ಹೆಚ್ಚು 'ಡಿಸ್‌ಲೈಕ್'ಗಳಿಗೆ ಒಳಗಾದ ಭಾಷಣ ಎನ್ನಲಾಗಿದೆ.

'ಮನ್ ಕೀ ನಹೀಂ ಸ್ಟೂಡೆಂಟ್ ಕೀ ಬಾತ್' ಎಂಬ ಟ್ವಿಟರ್ ಟ್ರೆಂಡ್ ಆಗಲಾರಂಭಿಸಿತು.

"ಅವರು ಉದ್ಯೋಗ, ಸಣ್ಣ ಉದ್ದಿಮೆಗಳು, ಶಿಕ್ಷಣದ ಬಗ್ಗೆ ಮಾತಾಡುವುದಿಲ್ಲ. ನೀವು ಭಾರತದ ಪ್ರಧಾನಿ, ನಮಗೆ ಮನದ ಮಾತು ಬೇಕಿಲ್ಲ, ನಿಮ್ಮನ್ನು ಯಾವುದಕ್ಕಾಗಿ ಆರಿಸಿದೇವೆಯೋ ಆ ಕರ್ತವ್ಯವನ್ನು ಮಾಡಿ' ಎಂದೊಬ್ಬರು ಟಿಪ್ಪಣಿ ಮಾಡಿದ್ದಾರೆ.

"ವಿದ್ಯಾರ್ಥಿಗಳ ಬಗ್ಗೆ ಮಾತನಾಡ ಬೇಕಾದ ಸಮಯದಲ್ಲಿ ಅವರು ನಾಯಿಗಳ ತಳಿಗಳು ಮತ್ತು ಆಟಿಕೆಗಳ ಬಗ್ಗೆ ಮಾತಾಡುತ್ತಾರೆ" ಎಂದು ಇನ್ನೊಬ್ಬರು ಟಿಪ್ಪಣಿ ಮಾಡಿದ್ದಾರಂತೆ.

ಕ್ರುದ್ಧರಾದ ಬಿಜೆಪಿ ಐಟಿ ಸೆಲ್ ಮಂದಿ ಇದೆಲ್ಲ ಕಾಂಗ್ರೆಸ್‌ನ ಕುತಂತ್ರ ಎಂದಿದ್ದಾರೆ.

ಸಾಕುಪ್ರಾಣಿಗಳ, ಅದರಲ್ಲೂ ನಾಯಿತಳಿಗಳ ಮಾತು ಬಂದಾಗ ಒಬ್ಬ ವ್ಯಂಗ್ಯಚಿತ್ರಕಾರರಿಗೆ ದೇಶದ ಮಾಧ್ಯಮಗಳು ನೆನಪಿಗೆ ಬಂದಿವೆ.



"ಅವು ಅತ್ಯುತ್ತಮ ಸಾಕುಪ್ರಾಣಿಗಳು; ವಿಧೇಯವಾಗಿರುತ್ತವೆ; ತನ್ನ ಮಾಲಕನನ್ನು ರಕ್ಷಿಸುತ್ತವೆ"

ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ.

ಇನ್ನು ಪ್ರಧಾನಿಗಳಿಗೆ ವಿದ್ಯಾರ್ಥಿಗಳ ಬದಲು ಆಟಿಕೆಗಳ ಬಗ್ಗೆಯೇ ಏಕೆ ಮಾತನಾಡಬೇಕು ಎನಿಸಿತು ಎಂಬ ಗಹನ ಪ್ರಶ್ನೆಗೆ ಇನ್ನೊಬ್ಬ ವ್ಯಂಗ್ಯ ಚಿತ್ರಕಾರರಿಗೆ ಹೊಳೆದ ಪರಿಹಾರ ಹೀಗಿದೆ:



ಮಾತನಾಡಲು ಏನೂ ಇರಲಿಲ್ಲ. ಆಗ ನಿನ್ನನ್ನು ನೋಡಿದೆ ಎಂದು ತನ್ನ ಮನದ ಮಾತಿನ ಪ್ರೇರಕನಾದ 'ಭಕ್ತ'ನಿಗೆ ಹೇಳುತ್ತಾರೆ, ತನ್ನ ಮನದ ಮಾತಿನ ಮೂಲವನ್ನು ಬಿಚ್ಚಿಡುತ್ತಾರೆ.

(ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್)


ಸುಪ್ರಿಂ ಕೋರ್ಟ್, ಹೈಕೋರ್ಟ್ ಮತ್ತು ದ್ವೇಷ ಪ್ರಚಾರ

ಕಳೆದ ವಾರ ಸುದರ್ಶನ ಟಿವಿ ಎಂಬ ಒಂದು ಚಾನೆಲ್ ಯುಪಿಎಸ್‌ಸಿ ಜಿಹಾದ್'ನ್ನು ಬಯಲು ಮಾಡುವುದಾಗಿ ಸಾರಿ ಅದರ ಒಂದು ಪ್ರೊಮೊವನ್ನು ಬಿಡುಗಡೆ ಮಾಡಿತು. ಅದರಲ್ಲಿ ಹೇಗೆ ಜಾಮಿಯ ಮಿಲಿಯದ ವಿದ್ಯಾರ್ಥಿಗಳು ಯುಪಿಎಸ್‌ಸಿ ಮೂಲಕ ದೇಶದ ಅಧಿಕಾರಶಾಹೀ ವ್ಯವಸ್ಥೆಯನ್ನು ಕೈವಶ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಬಯಲಿಗೆಳೆಯುವುದಾಗಿ ಪ್ರಕಟಿಸಲಾಯಿತು. ಮೇಲ್ನೋಟಕ್ಕೇ ಇದೊಂದು ದ್ವೇಷಪ್ರಚಾರ ಎಂಬುದು ಕಾಣುತ್ತದೆ, ಇದನ್ನು ನಿಲ್ಲಿಸಿ ಎಂಬ ಅರ್ಜಿಗೆ ಸುಪ್ರಿಂ ಕೋರ್ಟ್ ಇದರ ಪ್ರಸಾರವನ್ನು ತಡೆಯಲು ತನಗಾಗದು ಎಂದಿತು, ಆದರೆ ಇಂತಹುದೇ ಒಂದು ಅರ್ಜಿ ದಿಲ್ಲಿ ಹೈಕೋರ್ಟ್‌ ಮುಂದೆ ಬಂದಾಗ ಅದನ್ನು ಪ್ರಸಾರ ಮಾಡಬಾರದೆಂದು ಹೈಕೋರ್ಟ್ ತಡೆಯಿತು!

ವ್ಯಂಗ್ಯಚಿತ್ರ ಕೃಪೆ: ಮಂಜುಲ್, ಫಸ್ಟ್‌ಪೋಸ್ಟ್



ಆರ್ಥಿಕ ಅವ್ಯವಸ್ಥೆಯ ವಕ್ರತೆಯನ್ನು ಸಪಾಟುಗೊಳಿಸುವುದು ಹೇಗೆ? ದಿಟ್ಟ ಚಿಂತನೆ ಮತ್ತು ತುರ್ತು ಕ್ರಮವಹಿಸುವುದೇ ಏಕೈಕ ದಾರಿ




ಹೊಸ ಸೋಂಕುಗಳ ಸಂಖ್ಯೆ ಮತ್ತು ಅರ್ಥವ್ಯವಸ್ಥೆಯ ಆತಂಕಕಾರಿ ಅಂಕಿ-ಅಂಶಗಳು ಎರಡರಲ್ಲೂ ಭಾರತವು ಜಾಗತಿಕ ನಾಯಕನಾಗುವಲ್ಲಿ ಯಶಸ್ವಿಯಾಗಿದೆ. ಇದು 'ದೇವರ ಆಟ'ವಂತೂ ಅಲ್ಲವೇ ಅಲ್ಲ. ಸರಿಯಾದ ನೀತಿಗಳನ್ನು ಅನುಸರಿಸುವ ಮೂಲಕ ಇದೆಲ್ಲವನ್ನೂ ತಡೆಬಹುದಾಗಿತ್ತು. ಈ ಭಯಾನಕ ಪ್ರವೃತ್ತಿಯನ್ನು ಈಗಲೂ ಹಿಮ್ಮೆಟ್ಟಿಸಬಹುದು. ಕೇಂದ್ರ ಸರ್ಕಾರವು ತಕ್ಷಣವೇ ಒಂದು ಬೃಹತ್ ಪ್ರಮಾಣದ ಹಣಕಾಸು ಪ್ಯಾಕೇಜ್ ಒದಗಿಸಬೇಕು. ಅದರಿಂದ ಜನರಿಗೆ ನಿಜಕ್ಕೂ ಹಣ ಲಭ್ಯವಾಗುವಂತಿರಬೇಕು, ತುಟಿಗೆ ತುಸು ತುಪ್ಪ ಸವರುವ ಭರವಸೆಗಳಲ್ಲ. ದಿಟ್ಟ ಚಿಂತನೆ ಮತ್ತು ತುರ್ತು ಕ್ರಮವಹಿಸುವುದೊಂದೇ ದಾರಿ, ಬಿಕ್ಕಟ್ಟಿನಿಂದ ಹೊರಬರಲು.

ಪ್ರೊ. ಜಯತಿ ಘೋಷ್ **ಅನು: ಕೆ.ಎಂ.ನಾಗರಾಜ್**
ಕೃಪೆ: ದಿ ಹಿಂದು, ಸಪ್ಟಂಬರ್ 3, 2020

ವಿಷಯವು ಈಗ ಅಧಿಕೃತವಾಗಿದೆ: ದಿನೇ ದಿನೇ ಹೊಸದಾಗಿ ಹೆಚ್ಚುತ್ತಿರುವ ಕೊರೋನಾ ಪ್ರಕರಣಗಳ ಸಂಖ್ಯೆಯಲ್ಲಿ ಭಾರತವು ಈಗ ಮೊದಲನೆಯ ಸ್ಥಾನಕ್ಕೇರಿದೆ. ಮತ್ತು ಕೊರೊನಾ ಸಂದರ್ಭದಲ್ಲಿ ಜಗತ್ತಿನ ಪ್ರಮುಖ ಅರ್ಥವ್ಯವಸ್ಥೆಗಳ ನಿರ್ವಹಣೆಯೊಂದಿಗೆ ಹೋಲಿಸಿದರೆ, ಅದರ ಕಾರ್ಯನಿರ್ವಹಣೆಯನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ನಿರ್ವಹಿಸಿದ ಗುಂಪಿನಲ್ಲಿ ಭಾರತವು ಜಾಗತಿಕ ನಾಯಕನಾಗುವಲ್ಲಿ ಯಶಸ್ವಿಯಾಗಿದೆ. ಇಂತಹ ಎರಡು ಚಮತ್ಕಾರಗಳನ್ನು ನಮ್ಮ ಸರ್ಕಾರ ಹೇಗೆ ಸಾಧಿಸಿತು? ಇದು 'ದೇವರ ಆಟ'ವಲ್ಲ. ಬದಲಿಗೆ, ಅಧಿಕಾರದ ಚುಕ್ಕಾಣಿ ಹಿಡಿದ ಈಗಿನ ನಾಯಕತ್ವದ ಅಸಮರ್ಥತೆ ಮತ್ತು ಅದರ ಸಂವೇದನಾಶೂನ್ಯತೆಯೇ.

2020ರ ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಜಿಡಿಪಿಯ ಶೇ.24 ಅಂದಾಜು ಕುಸಿತವು ಜಿ-20 ದೇಶಗಳಿಗೆ ಮತ್ತು ಇತರ ದಕ್ಷಿಣ ಏಷ್ಯಾ ರಾಷ್ಟ್ರಗಳಿಗೆ ಹೋಲಿಸಿದರೆ, ಅತ್ಯಂತ ಕೆಟ್ಟ ಸಾಧನೆಯಾಗಿ ಕಾಣುತ್ತದೆ. ವಾಸ್ತವಿಕ ಕುಸಿತವು ಬಹುಶಃ ಇನ್ನೂ ಕೆಟ್ಟದಾಗಿರುತ್ತದೆ. ಏಕೆಂದರೆ, ಈ ಸಂಖ್ಯೆಗಳು ಔಪಚಾರಿಕ ಅಥವಾ ಸಂಘಟಿತ ವಲಯದ ಮಾಹಿತಿಯನ್ನು ಮಾತ್ರ ಆಧರಿಸಿವೆ. ಈ ಅಂಕಿ ಅಂಶಗಳನ್ನು ಆಧರಿಸಿ ಅನೌಪಚಾರಿಕ ಅಸಂಘಟಿತ ಚಟುವಟಿಕೆಗಳ ಬೆಳವಣಿಗೆಯನ್ನು ಲೆಕ್ಕಹಾಕಲಾಗುತ್ತದೆ. ಹಾಗಾಗಿ, ವಾಸ್ತವಿಕವಾಗಿ ಜಿಡಿಪಿಯ ಇಳಿಕೆಯು ಬಹುಶಃ ಇನ್ನೂ ಕೆಟ್ಟದ್ದಾಗಿಯೇ ಇರುತ್ತದೆ. ಕೈಗಾರಿಕಾ ಉತ್ಪಾದನಾ ಸೂಚ್ಯಂಕವು 20% ಕ್ಕಿಂತ ಹೆಚ್ಚು ಕುಸಿತವನ್ನು ಕಂಡಿದೆ. ಆದರೆ ತಳ ವರದಿಗಳು ಅಸಂಘಟಿತ ವಲಯದಲ್ಲಿ ಉತ್ಪಾದನೆಯು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕುಸಿದಿದೆ ಎಂಬುದನ್ನು ಸೂಚಿಸುತ್ತವೆ. ತಯಾರಿಕಾ ವಲಯದ ಅನೇಕ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಮಟ್ಟದ ಉದ್ದಿಮೆಗಳು (ಎಂಎಸ್‌ಎಂಇ) ಮತ್ತು ಸೇವೆ ಒದಗಿಸುವ ಸಂಸ್ಥೆಗಳು ಈವರೆಗೂ ಮುಚ್ಚಲ್ಪಟ್ಟಿವೆ ಅಥವಾ ಬಹಳ ಸಣ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ. ಉದ್ಯೋಗಗಳು ನಾಶವಾಗಿವೆ ಮತ್ತು ಕೂಲಿಯ ದರವೂ ಇಳಿದಿದೆ. ಹಾಗಾಗಿ ಕೂಲಿ-ವೇತನ ಆದಾಯವು ಜಿಡಿಪಿಯ ಇಳಿಕೆಗಿಂತಲೂ ತೀವ್ರವಾಗಿ ಕುಸಿಯುತ್ತಿದೆ.

ಜಿಡಿಪಿಯ ದತ್ತಾಂಶವು ಮತ್ತೊಂದು ಕೆಟ್ಟ ಸುದ್ದಿಯನ್ನೂ ಒಳಗೊಂಡಿದೆ: ಕೃಷಿಯನ್ನು ಹೊರತುಪಡಿಸಿದರೆ ಉಳಿದ ಎಲ್ಲ ವಲಯಗಳಲ್ಲೂ, ಅದರಲ್ಲೂ ವಿಶೇಷವಾಗಿ ಉದ್ಯೋಗ-ಸಾಂದ್ರ ವಲಯಗಳಲ್ಲಿ ಬೆಳವಣಿಗೆಯು ತೀವ್ರವಾಗಿ ಕುಸಿದಿದೆ. ಉತ್ತಮ ಹಿಂಗಾರು ಪೈರು ಮತ್ತು ಮುಂಗಾರು ಮಳೆ ಉತ್ತಮವಾಗಿ ಆರಂಭವಾಗಿರುವುದರಿಂದ ಕೃಷಿಯಲ್ಲಿ ಸ್ವಲ್ಪ ಮಟ್ಟಿನ ನಿರಾಳತೆ ನೆಲೆಸಿದೆ. ಆದರೆ, ಜನರ ಆದಾಯಗಳು ಇಳಿಕೆಯಾದ ಕಾರಣದಿಂದಾಗಿ, ವರ್ಷ ಕಳೆಯುವುದರೊಳಗೆ ಕೃಷಿ ಬೆಲೆಗಳಲ್ಲಿ ಚೇತರಿಕೆಯಾಗಿ ರೈತರು ಸಾಕಷ್ಟು ಆದಾಯವನ್ನು ಕಾಣುವ ಸಾಧ್ಯತೆಯೇ ಇಲ್ಲ. ಕಳೆದ ವರ್ಷದ ಇದೇ ಅವಧಿಯಲ್ಲಿ ಸರ್ಕಾರದ ಖರ್ಚುಗಳ ಬಾಬ್ತಿನಲ್ಲಿ ಸುಮಾರು 16% ಏರಿಕೆ ಇತ್ತು. ಆದರೆ, ಈ ವರ್ಷದಲ್ಲಿ ಹೂಡಿಕೆಯು ಒಟ್ಟಾರೆಯಾಗಿ ಗಣನೀಯ ಪ್ರಮಾಣದಲ್ಲಿ ಕುಸಿದಿದೆ (ಸುಮಾರು ಅರ್ಧದಷ್ಟು). ಹಾಗಾಗಿ ಸರ್ಕಾರವು ಮಾಡುವ ಹೂಡಿಕೆಯೂ ಕಡಿಮೆಯೇ ಇರುತ್ತದೆ. ಜಿಡಿಪಿಯ ಲೆಕ್ಕವು ಒಳಗೊಳ್ಳುವ ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಇತರ ಸೇವೆಗಳ ಒಟ್ಟು ಮೌಲ್ಯವು 10% ಕ್ಕಿಂತ ಹೆಚ್ಚು ಕುಸಿತ ಕಂಡಿದೆ. ಈ ಒಟ್ಟು ಮೌಲ್ಯವು ಒಳಗೊಂಡಿರುವ ಅಂಶಗಳಲ್ಲಿ ವೇತನವೊಂದರ ಪಾಲೇ ಶೇ.90ರಷ್ಟಿದೆ. ಕೇಂದ್ರ ಸರ್ಕಾರದ ವೇತನಗಳೇನೂ





ವ್ಯಂಗ್ಯಚಿತ್ರ ಕೃಪೆ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಕಡಿಮೆಯಾಗಿಲ್ಲ. ಹಾಗಾಗಿ, ಈ ಇಳಿಕೆಯ ಹೊಡೆತವು ರಾಜ್ಯ ಸರ್ಕಾರಗಳ ಮೇಲೆ ಬಿದ್ದಿರಲೇಬೇಕು. ಏಕೆಂದರೆ, ಅನೇಕ ರಾಜ್ಯ ಸರ್ಕಾರಗಳು ವೇತನಗಳನ್ನು ಬಹುತೇಕ ಸ್ಥಗಿತಗೊಳಿಸಿವೆ ಅಥವಾ ವೇತನಗಳನ್ನು ತುಂಬಾ ತಡವಾಗಿ ವಿತರಿಸಿವೆ.

ಗಂಭೀರ ಸಂಕಟ

ಈ ನಡುವೆ, ಈ ಕೊರೋನಾ ಸಾಂಕ್ರಾಮಿಕವು ನಾಗಾಲೋಟದಲ್ಲಿ ವ್ಯಾಪಿಸುತ್ತಿದೆ: ಕೊರೋನಾ ಹರಡುವಿಕೆಯ ಏರು ರೇಖೆಯಲ್ಲಿ ಕೆಳ ತಿರುವನ್ನು ತಂದು "ಚಪ್ಪಟೆಗೊಳಿಸುವ" ಎಲ್ಲಾ ಮಾತುಗಳೂ ಗಾಳಿಯಲ್ಲಿ ತೇಲಿ ಹೋಗಿವೆ. ಇದೂ ಸಹ, ಅರ್ಥವ್ಯವಸ್ಥೆಯಲ್ಲಿ "ಹಸಿರು ಚಿಗುರುತ್ತಿದೆ" ಎಂದು ಸರ್ಕಾರದ ಅಧಿಕೃತ ವಕ್ತಾರರು ನೀಡಿದ ರೀತಿಯ ಇನ್ನೊಂದು ಹೇಳಿಕೆ. "ಚಪ್ಪಟೆಗೊಳಿಸುವ" ರಾಗದ ಬದಲು ಈಗ, ಸೋಂಕಿನಿಂದ ಚೇತರಿಕೆಯ ದರ ಮತ್ತಷ್ಟು ಸುಧಾರಿಸಿದೆ ಎಂಬ ಅರ್ಥಹೀನ ಸೂಚಕದ ಮಾತು ಕೇಳಬರುತ್ತಿದೆ. ಸಾಂಕ್ರಾಮಿಕ ಹರಡುವಿಕೆಯ ಪ್ರಕರಣಗಳು ಹೆಚ್ಚಿದಂತೆಯೇ ಚೇತರಿಕೆಯ ದರವೂ ಸುಧಾರಿಸುತ್ತದೆ. ಅದೊಂದು ಸಾಧನೆಯೇ ಅಲ್ಲ.

ಈ ಸಾಂಕ್ರಾಮಿಕವು ವ್ಯಾಪಿಸಿಕೊಳ್ಳುವ ಮುನ್ನವೇ ಘೋಷಿಸಿದ ದೇಶ ವ್ಯಾಪಿ ನಿರ್ದಯ ಲಾಕ್‌ಡೌನ್ ಆರ್ಥಿಕ ಕುಸಿತಕ್ಕೆ ಕಾರಣವಾಗಿದೆ. ಸೋಂಕಿತರನ್ನು ಪರೀಕ್ಷಿಸುವುದು, ಪತ್ತೆ ಮಾಡುವುದು, ಪ್ರತ್ಯೇಕಿಸುವುದು ಮತ್ತು ಚಿಕಿತ್ಸೆ ನೀಡುವುದು – ಈ ಕ್ರಮಗಳು ದುಬಾರಿಯಾದರೂ ಸಹ, ಅವುಗಳನ್ನು ಬಿಟ್ಟರೆ, ಈ ಸಾಂಕ್ರಾಮಿಕ ರೋಗವನ್ನು ಎದುರಿಸಲು ಬೇರೆ ಮಾರ್ಗವೇ ಇಲ್ಲ. ಈ ಮಾರ್ಗವನ್ನು ಅನುಸರಿಸುವುದರ ಬದಲಾಗಿ ಕೇಂದ್ರ ಸರ್ಕಾರವು ಯಾವುದೇ ಮುನ್ಸೂಚನೆಯನ್ನೂ ನೀಡದೆ ದೇಶವ್ಯಾಪಿಯಾಗಿ ಎಲ್ಲ ಚಟುವಟಿಕೆಗಳನ್ನೂ ಬಂದ್ ಮಾಡಿಸಿತು. ನಂತರ, ಜೀವನೋಪಾಯ ಕಳೆದುಕೊಂಡ ಜನ ಸಂಖ್ಯೆಯ ಸುಮಾರು 80% ರಷ್ಟು ಮಂದಿಗೆ ಸರ್ಕಾರವು ಯಾವುದೇ ಪರಿಹಾರವನ್ನೂ ಕೊಡಲಿಲ್ಲ ಮತ್ತು ಅವರಿಗೆ ಯಾವುದೇ ಸಾಮಾಜಿಕ ರಕ್ಷಣೆಯನ್ನೂ ಒದಗಿಸಲಿಲ್ಲ. ಲಾಕ್‌ಡೌನ್ ಸೃಷ್ಟಿಸಿದ ಭಯಾನಕ ಪರಿಸ್ಥಿತಿಯಿಂದಾಗಿ ನಗರಗಳಲ್ಲಿದ್ದ ವಲಸೆ ಕಾರ್ಮಿಕರು ತಮ್ಮ ಮನೆಗಳಿಗೆ ಅನಿವಾರ್ಯವಾಗಿ ಹಿಂದಿಗಿದರು. ಹಾಗಾಗಿ, ಅವರು ತಮಗೆ ಗೊತ್ತಿಲ್ಲದೆಯೇ ಅಥವಾ ಉದ್ದೇಶಪೂರ್ವಕವಾಗಿಯಲ್ಲದೆ ಆರೋಗ್ಯ ಸೌಲಭ್ಯಗಳೇ ಇಲ್ಲದ ಗ್ರಾಮೀಣ ಪ್ರದೇಶದಲ್ಲಿ ರೋಗ ಹರಡಲು ಕಾರಣರಾದರು. ಹೊಟ್ಟೆ ತುಂಬುವಷ್ಟು ಆಹಾರವನ್ನೂ ದೊರಕಿಸಿಕೊಳ್ಳಲಾಗದಷ್ಟು ದುರ್ಬಲರಾಗಿರುವ ಮತ್ತು ಅದೇ ಕಾರಣದಿಂದ ಪೌಷ್ಟಿಕತೆಯ ಕೊರತೆಯಿಂದ ಬಳಲುತ್ತಿರುವ ಕೂಲಿ ಕಾರ್ಮಿಕರಿಗೆ, ಸಾಂಕ್ರಾಮಿಕವು ಅತ್ಯಂತ ಅಪಾಯಕಾರಿ ಮಟ್ಟದಲ್ಲಿ ಹರಡುತ್ತಿರುವ ಪರಿಸ್ಥಿತಿಯಲ್ಲಿ, ಬಹುತೇಕ ಕಡಿಮೆ ಕೂಲಿಯಲ್ಲಿ, ಕೆಲಸಕ್ಕೆ ಹಿಂದಿರುಗುವಂತೆ ಹೇಳಲಾಗುತ್ತಿದೆ.

ಇದು ಕೇವಲ ಆರಂಭವಷ್ಟೇ


ಇದಕ್ಕಿಂತಲೂ ಹೆಚ್ಚು ಭಯಾನಕವಾದ ಇನ್ನೊಂದು ವಿಷಯವೆಂದರೆ, ಇದು ಕೇವಲ ಆರಂಭವಷ್ಟೇ: ಆರೋಗ್ಯ ಮತ್ತು ಅರ್ಥವ್ಯವಸ್ಥೆ ಈ ಎರಡೂ ವಿಷಯಗಳ ವೈಫಲ್ಯದ ಬಗ್ಗೆ ಸರ್ಕಾರದ ಕಾರ್ಯತಂತ್ರದಲ್ಲಿ ಮಹತ್ತರ ಬದಲಾವಣೆಯಾಗದ ಹೊರತು ಈ ಭೀಕರ ದಿಕ್ಪಥವನ್ನು ನಿಲ್ಲಿಸಿ, ನಂತರ, ಬದಲಾಯಿಸಲಾಗುತ್ತದೆ ಎಂದು ನಂಬಲು ಕಾರಣಗಳೇ ಇಲ್ಲ. ಜಿಡಿಪಿಯ ಈ ಕುಸಿತವು ಪ್ರಸಕ್ತ ತ್ರೈಮಾಸಿಕದಲ್ಲೂ ಮುಂದುವರೆಯುತ್ತದೆ ಎಂಬುದಂತೂ ಖರೆ. ಮಾತ್ರವಲ್ಲ, ಬಹುಶಃ ವರ್ಷದ ಉಳಿದ ಭಾಗದವರೆಗೂ ಮುಂದುವರೆಯುತ್ತದೆ. ಆದ್ದರಿಂದ ಸ್ವತಂತ್ರ ಭಾರತದ ಇತಿಹಾಸದಲ್ಲೇ ಒಂದು ಅತಿ ದೊಡ್ಡ ಆರ್ಥಿಕ ಬಿಕ್ಕಟ್ಟಿನತ್ತ ನಾವು ಕಣ್ಣರಳಿಸಿ ನೋಡುತ್ತಿದ್ದೇವೆ.

ಭಾರತದ ಅರ್ಥವ್ಯವಸ್ಥೆಯ ಪ್ರಸಕ್ತ ಬಿಕ್ಕಟ್ಟಿಗೆ ಬೇಡಿಕೆಯ ಕೊರತೆಯೇ ಪ್ರಮುಖ ಕಾರಣವಾಗಿದೆ. ಗ್ರಾಹಕರ ಬಳಕೆಯ ವೆಚ್ಚಗಳು ಮತ್ತು ಹೂಡಿಕೆ, ಈ ಎರಡೂ ಅಂಶಗಳ ಬೆಳವಣಿಗೆಯು ಕೊರೋನಾ ಕಾಡುವ ಮೊದಲೇ ಇಳಿಮುಖವಾಗಿದ್ದವು. ಆ ನಂತರ, ಅರ್ಥವ್ಯವಸ್ಥೆಯು ಅಷ್ಟೊಂದು ಅಗಾಧ ಪ್ರಮಾಣದಲ್ಲಿ ಕುಸಿದು ಬಿದ್ದರೂ ಸಹ, ಸರ್ಕಾರವು ಕೈಗೊಂಡ ಪರಿಹಾರದ ಕ್ರಮಗಳು, ಶೋಚನೀಯವಾಗಿ, ಲಕ್ಷ ಲಕ್ಷ ಮಂದಿಗೆ ತಲುಪಲಿಲ್ಲ ಮತ್ತು ಜೊತೆಯಲ್ಲಿ ಒಟ್ಟಾರೆ ಬೇಡಿಕೆಯ ಮೇಲೆ ಯಾವುದೇ ಪರಿಣಾಮವನ್ನೂ ಬೀರಲಿಲ್ಲ. ಬಿಕ್ಕಟ್ಟನ್ನು ಹಿಮ್ಮೆಟ್ಟಿಸುವ ಉದ್ದೇಶದಿಂದ ಆರ್‌ಬಿಐ ಕೈಗೊಂಡ ಹಣದ ಲಭ್ಯತೆಯನ್ನು ಹೆಚ್ಚಿಸುವ ಕ್ರಮಗಳೂ ಸಹ ನಿಷ್ಪರಿಣಾಮಕವಾಗಿ ಪರಿಣಮಿಸಿವೆ: ಬ್ಯಾಂಕ್‌ಗಳು ಒದಗಿಸಿದ ಸಾಲಗಳ ಒಟ್ಟು ಪ್ರಮಾಣವು ಕಡಿಮೆಯಾಗಿದೆ. ದೊಡ್ಡ ದೊಡ್ಡ ಕಂಪನಿಗಳನ್ನು ಹೊರತುಪಡಿಸಿದರೆ, ಎಲ್ಲಾ ವಲಯಗಳ ಸಾಲಗಾರರು ಪಡೆದಿರುವ ಬ್ಯಾಂಕ್ ಸಾಲಗಳ ಮೊತ್ತವೂ ಇಳಿಕೆಯನ್ನು ಕಂಡಿದೆ.

ರಾಜ್ಯಗಳಿಗೆ ಹೊಡೆತ

ರಾಜ್ಯ ಸರ್ಕಾರಗಳೊಂದಿಗೆ ಕೇಂದ್ರ ಸರ್ಕಾರದ ವರ್ತನೆಯು ಅತ್ಯಂತ ಅವಮಾನಕರವಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯಿದೆಯ ಎಲ್ಲ ಅಧಿಕಾರವನ್ನೂ ಕೇಂದ್ರೀಕರಿಸಿಕೊಂಡು ತನ್ನ

ಪುಟ 14 ನೋಡಿ



ಜಗತ್ತಿನ ಪ್ರಮುಖ ಅರ್ಥವ್ಯವಸ್ಥೆಗಳಲ್ಲಿ ಅತಿ ಹೆಚ್ಚು ಜಿಡಿಪಿ ಕುಸಿತ ಕಂಡಿರುವ ದೇಶವೆಂದರೆ ಭಾರತ; ಚೀನಾ ಕೊವಿಡ್ ಹೊರತಾಗಿಯೂ 3.2ಶೇ, ಏರಿಕೆ ಕಂಡಿದೆ.



ನೋಟ್ ರದ್ದತಿ- ತಪ್ಪುತಪ್ಪಾದ ಜಿಎಸ್‌ಟಿ- ಕೊವಿಡ್19 – ದೇವರ ಆಟ ವ್ಯಂಗ್ಯಚಿತ್ರ ಕೃಪೆ: ಅಲೋಕ್/ಫೇಸ್‌ಬುಕ್

ಆರ್ಥಿಕ ಅವ್ಯವಸ್ಥೆಯ ವಕ್ರತೆಯನ್ನು ಸಪಾಟುಗೊಳಿಸಲು...

ಪುಟ 13 ರಿಂದ

ಕೈಯಲ್ಲೇ ಇಟ್ಟುಕೊಂಡಿರುವ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳೊಂದಿಗೆ ಸಮನ್ವಯ ಸಾಧಿಸಲಿಲ್ಲ. ಕೊರೋನಾ ಸಾಂಕ್ರಾಮಿಕ ರೋಗವನ್ನು ಸಮರ್ಥವಾಗಿ ಎದುರಿಸುವಲ್ಲಿ ಉದ್ಭವಿಸಿದ ಆರೋಗ್ಯ ಬಿಕ್ಕಟ್ಟು ಮತ್ತು ಕೊರೋನಾ ಕಾರಣದಿಂದ ಉಂಟಾದ ಆರ್ಥಿಕ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಕೇಂದ್ರ ಸರ್ಕಾರವು ನಿರಾಕರಿಸಿದ ಹಿನ್ನೆಲೆಯಲ್ಲಿ, ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ಸರ್ಕಾರಗಳು ಏದುಸಿರು ಬಿಡುತ್ತಿವೆ. ರಾಜ್ಯ ಸರ್ಕಾರಗಳಿಗೆ ಕಾನೂನುಬದ್ಧವಾಗಿ ಕೊಡಬೇಕಿರುವ ಜಿಎಸ್‌ಟಿ ಪರಿಹಾರ ಸೆಸ್‌ನ ಬಾಕಿಯನ್ನು ಕೊಡಲೂ ಸಹ ಕೇಂದ್ರ ಸರ್ಕಾರವು ನಿರಾಕರಿಸುತ್ತಿದೆ. ಒಂದು ಕಾಯ್ದೆಯ ಮೂಲಕವೇ ಕೊಟ್ಟಿರುವ ಭರವಸೆಯನ್ನು ಈಡೇರಿಸಲು ಈ ರೀತಿಯಲ್ಲಿ ನಿರಾಕರಿಸುತ್ತಿರುವ ಕ್ರಮವು, ಕಳಪೆ ರೀತಿಯಲ್ಲೇ ಪರಿಭಾವಿಸಿದ ಮತ್ತು ಅದನ್ನು ಇನ್ನೂ ಕಳಪೆಯಾಗಿ ಜಾರಿಗೊಳಿಸಿದ ಜಿಎಸ್‌ಟಿಯನ್ನು ಕೊನೆಗಾಣಿಸುವಂತೆ ಮಾಡಬಹುದು.

ಕೇಂದ್ರ ಸರ್ಕಾರದ ಇಂತಹ ಜಿಪುಣತನದ ಪರಿಣಾಮಗಳನ್ನು ನಾಗರಿಕರು ನೇರವಾಗಿ ಅನುಭವಿಸುತ್ತಾರೆ. ಬಿಕ್ಕಟ್ಟನ್ನು ಎದುರಿಸುವ ಸಲುವಾಗಿ ಬಹುತೇಕ ರಾಜ್ಯ ಸರ್ಕಾರಗಳು ಇಡೀ ವರ್ಷದಲ್ಲಿ ಆಗಬಹುದಾಗಿದ್ದ ಖರ್ಚು ವೆಚ್ಚಗಳನ್ನು ಈಗಾಗಲೇ ಮಾಡಿ ಮುಗಿಸಿವೆ. ಹಾಗಾಗಿ ರಾಜ್ಯ ಸರ್ಕಾರಗಳ ಬಳಿ ಈಗ ಬಿಡಿ ಕಾಸೂ ಇಲ್ಲ. ತೆರಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ತಾವು ಹೊಂದಿದ್ದ ಅಧಿಕಾರವನ್ನು ಜಿಎಸ್‌ಟಿಯ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಟ್ಟಿವೆ. ಹಾಗಾಗಿ, ಹಣ ಹೊಂದಿಸಿಕೊಳ್ಳಲು ರಾಜ್ಯ ಸರ್ಕಾರಗಳು ಪರದಾಡುತ್ತಿವೆ. ಕೇಂದ್ರ ಸರ್ಕಾರದಿಂದ ಜಿಎಸ್‌ಟಿಯ ಬಾಬ್ತು ಬರಬೇಕಿರುವ ಬಾಕಿಯ ಹಣವನ್ನು ಕೇಳಿದ್ದಕ್ಕೆ ಉತ್ತರವಾಗಿ ಕೇಂದ್ರ ಸರ್ಕಾರವು ಈ ಬಾಕಿಯ ಮೊತ್ತದಷ್ಟು ಹಣವನ್ನು ನೀವೇ ಸಾಲ ಮಾಡಿ ಹೊಂದಿಸಿಕೊಳ್ಳಿ ಎಂದು ಹೇಳಿದೆ. ತಮ್ಮ ಹಳೆಯ ಸಾಲಗಳನ್ನೇ ತೀರಿಸಲು ರಾಜ್ಯ ಸರ್ಕಾರಗಳು ಈಗಾಲೇ ಹೆಣಗಾಡುತ್ತಿವೆ. ಇದ್ದ ಬದ್ದ ಹಣವನ್ನೆಲ್ಲಾ ಈಗಾಗಲೇ ಖರ್ಚುಮಾಡಿ ಮುಗಿಸಿರುವುದರಿಂದ ವರ್ಷದ ಉಳಿದ ಅವಧಿಗೆ ಬೇಕಾಗುವಷ್ಟು ಹಣವಿಲ್ಲ. ಪರಿಣಾಮವಾಗಿ ಜನರಿಗೆ ಒದಗಿಸುವ ಮೂಲ ಸೌಕರ್ಯಗಳು ಕಡಿತಗೊಳ್ಳುತ್ತವೆ. ಸೇವೆಗಳ ಕೊರತೆಯ ಪರಿಣಾಮವಾಗಿ ಜನರು ತೊಂದರೆ ಅನುಭವಿಸಬೇಕಾಗುತ್ತದೆ.


ದೇವರ ಶಾಪವಲ್ಲ–ಜನಗಳಿಗೆ ನೆರವಿನ ಕೊರತೆ

ಇದ್ಯಾವುದೂ ಬೇಕಿರಲಿಲ್ಲ. ಇದೇನೂ "ದೇವರು ಕೊಟ್ಟ" ಶಾಪವಲ್ಲ. ಸರಿಯಾದ ನೀತಿಗಳನ್ನು ಅನುಸರಿಸುವ ಮೂಲಕ ಇದೆಲ್ಲವನ್ನೂ ತಡೆಬಹುದಾಗಿತ್ತು. ಈ ಭಯಾನಕ ಪ್ರವೃತ್ತಿಯನ್ನು ಈಗಲೂ ಹಿಮ್ಮೆಟ್ಟಿಸಬಹುದು. ಕೇಂದ್ರ ಸರ್ಕಾರವು ತಕ್ಷಣವೇ ಒಂದು ಬೃಹತ್ ಪ್ರಮಾಣದ ಹಣಕಾಸು ಪ್ಯಾಕೇಜ್ ಒದಗಿಸಬೇಕು. ಅದರಿಂದ ಜನರಿಗೆ ನಿಜಕ್ಕೂ ಹಣ ಲಭ್ಯವಾಗುವಂತಿರಬೇಕು, ತುಟಿಗೆ ತುಸು ತುಪ್ಪ ಸವರುವ ಭರವಸೆಗಳಲ್ಲ.

ಅಂಥಹ ಒಂದು ಪ್ಯಾಕೇಜ್ ಈ ಕೆಲವು ಅಂಶಗಳನ್ನು ಒಳಗೊಂಡಿರಬೇಕು:

* ರಾಜ್ಯಗಳ ಸರ್ಕಾರಗಳಿಗೆ ಕೊಡಬೇಕಿರುವ ಜಿಎಸ್‌ಟಿ ಪರಿಹಾರ ಸೆಸ್‌ನ ಬಾಕಿಯನ್ನು ಕೊಡಬೇಕು;
* ಕೊರೋನಾ ಸಾಂಕ್ರಾಮಿಕ ಮತ್ತು ಅದರ ಪರಿಣಾಮಗಳನ್ನು ನಿಭಾಯಿಸಲು ಹೆಚ್ಚಿನ ಹಣಕಾಸು ನೆರವನ್ನು ಒದಗಿಸಬೇಕು.;
* ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು. ಈ ವ್ಯವಸ್ಥೆಯ ಮೂಲಕ ಅಗತ್ಯವಿರುವ ಪ್ರತಿ ಕುಟುಂಬಕ್ಕೂ ತಿಂಗಳಿಗೆ 10 ಕೆ.ಜಿಯಷ್ಟು ಆಹಾರಧಾನ್ಯಗಳನ್ನು ಮುಂದಿನ ಆರು ತಿಂಗಳವರೆಗೆ ಉಚಿತವಾಗಿ ಒದಗಿಸಬೇಕು;
* ನಿರ್ದಯವಾದ ಲಾಕ್ ಡೌನ್ ಅವಧಿಯಲ್ಲಿ ಕಳೆದುಕೊಂಡ ಆದಾಯಗಳಿಗೆ ಪರಿಹಾರವಾಗಿ ಪ್ರತಿ ಕುಟುಂಬಕ್ಕೂ ತಿಂಗಳಿಗೆ ರೂ. 7000ದಂತೆ ಮೂರು ತಿಂಗಳ ಕಾಲ ನೀಡಬೇಕು;
* ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯ ಪ್ರಕಾರ ಉದ್ಯೋಗ ನೀಡುವ ಮಿತಿಯನ್ನು ಕೊನೆಯಪಕ್ಷ ಈ ವರ್ಷಕ್ಕಾದರೂ 200 ದಿನಗಳಿಗೆ ಏರಿಸಬೇಕು;
* ಇದೇ ರೀತಿಯ ಉದ್ಯೋಗ ಖಾತರಿ ಯೋಜನೆಯನ್ನು ನಗರ ಪ್ರದೇಶಗಳಲ್ಲೂ ಆರಂಭಿಸಬೇಕು;
* ಸಾಲ ತೀರಿಸುವ ಕಾಲಾವಧಿಯನ್ನು (ಮೊರಟೋರಿಯಂ) ವಿಸ್ತರಿಸಬೇಕು ಮತ್ತು ಆ ಅವಧಿಯನ್ನು ಸ್ಥಗಿತ ಎಂದು ಪರಿಗಣಿಸಿ ಆ ಅವಧಿಗೆ ಬಡ್ಡಿ ಹಾಕಬಾರದು.;
* ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಮಟ್ಟದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಮತ್ತು ರೈತರಿಗೆ ಹೊಸ ಸಾಲಗಳು ದೊರಕುವಂತೆ ನೋಡಿಕೊಳ್ಳಬೇಕು.;
* ಆರೋಗ್ಯ ಕಾಪಾಡುವ ಉದ್ದೇಶಕ್ಕಾಗಿ ಒಂದು ಸಮರ್ಪಿತ ಸಂಪನ್ಮೂಲಗಳನ್ನು ಒದಗಿಸಬೇಕು. ಸಾಂಕ್ರಾಮಿಕ ಸೋಂಕಿತರಿಗೆ ಔಷಧೋಪಚಾರಗಳಿಗೆ ಅಗತ್ಯವಿರುವ ಹಣ ಒದಗಿಸಬೇಕು. ಕಳೆದ ಐದು ತಿಂಗಳಿನಿಂದ ನಿರ್ಲಕ್ಷಿಸಲ್ಪಟ್ಟ ಅಥವಾ ಮುಂದೂಡಲ್ಪಟ್ಟ ಜನರ ಇತರ ಆರೋಗ್ಯ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸಬೇಕು.

ಈ ಎಲ್ಲ ಕಾರ್ಯಗಳಿಗೆ ಹಣ ಖರ್ಚಾಗುತ್ತದೆ, ನಿಜ. ಆದರೆ, ಈ ಕಾರ್ಯಗಳನ್ನು ನಿರ್ವಹಿಸದಿದ್ದರೆ ಅದರಿಂದ ಜನರಿಗೆ ಉಂಟಾಗುವ ತೊಂದರೆಗಳು ಮತ್ತು ಅರ್ಥವ್ಯವಸ್ಥೆಗೆ ತಲುಪುವ ಹಾನಿ ಇವೆರಡೂ ಇನ್ನೂ ಹೆಚ್ಚು ದುಬಾರಿಯಾಗಿ ಪರಿಣಮಿಸುತ್ತವೆ. ಜನರಿಗೆ ಅಗತ್ಯವಿರುವ ಕಾರ್ಯಗಳಿಗೆ ಈಗ ಹಣ ವೆಚ್ಚ ಮಾಡದೇ ಇದ್ದರೆ, ಅದೇ ಕಾರಣದಿಂದಾಗಿ ಅರ್ಥವ್ಯವಸ್ಥೆಯು ಇನ್ನೂ ಹೆಚ್ಚು ಆಳವಾದ ಗುಂಡಿಗೆ ಬೀಳುತ್ತದೆ. ಪರಿಣಾಮವಾಗಿ, ಜನರ ವರಮಾನಗಳು ತಗ್ಗುತ್ತವೆ. ಸರ್ಕಾರದ ತೆರಿಗೆ ಆದಾಯವೂ ಇಳಿಯುತ್ತದೆ. ಇದು ಸರ್ಕಾರದ ವೆಚ್ಚಗಳ ಕಡಿತದ ಜೊತೆಗೆ ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯನ್ನೂ ಉಂಟುಮಾಡುತ್ತದೆ. ಸದ್ಯಕ್ಕೆ, ಹೆಚ್ಚುವರಿಯಾದ ಖರ್ಚು ವೆಚ್ಚಗಳಿಗೆ ಬೇಕಾಗುವ ಹಣವನ್ನು ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಸಾಲ ಪಡೆಯಬಹುದು. ಜಗತ್ತಿನಾದ್ಯಂತ ಸರ್ಕಾರಗಳು ತಮ್ಮ ವಿತ್ತೀಯ ಕೊರತೆಯನ್ನು ನೀಗಿಸಿಕೊಳ್ಳಲು ಇದೇ ಕ್ರಮವನ್ನು ಅನುಸರಿಸುತ್ತವೆ. ಈ ಕ್ರಮವನ್ನು ಅನುಸರಿಸುವುದರಿಂದ ಮತ್ತು ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಂಡರೆ, ಹಣದುಬ್ಬರ ಉಂಟಾಗುವುದಿಲ್ಲ. ಏಕೆಂದರೆ, ಸದ್ಯದ ಪರಿಸ್ಥಿತಿಯಲ್ಲಿ ಜನರ ಕೈಯಲ್ಲಿ ಸಾಕಷ್ಟು ಹಣ ಇಲ್ಲದಿರುವುದರಿಂದ ಬೇಡಿಕೆಯು ತುಂಬಾ ಕೆಳ ಮಟ್ಟದಲ್ಲಿದೆ.

ಅಂತಿಮವಾಗಿ, ಬಿಕ್ಕಟ್ಟಿನಿಂದ ಹೊರ ಬರಲು ಇರುವ ಏಕೈಕ ಮಾರ್ಗವೆಂದರೆ, ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ತೆರಿಗೆಗಳಿಂದ ತಪ್ಪಿಸಿಕೊಳ್ಳುತ್ತಿರುವ ಡಿಜಿಟಲ್ ದೈತ್ಯ ಸಂಸ್ಥೆಗಳ ಮೇಲೆ ಸಂಪತ್ತಿನ ತೆರಿಗೆ ಮತ್ತು ಇತರ ತೆರಿಗೆಗಳನ್ನು ಹೇರುವ ಬಗ್ಗೆ ಆಲೋಚಿಸಬೇಕಾಗುತ್ತದೆ. ದಿಟ್ಟ ಚಿಂತನೆ ಮತ್ತು ತುರ್ತು ಕ್ರಮವಹಿಸುವುದೊಂದೇ ದಾರಿ, ಬಿಕ್ಕಟ್ಟಿನಿಂದ ಹೊರಬರಲು.



ಗ್ರೋ ಜಿಡಿಪಿ ಗ್ರೋ!

ವ್ಯಂಗ್ಯಚಿತ್ರ ಕೃಪೆ: ಸಮಿಕ ಅಜೀಜ್/ಫೇಸ್ ಬುಕ್

1959ರ ಚಾರಿತ್ರಿಕ ಬಂಗಾಳ ಆಹಾರ ಚಳುವಳಿ

ಪುಟ 11 ರಿಂದ

ಜನರು ನೀಡಿದ ಸ್ಪಂದನೆ ಸರ್ಕಾರದ ರೋಷಾವೇಶಕ್ಕೆ ಕಾರಣವಾಯಿತು. ಅದು ಆಗಸ್ಟ್ 25 ರಿಂದ ರಾಜ್ಯಾದ್ಯಂತ ಕ್ರೂರ ದಬ್ಬಾಳಿಕೆಯನ್ನು ಶುರುಮಾಡಿತು. ಸೆಪ್ಟೆಂಬರ್ 1 ರಿಂದ ವಿದ್ಯಾರ್ಥಿಗಳು ಈ ಹೋರಾಟದ ಕಣಕ್ಕೆ ಇಳಿದರು ಮತ್ತು ಕಲ್ಕತ್ತಾದಲ್ಲಿನ ಕಾಲೇಜ್ ರಸ್ತೆಯು ಒಂದು ರಣರಂಗವಾಗಿ ಮಾರ್ಪಟ್ಟಿತು. ಆಗಸ್ಟ್ 31 ಮತ್ತು ಸೆಪ್ಟೆಂಬರ್ 4 ರ ನಡುವೆ, ಪೋಲಿಸ್ ಗೋಲಿಬಾರ್ ಮತ್ತು ಲಾಠಿ ಚಾರ್ಜಿನಿಂದ 80 ಕ್ಕೂ ಹೆಚ್ಚು ಜನರು ಸಾವಿಗೀಡಾದರು ಮತ್ತು 3000 ಕ್ಕೂ ಹೆಚ್ಚು ಜನರು ಗಾಯಗೊಂಡರು. ಕನಿಷ್ಠಪಕ್ಷ 200 ಕ್ಕೂ ಹೆಚ್ಚು ಜನ ಕಾಣೆಯಾದರು, ಸಾವಿರಾರು ಜನರನ್ನು ಬಂಧಿಸಿದರು.

ಜನರ ಐಕ್ಯತೆಯನ್ನು ಮುರಿಯುವ ಸಲುವಾಗಿ, ಪೋಲಿಸರು ಕಾರ್ಮಿಕ ವರ್ಗದ ವಸತಿ(ಬಸ್ತಿ) ಪ್ರದೇಶಗಳ ಮೇಲೆ ದಾಳಿ ಮಾಡಿ ಮನೆಯಲ್ಲಿದ್ದವರನ್ನು ತೀವ್ರವಾಗಿ ಹೊಡೆದರು. ಇದರಿಂದ ತೃಪ್ತರಾಗದ ಅವರು, ಈ ಬಸ್ತಿಗಳ ಮೇಲೆ ಅಶ್ರುವಾಯು ಶೆಲ್ಲುಗಳ ದಾಳಿ ಮಾಡಿದರು. ಇವ್ಯಾವುದರಿಂದಲೂ ವಿಚಲಿತರಾಗದ ಇಡೀ ಕಾರ್ಮಿಕ ವರ್ಗ ಸಾರ್ವತ್ರಿಕ ಮುಷ್ಕರದಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿತು. ಪ್ರತಿಯೊಂದು ಕೈಗಾರಿಕಾ ಪ್ರದೇಶಗಳು ಕಾರ್ಮಿಕರು ಸೆಟೆದು ನಿಂತ ತಾಣಗಳಾದವು. ಕಾರ್ಮಿಕ ವರ್ಗದ ಐಕ್ಯತೆಯನ್ನು ಮುರಿಯಲು ಬಂಗಾಲಿ–ಬಿಹಾರಿ ಎಂಬ ಹೆಸರಿನಲ್ಲಿ ಒಡಕನ್ನು ಉಂಟು ಮಾಡಲು ಸಹ ಸರ್ಕಾರ ಪ್ರಯತ್ನಿಸಿತು. ಸರ್ಕಾರ ಅಳವಡಿಸಿದ ಇವ್ಯಾವ ಕ್ರಮಗಳೂ ರೈತರೊಂದಿಗಿನ ಕಾರ್ಮಿಕ ವರ್ಗದ ಸಖ್ಯತೆಯನ್ನು ಒಡೆಯಲಾಗಲಿಲ್ಲ; ಇದು ಈ ಚಳುವಳಿಯ ಅತ್ಯಂತ ಮುಖ್ಯವಾದ ಮತ್ತು ಗಮನಾರ್ಹ ಅಂಶ.

ಬಂಧಿತರಾದವರ ಬಗ್ಗೆ ಅಧ್ಯಯನ ಮಾಡಿದಾಗ ತಿಳಿದಿದ್ದೇನೆಂದರೆ ಅದರಲ್ಲಿ ಶೇಕಡಾ 75ರಷ್ಟು ಜನ ರೈತರಾಗಿದ್ದರು ಮತ್ತು ಉಳಿದವರು ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಮಧ್ಯಮ ವರ್ಗದ ನೌಕರರಾಗಿದ್ದರು. ಬಂಧನಕ್ಕೊಳಗಾದ ಈ ವಿಭಾಗಗಳಲ್ಲಿ ಸಾವಿರಾರು ಮಹಿಳೆಯರೂ ಅದರ ಭಾಗವಾಗಿದ್ದರು.

ಮುಖ್ಯಮಂತ್ರಿ ಬಿ.ಸಿ.ರಾಯ್ ಅವರು ಸ್ವತಃ ನಿಂತು ನಿರ್ದೇಶನ ಮಾಡಿ ನಡೆದ ಪೋಲಿಸ್ ಕ್ರೌರ್ಯಗಳು ಹಿಂದೆಂದೂ ಈ ಮಟ್ಟಕ್ಕೆ ತಲುಪಿರಲಿಲ್ಲ. ಅನೇಕ ಸಂದರ್ಭಗಳಲ್ಲಿ, ಹಿಂತಿರುಗಬಹುದಾದ ಎಲ್ಲಾ ದಾರಿಗಳನ್ನು ಮುಚ್ಚಿದ ಪೋಲಿಸರು, ಮತಪ್ರದರ್ಶನ ಮಾಡುತ್ತಿದ್ದವರನ್ನು ಸುತ್ತುವರಿದು ಅತ್ಯಂತ ಭೀಕರವಾಗಿ ಸದೆಬಡಿದರು. ಜನರಿಗಾದ ಗಾಯಗಳನ್ನು ನೋಡಿದಾಗ, ಪೋಲಿಸರು ಪ್ರತಿಭಟನಾಕಾರರನ್ನು ಕೊಲ್ಲಲೆಂದೇ ಹಾಗೂ ಗಂಭೀರ ಗಾಯ ಮಾಡಲೆಂದೇ ಹೊಡೆದಿದ್ದು ಎಂಬುದು ಸ್ಪಷ್ಟವಾಗಿತ್ತು. ಬಂಧಿಸಲ್ಪಟ್ಟವರನ್ನೂ ಜೈಲಿನಲ್ಲಿ ಅಮಾನುಷ ಕಿರುಕುಳ ಕೊಟ್ಟು ಹಿಂಸಿಸಿದರು. ಇನ್ನೂ ತೀರಾ ಅಸಹ್ಯಕರವಾದದ್ದು, ತಮ್ಮ ಸಾಮೂಹಿಕ ಹತ್ಯೆಯ ಪುರಾವೆಗಳನ್ನು ಅಳಿಸಿಹಾಕಲು ಪೋಲಿಸರು ಬಹಳಷ್ಟು ಹುತಾತ್ಮರ ಶವಗಳನ್ನು ಮಧ್ಯರಾತ್ರಿ ಸುಟ್ಟುಹಾಕಿದರು. ಇಡೀ ಕಲ್ಕತ್ತಾ ಹಾಗೂ ಹೌರಾದ ಪ್ರದೇಶಗಳು ಇಂತಹ ಘೋರ 'ಸ್ವಚ್ಛಗೊಳಿಸುವ' ಕಾರ್ಯಾಚರಣೆಗಳ ದೃಶ್ಯಗಳಿಂದ ತುಂಬಿಹೋಗಿದ್ದವು.

ಈ ಎಲ್ಲಾ ಹೋರಾಟಗಳ ಉದ್ದಕ್ಕೂ ಕಮ್ಯುನಿಸ್ಟ್ ಪಕ್ಷವು ವೀರೋಚಿತ ಪಾತ್ರವನ್ನು ವಹಿಸಿತು. ವಿಶೇಷವಾಗಿ ಗಮನಾರ್ಹ ಪಾತ್ರ ವಹಿಸಿದ್ದು ಪಕ್ಷದ ಪತ್ರಿಕೆ **ಸ್ವಾಧೀನತಾ**. ಪತ್ರಿಕೆಯಲ್ಲಿ ಮತ್ತು ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿದ್ದ ಸಂಗಾತಿಗಳು ಪತ್ರಿಕೆಯನ್ನು ನಿಜವಾದ ಜನರ ಮುಖವಾಣಿಯಾಗಿ ಮತ್ತು ಹೋರಾಟದ ಅತ್ಯಂತ ಶಕ್ತಿಯುತವಾದ ಆಯುಧವನ್ನಾಗಿ ಮಾರ್ಪಾಟು ಮಾಡಿದ್ದರು. ಗಂಭೀರ ಅಪಾಯಗಳನ್ನು ಎದುರಿಸುತ್ತಾ ಆಘಾತಕಾರಿ ವರದಿಗಳನ್ನು ಹಾಗೂ ಪೋಲಿಸರ ಭೀಕರ ದೌರ್ಜನ್ಯದ ಫೋಟೋಗಳನ್ನು ಅವರು ಸಂಗ್ರಹಿಸಿದರು ಮತ್ತು ಪತ್ರಿಕೆಯಲ್ಲಿ ಮುದ್ರಿಸಿ ಜನರನ್ನು ಕಾರ್ಯಾಚರಣೆಗೆ ಹುರಿದುಂಬಿಸುತ್ತಿದ್ದರು.

ಬಂಗಾಳದ ಜನರ ಹೋರಾಟವನ್ನು ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಮೆಚ್ಚಿಕೊಂಡಿತು ಮತ್ತು ದೇಶಾದ್ಯಂತ ಸೌಹಾರ್ದ ಪ್ರಚಾರ ನಡೆಸಲು ಕರೆ ನೀಡಿತು. ಕಾಂಗ್ರೆಸ್ ಸರ್ಕಾರದ ದುಷ್ಕಾರ್ಯವು ದೇಶದೆಲ್ಲೆಡೆಯ ಜನರ ಖಂಡನೆಗೆ ತುತ್ತಾಯಿತು. ಅದೇ ಸಮಯದಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು 'ಪ್ರಜಾಪ್ರಭುತ್ವದ ರಕ್ಷಣೆಗಾಗಿ' ಎಂಬ ನೆಪವೊಡ್ಡಿ ವಜಾ ಮಾಡುವುದರ ಮೂಲಕ ಕಾಂಗ್ರೆಸ್ ತನ್ನ ವರ್ಗ ಗುಣವನ್ನು ಇನ್ನೂ ಬಹಿರಂಗಗೊಳಿಸಿ ಕೊಂಡಿತು. ಮತ್ತೊಂದೆಡೆ, ಬಂಗಾಳದಲ್ಲಿ, ಅದೇ ಕಾಂಗ್ರೆಸ್ ಸರ್ಕಾರವು ಜನರ ಹಕ್ಕುಗಳನ್ನು ನಿರ್ಭೀತಿಯಿಂದ ತುಳಿಯುವುದರ ಮೂಲಕ ಪ್ರಜಾಪ್ರಭುತ್ವ ತತ್ವಗಳನ್ನು ಉಲ್ಲಂಘಿಸಿತು.

ಕಾಂಗ್ರೆಸ್ಸಿನ ಬೂಟಾಟಿಕೆ ಬಯಲಾಗು ವುದರೊಂದಿಗೆ, ಅದಕ್ಕೆ ವ್ಯತಿರಿಕ್ತವಾಗಿ ಅದಕ್ಕೂ ಮತ್ತು ಕಮ್ಯುನಿಸ್ಟ್ ಪಕ್ಷಕ್ಕೂ ಇದ್ದ ವ್ಯತ್ಯಾಸ ಹಿಂದೆಂದಿಗಿಂತಲೂ ಹೆಚ್ಚಾಗಿ ಎಲ್ಲರ ಕಣ್ಣಿಗೆ ರಾಚುವಂತಾಯಿತು. 1959ರ ಆಹಾರ ಚಳುವಳಿಯು ಭಾರತ ಕಮ್ಯುನಿಸ್ಟ್ ಪಕ್ಷದೊಳಗಿನ ಆಂತರಿಕ ಚರ್ಚೆಯ, ಬಹು ಮುಖ್ಯವಾಗಿ ಕಾಂಗ್ರೆಸ್ ಪಕ್ಷದ ಬಗೆಗಿನ ಧೋರಣೆಯ ಕುರಿತ ಚರ್ಚೆಯ, ಮೇಲೂ ಪ್ರಭಾವ ಬೀರಿತು.

ಸೆಪ್ಟೆಂಬರ್ 26, 1959 ರಂದು ಆಹಾರ ಚಳುವಳಿಯನ್ನು ಹಿಂದಕ್ಕೆ ಪಡೆಯುವ ನಿರ್ಧಾರವನ್ನು ಪಿಐಎಫ್‌ಆರ್‌ಸಿಯು ಔಪಚಾರಿಕವಾಗಿ ಪ್ರಕಟಿಸಿತು; ಅಂದು ಹುತಾತ್ಮರ ಶಾಶ್ವತ ಸ್ಥಂಭಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಒಂದು ಅವಿಸ್ಮರಣೀಯ ಮೌನ ಮೆರವಣಿಗೆಯನ್ನು ಕಲ್ಕತ್ತಾದಲ್ಲಿ ನಡೆಸಿ ಪೋಲಿಸ್ ದೌರ್ಜನ್ಯ ಕುರಿತು ಸಾರ್ವಜನಕ ವಿಚಾರಣೆ ನಡೆಸಬೇಕೆಂದು, ಹುತಾತ್ಮರಿಗೆ ಸರಿಯಾದ ಪರಿಹಾರ ನೀಡಬೇಕೆಂದು ಮತ್ತು ರಾಜ್ಯದ ಆಹಾರ ಸಚಿವ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಲಾಯಿತು.

ಆಹಾರ ಚಳುವಳಿಯ ಕಲಿತನದ ಸತ್ವವು ಮತ್ತು ಅದರ ಮಾರ್ದನಿಯು ಇಂದಿಗೂ ಕೇಳಿಸುತ್ತಿದೆ.

ಇರಾನ್ ಮೇಲೆ ದಿಗ್ಬಂಧನಕ್ಕೆ ಯತ್ನ: ಅಮೆರಿಕಕ್ಕೆ ಮುಖಭಂಗ

ನಾಗರಾಜ ನಂಜುಂಡಯ್ಯ

ಇರಾನ್ 2015ರ ಅಣು ಒಪ್ಪಂದವನ್ನು ಉಲ್ಲಂಘಿಸಿದೆ. ಹಾಗಾಗಿ ಮತ್ತೆ ಇರಾನ್ ಮೇಲೆ ದಿಗ್ಬಂದನ ಹೇರಬೇಕು ಎಂದು ಯು.ಎಸ್. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಇನ್ನಿಲ್ಲದ ಪ್ರಯತ್ನ ನಡೆಸಿತು. ಆದರೆ ಭದ್ರತಾ ಮಂಡಳಿಯಲ್ಲಿ ಈ ಕುರಿತ ಪ್ರಸ್ತಾವದ ಮೇಲೆ ಮತದಾನ ನಡೆದು ಅದು ಹೀನಾಯವಾಗಿ ಸೋತಿತು. ಈ ಸೋಲಿನಿಂದ ಟ್ರಂಪ್ ಗೆ ಮುಖಭಂಗ ಉಂಟಾಗಿದೆ. ಭದ್ರತಾ ಮಂಡಳಿಯ ಆ ಸಭೆಯಲ್ಲಿ ಭಾಗವಹಿಸಿದ್ದ 14 ದೇಶಗಳ ಸದಸ್ಯರಲ್ಲಿ, ಫ್ರಾನ್ಸ್ ಜರ್ಮನಿ ಮತ್ತು ಯುಕೆ ಯಂತಹ, ಯುಎಸ್ ನ ಆಪ್ತ ಮಿತ್ರ ರಾಷ್ಟಗಳು ಸೇರಿದಂತೆ 11 ಸದಸ್ಯರು ಮತದಾನದಲ್ಲಿ ಭಾಗವಹಿಸಲಿಲ್ಲ. ರಷ್ಯಾ ಮತ್ತು ಚೀನಾಗಳು ಯು.ಎಸ್ ನ ಪ್ರಸ್ತಾವವನ್ನು ವಿರೋಧಿಸಿದವು. ಯು.ಎಸ್ ಗೆ ತನ್ನದೇ ಬಿಟ್ಟು ಒಂದು ಮತವೂ ಸಿಗಲಿಲ್ಲ. ಇರಾನ್ ಮೇಲಿನ ದಿಗ್ಬಂದನವನ್ನು ಮತ್ತೆ ಹೇರುವ ಯುಎಸ್ ನ ಯತ್ನಕ್ಕೆ ಸೋಲನ್ನು, ಇರಾನ್ ಇದನ್ನು ರಾಜತಾಂತ್ರಿಕ ಗೆಲುವು ಮತ್ತು ಅಂತರಾಷ್ಟೀಯ ರಾಜಕೀಯ ದಲ್ಲಿ ಯು.ಎಸ್ ಒಂಟಿತನದ ಸಂಕೇತ ಎಂದು ಹೇಳಿದೆ. ಆದರೆ, ಟ್ರಂಪ್ ಈ ಸೋಲನ್ನು ಒಪ್ಪಿಕೊಳ್ಳಲು ನಿರಾಕರಿಸಿದ್ದಾರೆ. ಇರಾನ್ ವಿರುದ್ಧ ಗರಿಷ್ಠ ಮಟ್ಟದ ಒತ್ತಡ ಅಭಿಯಾನವನ್ನು ಮುಂದುವರಿಸುವುದಾಗಿ ಟ್ರಂಪ್ ಹೇಳಿದ್ದಾರೆ.



ಇರಾನ್ ವಿರುದ್ದ "ಸ್ನ್ಯಾಪ್-ಬ್ಯಾಕ್" ವಿಧಾನ ವಿಧಿಸಬೇಕೆಂಬುದು ಭದ್ರತಾ ಮಂಡಳಿಗೆ ಅಮೆರಿಕದ ಒತ್ತಾಯವಾಗಿತ್ತು. ಇರಾನ್ 'ಅಣು ಒಪ್ಪಂದ' ಎಂದು ಕರೆಯಲಾಗುವ 'ಜಂಟಿ ಸಮಗ್ರ ಯೋಜನ ಒಪ್ಪಂದ (ಜೆಸಿಪಿಒಎ)ವನ್ನು 'ವಿಶ್ವ ಸಂಸ್ಥೆ ಭದ್ರತಾ ಮಂಡಳಿ ಜುಲೈ 2015 ರಲ್ಲಿ ಅಂಗೀಕರಿಸಿದ ' ನಿರ್ಣಯ ಸಂಖ್ಯೆ 2231 ಮೂಲಕ ಅನುಮೋದಿಸಿತ್ತು. ಈ ನಿರ್ಣಯದ ಪ್ರಕಾರ, ಇರಾನ್ ಗೆ ಪರಮಾಣು ಕಾರ್ಯಕ್ರಮವನ್ನು ನಿಲ್ಲಿಸುತ್ತದೆ. ಇದಕ್ಕೆ ಬದಲಾಗಿ ಶಸ್ತ್ರಾಸ್ತ್ರ ನಿರ್ಬಂಧಗಳು ಸೇರಿದಂತೆ 2006 ರಿಂದ ಇರಾನ್ ಗೆ ವಿಧಿಸಲಾಗಿದ್ದ ಎಲ್ಲಾ ಅಂತರಾಷ್ಟೀಯ ನಿರ್ಬಂಧಗಳನ್ನು ತೆಗೆದು ಹಾಕಬೇಕಿತ್ತು. ಇದಕ್ಕೆ ಆಕ್ಟೋಬರ್ 18,2020 ರವರೆಗೆ ಗಡುವು ನೀಡಲಾಗಿತ್ತು.

ಇರಾನ್ ವಿರುದ್ಧ ಶಸ್ತ್ರಾಸ್ತ್ರ ನಿರ್ಬಂಧವನ್ನು ಮೊದಲು ಭದ್ರತಾ ಮಂಡಳಿ ನಿರ್ಣಯ 1737 ರ ಮೂಲಕ ವಿಧಿಸಲಾಗಿತ್ತು. ಇದನ್ನು ಡಿಸೆಂಬರ್ 2006 ರಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಮಾರ್ಚ್ 2007 ರಲ್ಲಿ ಭದ್ರತಾ ಮಂಡಳಿ ಪುನಃ ಇರಾನ್ ವಿರುದ್ಧ 1747 ರ ನಿರ್ಣಯವನ್ನು ಹೇರಿತು. ಇದನ್ನು ಜೂನ್ 2010 ರಲ್ಲಿ ಕೈಗೊಂಡ ನಿರ್ಣಯ 1929 ರ ಮೂಲಕ ಮತ್ತಷ್ಟು ಗಟ್ಟಿಗೊಳಿಸಲಾಯಿತು. ಈ ನಿರ್ಬಂಧಗಳು ಶಸ್ತ್ರಾಸ್ತ್ರ ಆಮದು ಮತ್ತು ಎಲ್ಲಾ ರೀತಿಯ ಬ್ಯಾಲಿಸ್ಟಿಕ್ ಕ್ಷಿಪಣಿಗಳ ಅಭಿವೃದ್ಧಿ ಸೇರಿದಂತೆ ಶಸ್ತ್ರಾಸ್ತ್ರ ಗಳ ರಫ್ತಿಗೂ ಅನ್ವಯಿಸುತ್ತಿದ್ದವು. ಜೆಸಿಪಿಒಎ ಒಪ್ಪಂದದ ಪ್ರಕಾರ, 5 ರಿಂದ 8 ವರ್ಷಗಳಲ್ಲಿ ಈ ನಿರ್ಬಂಧಗಳನ್ನು ಕ್ರಮೇಣ ತೆಗೆದು ಹಾಕಬೇಕಾಗಿತ್ತು.

ಇರಾನ್ ಒಪ್ಪಂದವನ್ನು ಉಲ್ಲಂಘಿಸುತ್ತಿದೆ. ಹಾಗಾಗಿ ಇರಾನ್ ಮೇಲೆ ಈ ಹಿಂದೆ ಸ್ಥಗಿತಗೊಂಡಿದ್ದ ವಿಶ್ವಸಂಸ್ಥೆಯ ಎಲ್ಲಾ ನಿರ್ಬಂಧಗಳನ್ನು ಪುನಃ ಸ್ಥಾಪಿಸಬೇಕೆಂದು ಟ್ರಂಪ್ ಒತ್ತಾಯಿಸಿದರು. ಯುಎಸ್ ವಿದೇಶಾಂಗ ಕಾರ್ಯದರ್ಶಿ ಮೈಕ್ ಪ್ಯಾಂಪಿಯೊ ನಿರ್ಣಯದಲ್ಲಿ ಇರುವ "ಸ್ನ್ಯಾಪ್ ಬ್ಯಾಕ್" ವಿಧಾನವನ್ನು ವಿಧಿಸಬೇಕೆಂದು ಆಗಸ್ಟ್ 20 ರಂದು ಪ್ರಕಟಿಸಿದರು. ಒಪ್ಪಂದಕ್ಕೆ ಸಹಿ ಹಾಕಿದ ಯಾವುದೇ ದೇಶಕ್ಕೆ ಒಪ್ಪಂದವನ್ನು ಉಲ್ಲಂಘಿಸಲಾಗುತ್ತಿದೆ ಎಂದು ಅನಿಸಿದರೆ "ಸ್ನ್ಯಾಪ್ ಬ್ಯಾಕ್" ವಿಧಾನವನ್ನು ವಿಧಿಸಲು ಒತ್ತಾಯಿಸಬಹುದು. ಇಂತಹ ಒತ್ತಾಯ ಬಂದ 30 ದಿನಗಳೊಳಗಾಗಿ ಮಂಡಳಿ ಅದನ್ನು ನಿರಾಕರಿಸುವ ನಿರ್ಣಯ ತೆಗೆದುಕೊಳ್ಳದಿದ್ದರೆ ಹಿಂದಿನ ದಿಗ್ಬಂಧನ ಪುನಃ ಲಾಗೂ ಆಗುತ್ತದೆ.

ಮಂಡಳಿಯ ಅಧ್ಯಕ್ಷ ಡಯಾನ್ ಟ್ರಿಸ್ಯಾಯಜ ಜಿಜಿಸ್ ರವರು "ಇರಾನ್ ವಿರುದ್ಧ ನಿರ್ಬಂಧಗಳ ಮೇಲೆ "ಸ್ನ್ಯಾಪ್ ಬ್ಯಾಕ್" ಕಾರ್ಯ ವಿಧಾನದ ಅಧಿಸೂಚನೆಯ ಬಗ್ಗೆ ಸದಸ್ಯರಲ್ಲಿ ಒಮ್ಮತವಿಲ್ಲ ಹೇಳಿದ್ದಾರೆ. ಮಂಡಳಿಯ ಬಹುತೇಕ ಸದಸ್ಯರ ಪ್ರಕಾರ, ಜೆಸಿಪಿಒಎ ಪರಮಾಣು ಒಪ್ಪಂದವನ್ನು ಅನುಮೋದಿಸಿದ ಭದ್ರತಾ ಮಂಡಳಿಯ ನಿರ್ಣಯ 2231 ರಲ್ಲಿ ಪ್ರಕಟಿಸಿದಂತೆ, ಇರಾನ್ ಮೇಲೆ ಯುಎಸ್ ಗೆ "ಸ್ನ್ಯಾಪ್ ಬ್ಯಾಕ್" ಹೇರಲು ಯಾವುದೇ ಹಕ್ಕು ಹೊಂದಿಲ್ಲ, ಏಕೆಂದರೆ ಯು.ಎಸ್ ಏಕಪಕ್ಷೀಯವಾಗಿ ಒಪ್ಪಂದದಿಂದ ಹೊರ ಬಂದಿದೆ. ಹಾಗಾಗಿ, ವಿಶ್ವ ಸಂಸ್ಥೆ ಯ ಭದ್ರತಾ ಮಂಡಳಿಯು, ಯು.ಎಸ್ ಅಧಿಸೂಚನೆಯ ಬಗ್ಗೆ ಯಾವುದೇ ಕ್ರಮ ವಹಿಸಲು ಸಾಧ್ಯವಿಲ್ಲ ಎಂದು ಅಧ್ಯಕ್ಷ ಡಯಾನ ನಿರ್ಧರಿಸಿದರು.

ಒಟ್ಟಾರೆಯಾಗಿ ಇರಾನ್ ಮೇಲೆ ಮತ್ತೆ ದಿಗ್ಬಂಧನ ಹೊರಿಸುವ, ಇಲ್ಲದಿದ್ದರೆ ಅದರ ಮೇಲೆ ಯುದ್ಧ ಹೂಡುವ ಅಮೆರಿಕದ ಹಠವನ್ನು ತಿರಸ್ಕರಿಸುವ ಅಂತರಾಷ್ಟೀಯ ಸಮುದಾಯದ ಕರೆಯನ್ನು ಭದ್ರತಾ ಮಂಡಳಿಯ ಎತ್ತಿ ಹಿಡಿದಿದೆ. ಇದರಿಂದ ಅಂತರಾಷ್ಟೀಯ ವಾಗಿ ಯು.ಎಸ್ ಮತ್ತೊಮ್ಮೆ ಒಂಟಿಯಾಗಿ ಅವಮಾನ ಪಡುವಂತಾಗಿದೆ. ಟ್ರಂಪ್ ಗೆ ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಭದ್ರತಾ ಮಂಡಳಿಯ ಈ ನಿರ್ಧಾರ ಎಷ್ಟರ ಮಟ್ಟಿಗೆ ಮುಳುವಾಗಬಲ್ಲದು ಕಾದು ನೋಡಬೇಕು ?

ಓದುಗರ ಬರಹಗಳಿಗೆ ಆಹ್ವಾನ
ಕೊರೊನಾ ಕಾಲದ ಮರೆಯಲಾಗದ ಅನುಭವ ಕಥನ

ಕೊರೊನಾ ಕಾಲ ಎಲ್ಲರನ್ನೂ ಒಂದಲ್ಲ ಒಂದು ರೀತಿಯಲ್ಲಿ ತಟ್ಟಿದೆ. ಕೊರೊನಾಗೆ ತುತ್ತಾದವರನ್ನು, ಕೊರೊನಾ ವಿರುದ್ಧ ಹೋರಾಡಿದ ಮುಂಚೂಣಿಯ ಯೋಧರನ್ನು, ಲಾಕ್ ಡೌನ್ ನ ಪರಿಣಾಮವಾಗಿ ವಿವಿಧ ರೀತಿಯಲ್ಲಿ ಸಂಕಟಕ್ಕೆ ಒಳಗಾಗಿ ನರಳಿದವರನ್ನು, ಇವರ ನೋವನ್ನು ಹಂಚಿಕೊಂಡ ನಿಕಟವರ್ತಿಗಳನ್ನು, ಈ ಮಾನವೀಯ ಬಿಕ್ಕಟ್ಟಿನ ಪರಿಹಾರಕ್ಕೆ ದುಡಿದವರನ್ನು – ಹಲವು ಬಗೆಯ ವ್ಯಕ್ತ ಅವ್ಯಕ್ತ ನೆಲೆಯ ಮರೆಯಲಾಗದ ಅನುಭವಗಳು ತಟ್ಟಿವೆ. ನೋವು, ಸಂಕಟ ಭೀತಿ ವಿಹ್ವಲತೆ, ಅರಿವಿಗೇ ಸಿಗದ ಕಸಿವಿಸಿಗಳು ಎಲ್ಲರನ್ನೂ ಕಾಡಿವೆ. ಲಾಕ್ ಡೌನ್ ಕಾಲದ ದುಡಿಯುವ ಜನರ ಸಂಕಟಗಳಂತೂ ಪದ ವಿವರಣೆಯ ಅಳತೆ ಮೀರಿದ್ದಾಗಿತ್ತು.

ನಾವು ಕಂಡ ಕೇಳಿದ ಅನುಭವಿಸಿದ ಅನುಭವದ ಕೆಲವು ತುಣುಕುಗಳನ್ನು ಬರೆಯುವ ಮೂಲಕ ದಾಖಲಿಸೋಣ. ಇದು ಜನಶಕ್ತಿ ಮಿಡಿಯಾದ ಆಹ್ವಾನ. ಆಯ್ದ ಬರಹಗಳನ್ನು ಪ್ರಕಟಿಸುತ್ತೇವೆ.

ಬರಹವನ್ನು 20 ಸೆಪ್ಟೆಂಬರ್ 2020 ಒಳಗೆ ಕಳಿಸಿ

* ಬರಹ 500 ಪದಗಳನ್ನು ಮೀರದಿರಲಿ
* ನುಡಿ ಅಥವ ಯುನಿಕೋಡ್ ತಂತ್ರಾಂಶದಲ್ಲಿರಲಿ
* ಪ್ರತ್ಯೇಕ ಫೈಲಿನಲ್ಲಿ ನಿಮ್ಮ ಹೆಸರು ಅಂಚೆ ವಿಳಾಸ, ಮೊಬೈಲ್/ವಾಟ್ಸಪ್ ನಂಬರ್, ಈ ಮೇಲ್ ವಿಳಾಸ ಒದಗಿಸಿ. ಇತ್ತೀಚೆಗಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ನೂರು ಪದ ಮೀರದಂತೆ ಕಿರು ಪರಿಚಯವನ್ನು ಕಳುಹಿಸಿ.
* ಬರಹ ಮತ್ತು ಕಿರುಪರಿಚಯವನ್ನು anubhava@janashakthimedia.com ಗೆ ಈ ಮೈಲ್‌ನಲ್ಲಿ ಕಳಿಸಿ

ಸಂಪರ್ಕ : #12, 18ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು– 560027

janashakthimedia@gmail.com 080-4153 0894, 94494 88464, 94492 60183



ಸಿಂಧಗಿ ತಾಲ್ಲೂಕಿನ ಬೂದಿ ನಾಳ ಪಿ.ಎಚ್ ಗ್ರಾಮದ ಅನಿಲ್ ಇಂಗಳಗಿ ಎಂಬ ದಲಿತ ಯುವಕನನ್ನು, ಮಲ್ಲಿಕಾರ್ಜುನ ದೇವಸ್ಥಾನ ದ ಕಟ್ಟೆಯ ಮೇಲೆ ಮೇಲ್ಜಾತಿಯ ಜನರ ಸಮನಾಗಿ ಕುಳಿತನೆಂಬ ಕಾರಣಕ್ಕೆ ಇವನೊಬ್ಬ ಅಸ್ಪೃಶ್ಯ ನೆಂದು ಕೊಲೆಗೈದಿದ್ದ ಪ್ರಕರಣದ ವಿರುದ್ಧ, ಬೆಂಗಳೂರು ಪೂರ್ವ ವಲಯದ ಡಿಎಚ್ಎಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ತಹಸಿಲ್ದಾರ್ ರವರಿಗೆ ಮನವಿ ಸಲ್ಲಿಸಲಾಯಿತು. ವಲಯ ಸಂಚಾಲಕ ರಾದ, ಶರಣಪ್ಪ.ಟಿ.ವಾಲಿ, ಡಿ ಎಸ್ ಎಮ್ ಎಮ್ ನ ರಾಷ್ಟೀಯ ಸದಸ್ಯರಾದ ನಾಗರಾಜ ನಂಜುಂಡಯ್ಯ, ಪಿ.ಮುನಿರಾಜು, ಬಿಎನ್ ಶ್ರೀನಿವಾಸ್, ಸಿ.ರಮೇಶ್ ಹಾಗೂ ಜಿ.ವೆಂಕಟೇಶ್ ಮನವಿ ಸಲ್ಲಿಸುವ ನಿಯೋಗದಲ್ಲಿ ಇದ್ದರು.

ಫೋಟೊ ಮತ್ತು ಕಿರುವಿಡಿಯೊ ಸ್ಪರ್ಧೆ

ಕೊರೊನಾ ಕಾಲವನ್ನು ಸೆರೆಹಿಡಿದ ಫೋಟೊ ಕಿರುವಿಡಿಯೊ
ಕೊನೆಯ ದಿನಾಂಕ 20 ಸೆಪ್ಟೆಂಬರ್ 2020

ಸ್ಪರ್ಧೆಯ ನಿಯಮಗಳು:

* ಫೋಟೊ ಮತ್ತು ಕಿರುವಿಡಿಯೊಗಳು ಸ್ವತಂತ್ರ ರಚನೆಗಳಾಗಿರಬೇಕು. ಒಬ್ಬರು ತಲಾ ಒಂದು ಫೋಟೊ ಮತ್ತು/ಅಥವಾ ಕಿರುವಿಡಿಯೊ ಮಾತ್ರ ಕಳಿಸಬಹುದು
* ಕಿರುವಿಡಿಯೊ 3 ನಿಮಿಷ ಕಾಲಮಿತಿಯನ್ನು ಮೀರಬಾರದು, 720p ಅಥವಾ 1080p resolution ನಲ್ಲಿ ಮತ್ತು .mp4 format ನಲ್ಲಿ ಇರಬೇಕು
* ಫೋಟೊ .jpeg format ನಲ್ಲಿರಬೇಕು. filesize 5 MB ಮಿತಿಯನ್ನು ಮೀರಬಾರದು. 300 dpi resolution ಮತ್ತು ಉದ್ದವಾದ ಬದಿ ಗರಿಷ್ಠ 1920 pixel ಸೈಜಿನ ವರೆಗೆ ಇರಬಹುದು.
* ಫೋಟೊ ಮತ್ತು ಕಿರುವಿಡಿಯೊಗಳು ಎಲ್ಲೂ ಪ್ರಕಟಿತ ಅಥವಾ ಪ್ರದರ್ಶಿತವಾಗಿರಬಾರದು
* ಪ್ರತ್ಯೇಕ ಫೈಲಿನಲ್ಲಿ ಹೆಸರು ಅಂಚೆ ವಿಳಾಸ, ಫೋನ್ ನಂಬರ್, ಈ ಮೇಲ್ ವಿಳಾಸ ಒದಗಿಸಬೇಕು. ಇತ್ತೀಚೆಗಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ನೂರು ಪದ ಮೀರದಂತೆ ಕಿರು ಪರಿಚಯವನ್ನು ಕಳುಹಿಸಬೇಕು.
* ಫೋಟೊ ಸ್ಪರ್ಧೆಗೆ ಫೋಟೊ ಮತ್ತು ಕಿರುಪರಿಚಯವನ್ನು foto@janashakthimedia.com ಗೆ ಪ್ರತ್ಯೇಕ ಫೈಲುಗಳಲ್ಲಿ ಈ ಮೈಲ್ ಅಥವಾ WeTransfer link ಮೂಲಕ ಮಾತ್ರ ಕಳಿಸಬೇಕು
* ಕಿರುವಿಡಿಯೊ ಸ್ಪರ್ಧೆಗೆ ಕಿರುವಿಡಿಯೊ ಮತ್ತು ಕಿರುಪರಿಚಯವನ್ನು video@janashakthimedia.com ಗೆ ಪ್ರತ್ಯೇಕ ಫೈಲುಗಳಲ್ಲಿ ಈ ಮೈಲ್ ಅಥವಾ WeTransfer link ಮೂಲಕ ಮಾತ್ರ ಕಳಿಸಬೇಕು
* ಜನಶಕ್ತಿ ಮಿಡಿಯಾದ ಸಿಬ್ಬಂದಿ ಹಾಗೂ ಕುಟುಂಬದವರು ಭಾಗವಹಿಸುವಂತಿಲ್ಲ.
* ಸ್ಪರ್ಧೆಗೆ ಕಳುಹಿಸಿದ ರಚನೆಗಳನ್ನು ಹಿಂದಿರುಗಿಸುವುದಿಲ್ಲ.
* ಬಹುಮಾನಿತ ಫೋಟೊ ಮತ್ತು ಕಿರುವಿಡಿಯೊಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕನ್ನು ಜನಶಕ್ತಿ ಮೀಡಿಯಾ ಹೊಂದಿರುತದೆ.
* ಸಂಪಾದಕರ ತೀರ್ಮಾನವೇ ಅಂತಿಮ
* ಸ್ಪರ್ಧೆಗೆ ರಚನೆಗಳನ್ನು ಕಳಿಸಲು ಕೊನೆಯ ದಿನಾಂಕ **20 ಸೆಪ್ಟೆಂಬರ್ 2020**. ನಂತರ ಬಂದವುಗಳನ್ನು ಮತ್ತು ಮೇಲೆ ಹೇಳಿದ ನಿಯಮಗಳನ್ನು ಉಲ್ಲಂಘಿಸುವ ಫೋಟೊ ಮತ್ತು ಕಿರುವಿಡಿಯೊಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ.

JANASHAKTHI KANNADA VARA PATRIKE September 7-13, 2020 Price: Rs. 10/- Date of Publication: 4 September 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21



ವೆಬ್ ಪತ್ರಿಕೆ ಲೋಕಾರ್ಪಣೆ

ಜನಶಕ್ತಿ ಮೀಡಿಯಾ ವೆಬ್, ಫೇಸ್ ಬುಕ್, ಪಾಡ್ಕ್ಯಾಸ್ಟ್ ಮತ್ತು ಯೂ ಟ್ಯೂಬ್ ಚಾನೆಲುಗಳು ಈಗಾಗಲೇ ಸಕ್ರಿಯವಾಗಿವೆ. ಜನಶಕ್ತಿ ಮಿಡಿಯಾ ವೆಬ್ ಪತ್ರಿಕೆಯನ್ನು ಹೊಸ ವಿನ್ಯಾಸದೊಂದಿಗೆ ಪ್ರಕಟಿಸುವ ಸಿದ್ಧತೆ ನಡೆದಿದೆ. ವೆಬ್ ಪತ್ರಿಕೆಯಲ್ಲಿ ಪ್ರಸಕ್ತ ವಿದ್ಯಮಾನಗಳ ವಸ್ತುನಿಷ್ಠ ವರದಿ, ಟೀಕೆ ಟಿಪ್ಪಣಿ ವಿಮರ್ಶೆಗಳಿರುತ್ತವೆ. ಇದು ರಾಜ್ಯ, ರಾಷ್ಟ್ರ ಮತ್ತು ಅಂತರ್ರಾಷ್ಟ್ರೀಯ ಮಟ್ಟದ ಚಿಂತಕರ, ಪರಿಣತರ, ಬರಹಗಾರರ, ಪತ್ರಕರ್ತರ ವೈವಿಧ್ಯಮಯ ಅಭಿಪ್ರಾಯಗಳಿಗೆ ವೇದಿಕೆಯಾಗಿರುತ್ತದೆ. ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ವಿಜ್ಞಾನ–ತಂತ್ರಜ್ಞಾನ ಇತ್ಯಾದಿ ವಿಷಯಗಳ ಕುರಿತು ವಿಶ್ಲೇಷಣಾತ್ಮಕ ಲೇಖನಗಳಿಗೂ ಇದೊಂದು ತಾಣವಾಗಲಿದೆ.. ಕತೆ, ಕವಿತೆ, ಸಿನಿಮಾ, ರಂಗಭೂಮಿ ಮುಂತಾದ ಸಾಂಸ್ಕೃತಿಕ ಅಭಿವ್ಯಕ್ತಿ ಮತ್ತು ಅವುಗಳ ವಿಮರ್ಶೆಗೂ ಇದು ತೆರೆದಿರುತ್ತದೆ.

ಸರಕಾರಗಳ, ಆಳುವವರ ದಮನಕಾರಿ ನೀತಿಗಳಿಗೆ ಪ್ರತಿರೋಧ ಒಡ್ಡುತ್ತಿರುವ ರೈತ, ಕೂಲಿಕಾರ, ಕಾರ್ಮಿಕ, ಮಹಿಳೆ, ವಿದ್ಯಾರ್ಥಿ, ಯುವಜನರ, ಎಲ್ಲ ಜನರ ಚಳುವಳಿಗಳ ವರದಿಗಳಿಗೆ ಇಲ್ಲಿ ವಿಶೇಷ ಅವಕಾಶಗಳಿರುತ್ತವೆ. ಮುಖ್ಯವಾಹಿನಿ ಮತ್ತು ಗಟರ್ ಸಾಮಾಜಿಕ ಮಾಧ್ಯಮಗಳು, ಸಹಮತ, ಬದಲಿ ಸತ್ಯ, ಬದಲಿ ವಾಸ್ತವ – ಇವುಗಳ ಸಾಮೂಹಿಕ ಉತ್ಪಾದನೆಯಲ್ಲಿ ತೊಡಗಿವೆ. ಆಳುವವರ ಪರವಾದ, ಅವರ ಯಜಮಾನಿಕೆಯನ್ನು ಬಲಪಡಿಸುವ ಮತ್ತು ಜನವಿರೋಧಿಯಾದ ಇವುಗಳ ಫೇಕ್ ಪ್ರಚಾರವನ್ನು ಬಯಲಿಗೆಳೆಯಲಾಗುತ್ತದೆ. ಇಂತಹ ಬದಲಿ ಮಾಧ್ಯಮದ ಪಾತ್ರವನ್ನು ನಿರ್ವಹಿಸಲು ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆ ಮತ್ತು ಅದರ ಇತರ ವಾಹಿನಿಗಳು ಮುಂದಾಗಿವೆ.

ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆಯು ಸೆಪ್ಟೆಂಬರ್ 15ರಿಂದ ಅಕ್ಟೋಬರ್ 15ರ ವರೆಗಿನ ಅವಧಿಯಲ್ಲಿ ಬರಹ ಮತ್ತು ವೆಬಿನಾರುಗಳ ಸರಣಿಯ ಮೂಲಕ ಲೋಕಾರ್ಪಣೆಗೊಳ್ಳಲಿದೆ.

"ಕರ್ನಾಟಕ 2020: ಕೊರೊನಾ ಕಾಲದಲ್ಲಿ ಮತ್ತು ನಂತರ" ಈ ಲೋಕಾರ್ಪಣೆಯ ಸರಣಿ ಕಾರ್ಯಕ್ರಮಗಳ ಸಾಮಾನ್ಯ ಥೀಮ್ ಆಗಿರುತ್ತದೆ. ಈ ಥೀಮ್ ಮತ್ತು ಈ ಕೆಳಗಿನ ಉಪ–ಥೀಮ್ ಗಳ ಸುತ್ತ ಬರಹಗಳನ್ನು ಪ್ರಕಟಿಸಲಾಗುತ್ತದೆ, ವೆಬಿನಾರ್ ನಡೆಸಲಾಗುತ್ತದೆ.

ಸಾರ್ವಜನಿಕ ಆರೋಗ್ಯ : ಕೊರೊನಾ ಕಾಲದಲ್ಲಿ ಮತ್ತು ನಂತರ

ವೈಜ್ಞಾನಿಕ ಮನೋವೃತ್ತಿ : ಕೊರೊನಾ ಕಾಲದಲ್ಲಿ ಮತ್ತು ನಂತರ

ಪ್ರದರ್ಶನ ಕಲೆಗಳು (ನಾಟಕ, ಸಿನಿಮಾ, ಸಂಗೀತ, ನೃತ್ಯ, ಜಾನಪದ) : ಕೊರೊನಾ ಕಾಲದಲ್ಲಿ ಮತ್ತು ನಂತರ

ಮಾನವ ಹಕ್ಕು/ಸ್ವಾತಂತ್ರ್ಯ : ಕೊರೊನಾ ಕಾಲದಲ್ಲಿ ಮತ್ತು ನಂತರ

ಸಾಮಾಜಿಕ ಭದ್ರತೆ : ಕೊರೊನಾ ಕಾಲದಲ್ಲಿ ಮತ್ತು ನಂತರ

'ಪರ್ಯಾಯ ಮಾಧ್ಯಮ ಏಕೆ? ಹೇಗೆ?'

ಇವಲ್ಲದೆ

ಕೊರೊನಾ ಕಾಲದಲ್ಲಿ ಕಾಡಿದ

* ಕವನ/ಹಾಡುಗಳು * ಫೋಟೊಗಳು * ಕಾರ್ಟೂನುಗಳು

ಇವುಗಳ ಸಂಗ್ರಹಗಳನ್ನು ಪ್ರಕಟಿಸಲಾಗುತ್ತದೆ.

ಕೊರೊನಾ ಕಾಲದ ಮರೆಯಲಾಗದ ಅನುಭವ ಕಥನ **– ಓದುಗರ ಬರಹಗಳು**

ಇವುಗಳಲ್ಲಿ ಆಯ್ದ ಬರಹಗಳನ್ನು ಪ್ರಕಟಿಸಲಾಗುತ್ತದೆ.

ಕೊರೊನಾ ಕಾಲಕ್ಕೆ ಸೃಜನಶೀಲ ಸ್ಪಂದನ – ಸ್ಪರ್ಧೆಗಳು

* ಯುವಜನರಿಗೆ ಕತೆ /ಕವನ ಸ್ಪರ್ಧೆ * ಫೊಟೊ ಸ್ಪರ್ಧೆ * ವಿಡಿಯೊ ಸ್ಪರ್ಧೆ

ಇವುಗಳಲ್ಲಿ ಬಹುಮಾನಿತ ಮತ್ತು ಮೆಚ್ಚುಗೆ ಪಡೆವುಗಳನ್ನು ಪ್ರಕಟಿಸಲಾಗುತ್ತದೆ.

ಬನ್ನಿ! ಲೋಕಾರ್ಪಣೆಯ ಸರಣಿ ಕಾರ್ಯಕ್ರಮಗಳಲ್ಲಿ ಕೈಜೋಡಿಸಿ! ಭಾಗವಹಿಸಿ!

ಯುವಜನರಿಗೆ ಕತೆ ಮತ್ತು ಕವನ ಸ್ಪರ್ಧೆ
ಕೊರೊನಾ ಕಾಲದಲ್ಲಿ ಕಾಡಿದ ಕವನ ಮೂಡಿದ ಕತೆ
ಕೊನೆಯ ದಿನಾಂಕ 20 ಸೆಪ್ಟೆಂಬರ್ 2020



ಸ್ಪರ್ಧೆಯ ನಿಯಮಗಳು:

* ಸ್ಪರ್ಧೆಯಲ್ಲಿ ಭಾಗವಹಿಸುವವರು 18 ರಿಂದ 35 ವರ್ಷ ವಯಸ್ಸಿನೊಳಗಿನವರು ಆಗಿರಬೇಕು.
* ಕತೆ ಕವನಗಳು ಸ್ವತಂತ್ರ ರಚನೆಗಳಾಗಿರಬೇಕು. ಒಬ್ಬರು ತಲಾ ಒಂದು ಕತೆ ಮತ್ತು/ಅಥವಾ ಕವನ ಮಾತ್ರ ಕಳಿಸಬಹುದು
* ಕತೆ 2000 ಪದಗಳನ್ನು ಮೀರಬಾರದು
* ಕತೆ ಕವನಗಳು (ಸಾಮಾಜಿಕ ಜಾಲತಾಣ ಹೊರತುಪಡಿಸಿ) ಎಲ್ಲೂ ಪ್ರಕಟಿತವಾಗಿರಬಾರದು
* ಕತೆ ಕವನಗಳು ನುಡಿ ಅಥವ ಯುನಿಕೋಡ್ ತಂತ್ರಾಂಶದಲ್ಲಿರಬೇಕು
* ಕತೆ, ಕವನ, ಕಿರುಪರಿಚಯಗಳನ್ನು ಪ್ರತ್ಯೇಕ ಫೈಲುಗಳಲ್ಲಿ ಈ ಮೈಲ್ ನಲ್ಲಿ ಮಾತ್ರ ಕಳಿಸಬೇಕು.
* ಕತೆ ಕವನ ಬರೆದಿರುವ ಫೈಲಿನಲ್ಲಿ ನಿಮ್ಮ ಹೆಸರು ಮತ್ತು ವಿಳಾಸ ಬರೆಯುವಂತಿಲ್ಲ.
* ಪ್ರತ್ಯೇಕ ಫೈಲಿನಲ್ಲಿ ಹೆಸರು ಅಂಚೆ ವಿಳಾಸ, ಫೋನ್ ನಂಬರ್, ಈ ಮೇಲ್ ವಿಳಾಸ ಒದಗಿಸಬೇಕು. ಇತ್ತೀಚೆಗಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ನೂರು ಪದ ಮೀರದಂತೆ ಕಿರು ಪರಿಚಯವನ್ನು ಕಳುಹಿಸಬೇಕು. ವಯಸ್ಸು ಸೂಚಿಸುವ ಐಡಿ ಒಂದರ ಪ್ರತಿಯನ್ನು ಕಳಿಸಬೇಕು.
* ಕತೆಯ ಸ್ಪರ್ಧೆಗೆ ಕತೆ ಮತ್ತು ಕಿರುಪರಿಚಯವನ್ನು kathe@janashakthimedia.com ಗೆ ಈ ಮೈಲ್ ನಲ್ಲಿ ಕಳಿಸಬೇಕು
* ಕವನದ ಸ್ಪರ್ಧೆಗೆ ಕವನ ಮತ್ತು ಕಿರುಪರಿಚಯವನ್ನು kavana@janashakthimedia.com ಗೆ ಈ ಮೈಲ್ ನಲ್ಲಿ ಕಳಿಸಬೇಕು
* ಜನಶಕ್ತಿ ಮಿಡಿಯಾದ ಸಿಬ್ಬಂದಿ ಹಾಗೂ ಕುಟುಂಬದವರು ಭಾಗವಹಿಸುವಂತಿಲ್ಲ.
* ಸ್ಪರ್ಧೆಗೆ ಕಳುಹಿಸಿದ ರಚನೆಗಳನ್ನು ಹಿಂದಿರುಗಿಸುವುದಿಲ್ಲ.
* ಬಹುಮಾನಿತ ಕತೆ ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕನ್ನು ಜನಶಕ್ತಿ ಮೀಡಿಯಾ ಹೊಂದಿರುತದೆ.
* ಸಂಪಾದಕರ ತೀರ್ಮಾನವೇ ಅಂತಿಮ
* ಸ್ಪರ್ಧೆಗೆ ರಚನೆಗಳನ್ನು ಕಳಿಸಲು ಕೊನೆಯ ದಿನಾಂಕ 20 ಸೆಪ್ಟೆಂಬರ್ 2020. ನಂತರ ಬಂದವುಗಳನ್ನು ಮತ್ತು ಮೇಲೆ ಹೇಳಿದ ನಿಯಮಗಳನ್ನು ಉಲ್ಲಂಘಿಸುವ ಕತೆ ಕವನಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ.



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**